ವಿಜಯನಗರಸಾಮ್ರಾಜ್ಯವು ಸ್ಥಾಪಿತವಾದಂದಿನಿಂದ ಏನೇ ದಿನೇ ಅಭಿವೃದ್ಧಿಯನ್ನು ಹೊಂದಲಿಕ್ಕೆ ಶ್ರೀ ರೇಣುಕಾಚಾರ್ಯರು ಹರಿಹರರಾಯನ ಸ್ವಪ್ನದಲ್ಲಿ ಬಂದು "ನೀನು ಜಗದ್ವಿಖ್ಯಾತನಾದ ಚಂದ್ರಮೌಳೀಶ್ವರಲಿಂಗನನ್ನು ಸೇವಿಸು" ಎಂದು ಅಪ್ಪಣೆ ಕೊಡಿಸಿದುದೇ ಮೂಲಕಾರಣವಾಯಿತು ಅದರಂತೆಯೇ ಹರಿಹರರಾಯನು ಪ್ರತಿ ದಿವಸವೂ ವಿದ್ಯಾರಣ್ಯರಿಂದ ಶ್ರೀ ಚಂದ್ರಮೌಳೀಶ್ವರಲಿಂಗವಾದರೂ ಅವರಿಂದ ಪ್ರಸಾದವನ್ನು ಸ್ವೀಕರಿ ಸುತ್ತ, ಮಹಾನಾವ್ಯಾಮ್ಯವನ್ನು ಸಂಪಾದಿಸಿದನು ಈ ಚಂದ್ರಮೌಳೀಶ್ವರಲಿಂಗವಾದರೂ ಅವರಿಂದಲೇ ಶ್ರೀ ರೇಣುಕಾಚಾರ್ಯರಿಂದ ಆವ್ಯಯಂಕರಾಚಾರ್ಯರಿಗೆ ಅನು ಗ್ರಹೀತವಾಗಿದ್ದು, ಗುರುಪರಂಪರೆಯಿಂದ ವಿದ್ಯಾರಣ್ಯರಿಗೆ ಪ್ರಾಪ್ತವಾಗಿದ್ದಿತು ವಿದ್ಯಾರಣ್ಯರು ಮಹಾಸಾಲ್ರಯವನ್ನಾದ ಈ ಶಿವಲಿಂಗಮೂರ್ತಿಯನ್ನು ಅನಾಧಾರಣಭಕ್ತಿಭಾವದಿಂದ ಪೂಜಿಸುತ್ತಿದ್ದರು. ಈ ಚಂದ್ರಮೌಳೀಶ್ವರ ಲಿಂಗವು ವಿದ್ಯಾರಣ್ಯರಿಗೆ ಹೇಗೆ ಪ್ರಾಪ್ತವಾಯಿತೆಂಬ ವಿಷಯವು "ಶಿವತತ್ತ್ವರತ್ನಾಕರ" ಎಂಬ ಮಹಾ ಗ್ರಂಥದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿರುವದು

(ಮುಂದುವರೆಯುವುದು)

ಆಯುರ್ವೇದಚಿಕಿತ್ಸೆಯು ಧರ್ಮಸಮ್ಮತವು

ವೈಜಾಮ ಕರ್ನಾಟಕದ ಸುಪ್ರಸಿದ್ಧ ರತಡಕುಂದಿ ಹಿರೇಮಠವು ಸ್ಥೂರ್ಣಕಾಲದಿಂದಲೂ ವೈದ್ಯ ಮುತ್ತು ಇನ್ನಿತರ ವಿದ್ಯೆಗಳಲ್ಲಿ ಮುಂದೆಬಂದಿರೆಯೆಂಬುದು ಸರ್ವ ಜನರಿಗೂ ತಿಂದಿರಿಯಸ್ಥೇ ತಾ|| ೧೩-೧೦-೫೦ ನೇ ದಿನದಲ್ಲಿ ಶಿವೈಕ್ಯರಾದ ವೀರಭದ್ರ ವಿಜಯಾಖ್ಯರುಗಳವರು ತಮ್ಮ ಜೀವಿತಕಾಲವಲ್ಲಿ ಅಸಂಖ್ಯಬಡಜನರ ರೋಗ ಗಳನ್ನು ಧರ್ಮಾರ್ಥವಾಗಿ ಚಿಕಿತ್ಸೆಮಾಡಿದ್ದರಲ್ಲದೆ ಎಸ್ಸೋ ಭೂತಪ್ರೇತ ಯಂತ್ರಮಂತ್ರ ಮೊದಲಾದ ವಿದ್ಯೆ ಗಳಲ್ಲಿ ತಮ್ಮ ಜ್ಞಾನಾಕ್ಷತವನ್ನು ತೋರಿಸಿ ಹೋಗಿ ದ್ದಾರೆಂಬದನ್ನು ನಾವೆ ಹೆಚ್ಚಾಗಿ ಹೇಳಬೇಕಾಗಿಲ್ಲ. ವೀರ ಭದ್ರವಿಜಯಾಖ್ಯರುಗಳವರ ತರುವಾಯ ಅವರ ಕೃತೀಯಪುತ್ರರಾದ ನೇ|| ಹಾ|| ಪಂಚಾಕ್ಷರಸ್ವಾಮಿಗಳವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಯಂತ್ರಮಂತ್ರ ಧುರೀಣರೂ, ವೈದ್ಯವಿಪುಣರೂ ಆಗಿದ್ದಾರಲ್ಲದೆ ನಿಜಾಮ ಕರ್ನಾಟಕದಲ್ಲಿ ಗವರ್ನಮೆಂಟಿನ ವತಿಯಿಂದ ವೈದ್ಯ ರತ್ನಂ ಎಂಬ ಪದವಿಯನ್ನು ಪಡೆದಿದ್ದಾರೆ. ಈ ಸರ್ವಜ ಜ್ಞಾಕ್ಷರರು, ವಿದ್ವಾಂಸರು, ವಿನಯಶೀಲರು ಅನಾಥ ಜನಪ್ರೇಮಿಗಳು ಸಾಮಾಜಿಕ ಭೂಷಣಕಾರರು ಆಗಿ ದ್ದಾರೆ ಕೇವಲ ದಾರಿದ್ರದಿಂದ ಬಳಲುತ್ತಿರುವ ರೋಗಿ ಗಳನ್ನು ಸರಿಯಾಗಿ ಉಪಚರಿಸಿ ಎಷ್ಟೋ ಜನರಿಗೆ ರೋಗನಿವಾರಣವನ್ನಾಗಿ ಮಾಡಿದ್ದಾರೆ ರವಡಕುಂದಿ ಹಿರೇ ಮಠಕ್ಕೆ ಹೊದಲಿನಿಂದಲೂ ರೋಗಿಯಾಗಿ ಹೋಗಿ ತೋರಿಸುವುದಕ್ಕಾಗಿ ಬರುತ್ತಿದ್ದಂತೆ ಈಗಲೂ ಬಂದು ರೋಗಗಳನ್ನು ತೋರಿಸಿ ಮತ್ತು ಯಂತ್ರಮಂತ್ರಗಳನ್ನು ಮಾಡಿಸಿಕೊಂಡು ಹೋಗಬೇಕೆಂದು ತೋರುತ್ತೀನೆ. ಕೇವಲ ಬತಕನದಿಂದ ಬಳಲುತ್ತಿರುವ ರೋಗಗ್ರಸ್ತ ಜನಗಳು ಅಲಕ್ಷ್ಯಮಾಡದೆ ತೀವ್ರವಾಗಿ ರವಡಕುಂದಿ ಹಿರೇಮಠದ ಡಾಕ್ಟರನ್ನು ಕಾಣಿರಿ. ಡಾಕ್ಟರು ಕಾಶೀ ನಾಥಗ್ರಂಥಮಾಲೆಯ ಪುಸ್ತಕಗಳ ಪ್ರಜಾರಕ್ಕೆಂದೂ ಮತ್ತು ಪ್ರಥಾಪತ್ರಿಕೆಯು ಚಂದಾದಾರರನ್ನು ಮಾಡ ಬೇಕೆಂದೂ ತಾ|| ೧೫-೧೦-೫೧ ರಿಂದ ಬಳ್ಳಾರಿ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಸಂಚಾರಮಾಡುತ್ತಾರೆ ಬಳ್ಳಾರಿ ಜಿಲ್ಲಾ ಹಳ್ಳಿಗಳ ಬಡರೋಗಿಗಳು ಇದೇ ತಿಂಗಳು ೩೦ ನೇ ತಾರೀಕಿಗೆ ದಿಣ್ಣೆಕಲ್ಲಿಗೆ ಬಂದು ಹಾಜ ರಿರಬೇಕೆಂದು ಕೋರುತ್ತೇನೆ

ಗುರುನಂಜಾರಾಧ್ಯ, ಸಿಂಧನೂರು.

ಶ್ರೀ ಜಗದ್ಗುರು ರೇಣುಕಮಂದಿರದ ಅಡಿಗಲ್ಲು ಸ್ಥಾಪನೆ, ಕುಂಭಾರಿ

ಬಸು ಪುರಾತನ ಗ್ರಾಮವೆಂದು ಹೆಸರುಪಡೆದ ಕುಂಭಾರಿ ಗ್ರಾಮವು ಕುಂಭೋದ್ಭವನಾದ ಅಗಸ್ತ್ಯ ಮಹರ್ಷಿಯಿಂದ ಸ್ಥಾಪಿತವಾದ ಕುಂಭೇಶ್ವರಲಿಂಗದಿಂದ ಮೆರೆಯುತ್ತಿರುವುದು ಸರಿಯಷ್ಟೇ. ಇಲ್ಲಿ ಶ್ರೀ ಜ|| ಜ್ಞಾ ಹೋಟಿಗಿ ಪಟ್ಟಾಧ್ಯಕ್ಷರೆ ಶ್ರೀ ಚಿತ್ರವೀರತಿವಾಚಾರ್ಯ ಮಹಾಸ್ವಾಮಿಗಳವರ ಶಾಖಾಮಠವಿದ್ದು ಆ ಮೂಲಶ್ರೀಗಳವರು ತನ್ನು ೩೬ ನೇ ಅನುಷ್ಠಾನವನ್ನು ಈ ಗ್ರಾಮದಲ್ಲಿ ವಿಶೇಷ ವೈಭವದಿಂದ ನೆರವೇರಿಸಿದ ಸ್ಮಾರ್ಕಾರ್ಥವಾಗಿ ಶ್ರೀ ಜಗದ್ಗುರು ರೇಣುಕಮಂದಿರವನ್ನು ಸ್ಥಾಪಿಸಬೇಕೆಂದು ಈ ನೆಲದಲ್ಲೇ ನಿರ್ಧರಿಸಿಕೊಂಡ ಪ್ರಕಾರ ತಾ|| ೧೦-೧೦-೫೧ ನೇ ದಿನಸ ಪ್ರಾತಃಕಾಲದ ೮ ಘಂಟೆಗೆ ನೇದೋತ್ಪನ್ನವಾದ ಪೂಜೆಯೊಂದಿಗೆ ಹೋಟಿಗಿ ಶ್ರೀಗಳವರಿಂದ ಶ್ರೀರೇಣುಕಮಹಾಮಂದಿರದ ಅಡಿಗಲ್ಲು ಸ್ಥಾಪನೆಯಾಯಿತು. ಆ ಸಮಯದಲ್ಲಿ ಶ್ರೀಗಳವರು ತಮ್ಮ ಭಾಷಣದಲ್ಲಿ ಕುಂಭರಿಯ ಜನರ ಕರ್ತವ್ಯ ದಕ್ಷತೆಯ ಫಲವಾಗಿಯೇ ಇಂದು ಈ ರೇಣುಕಮಂದಿರದ ಅಡಿಗಲ್ಲು ಸ್ಥಾಪನೆಯಾಗಿದ್ದು ಈ ಭಕ್ತಾದಿಗಳಿಗೆ ಇದ ಶ್ರಿಂತಲೂ ಹೆಚ್ಚಿನ ಕಾರ್ಯ ಕೈಕೊಳ್ಳುವ ಶಕ್ತಿಯಿತ್ತು ಆ ರೇಣುಕ ಭಗವತ್ಕೃಪೆಯು ಅತಿಶೀಘ್ರದಿಸಲೆಂದು ಹರಸಿ ದರು. ಅನಂತರ ಜಗದಾಚಾರ್ಯರ ಮಂಗಲ ಜಯ ಘೋಷದೊಡನೆ ಕಾರ್ಯಕ್ರಮವು ಪೂರ್ತಿಗೊಂಡಿತು.

ಪಿ. ಆರ್ಯ. ಪಟೇಲ, ಜೇವುರ್ಗಿ.

ಉಪನಯನಸಮಾರೋತ್ಸವ, ಹೊಸಪೇಟೆ

ನಗರ ಶ್ರೀ ಜಗದ್ಗುರು ರೇಣುಕಾಚಾರ್ಯಮಂದಿರ ಸಂಸ್ಥಾಪಕರಾದ ಶ್ರೀರೇಣಸಿದ್ಧತಿಪಾಚಾರ್ಯ ಮಠಾ ಸ್ವಾಮಿಗಳು ಚಿಕ್ಕಮಗಳೂರು ಈ ಸೃಜ್ಯ ವಿವೇಗಾ ಗಳವರ ನೇತೃತ್ವದಲ್ಲಿ ತಾ|| ೧೯-೧೦-೫೧ ನೇ ದಿನಸ ಬಳ್ಳಾರಿ ಜಿಲ್ಲಾ ಪೈಕಿ ಹೊಸಪೇಟೆ ಗ್ರಾಮದ ಮಹಂತಿಪ ಮರದ ಶ್ರೀ ನೇ|| ಜಂಬಯ್ಯ ತಂದಿ ಚಂದ್ರಶೇಖರಯ್ಯ ಇವರ ಉಪನಯನವು ವೈದಿಕಸಿದ್ಧಾಂತರೀತ್ಯಾ ಚನ್ನಾಗಿ ನಡೆಯಿತು. ಈ ಕಾರ್ಯಕ್ಕೆ ಶ್ರೀ ಜ|| ಜ್ಞಾ ಬಸಾಪುರ ಪಟ್ಟಾಧ್ಯಕ್ಷರೂ ದಯಮಾಡಿಸಿದ್ದರು. ಸ್ಥಳೀಯ ಶಾಶ್ವ ಶಾಲಾಧ್ಯಕ್ಷರಾದ ಶ್ರೀ ನೇ|| ಕಲ್ಯಾಣಾಸ್ವಾಮಿಗಳವರ ವೈದಿ ಕಶ್ರದ್ಧೆಯಲ್ಲಿ ನಡೆಯಿತು. ಈ ಕಾರ್ಯದಲ್ಲಿ ಭಾಗಿಗಳಾಗಿದ್ದ ಸರ್ವರಿಗೂ ಮಂಗಲವನ್ನುಂಟುಮಾಡಲೆಂದು ಶ್ರೀಮಠ ವೇ|| ರುದ್ರಮುನಿಸ್ವಾಮಿ ಹಿರೇಮಠ, ಕೈಮಣ್ಣೂರು.

ವರ್ತಮಾನಸಂಗ್ರಹ

ಇಂಗ್ಲೆಂಡಿನ ಚುನಾವಣೆಯಲ್ಲಿ ಚರ್ಚಿಲ್ಲರ ಪಕ್ಷಕ್ಕೆ ಜಯ

ಬ್ರಿಟಿಷ್ ಸಾರ್ವತ್ರಿಕ ಚುನಾವಣೆಗಳಲ್ಲಿ ಕನ್ಸರ್ವೇಟಿವ್ ಪಕ್ಷವು ಲೇಬರ್ ಪಕ್ಷಕ್ಕಿಂತ ೩೦ ಸ್ಥಾನಗಳನ್ನು ಹೆಚ್ಚಿಗೆ ಪಡೆದು ಜಯಗಳಿಸಿದೆ. ಕನ್ಸರ್ವೇಟಿವ್ ಪಕ್ಷದ ನಾಯಕರಾದ ಮಿ|| ವಿನ್‌ಸ್ಟನ್ ಚರ್ಚಿಲ್ ರವರನ್ನು ಜಾರ್ಜ್ ದೊರೆಗಳು ಬಕಿಂಗ್‌ಹ್ಯಾಂ ಅರಮನೆಗೆ ಬರಮಾಡಿಕೊಂಡು ನೂತನ ಮಂತ್ರಿ ಮಂಡಲವನ್ನು ರಚಿಸುವಂತೆ ಆಜ್ಞೆ ಇತ್ತರು

ಮಹಾಪ್ರಧಾನರಾದ ರೈಟ್ ಆನರಬಲ್ ಪಿ. ಆರ್ ಅಟ್ಲಿಯವರು ತಮ್ಮ ಪಕ್ಷಕ್ಕೆ ಅಪಜಯವಾವೆ ಕೂಡಲೇ ಬ್ರಿಟನ್ ದೊರೆಗಳನ್ನು ಭೇಟಿಮಾಡಿ ಮಹಾಪ್ರಧಾನರ ಪದವಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರೆಂದು ಅಧಿಕೃತ ಪ್ರಕಟಣೆಯೊಂದು ತಿಳಿಸಿದೆ.

ಬ್ರಿಟನ್ನಿನ ನೂತನ ಮಂತ್ರಿಮಂಡಲದ ಸದಸ್ಯರು

ಬ್ರಿಟನ್ನಿನ ನೂತನ ಮಂತ್ರಿಮಂಡಲದ ಸದಸ್ಯರ ಪಟ್ಟಿಯನ್ನು ಮಿ|| ವಿನ್‌ಸ್ಟನ್ ಚರ್ಚಿಲ್‌ರು ೩೭ನೇ ತಾ|| ರಾತ್ರಿ ಪ್ರಕಟಿಸಿದರು ಮಿ|| ಚರ್ಚಿಲ್ಲರು ಮುಖ್ಯ ಸಚಿವರೂಪಗಿರುವರಲ್ಲದೆ ರಕ್ಷಣೆ ಸಚಿವರಾಗಿಯೂ ಇರುವರು

ಉತ್ತರ ರಾಷ್ಟ್ರೀಯ ರಾಜಕಾರಣದಲ್ಲಿ ಕನ್‌ಸರ್ವೇಟಿವ್ ಪಕ್ಷದ ನಾಯಕರೆನಿಸಿದ ಮಿ|| ಅಂತೋನಿ ಏಡನ್‌ರವರು ಉಪಮಹಾಪ್ರಧಾನರಾಗಿಯೂ ವಿದೇಶಾಂಗ ಸಚಿವರಾಗಿಯೂ ಮತ್ತೆ ಕಾಮನ್ಸ್‌ಸಭೆಯ ನಾಯಕರಾಗಿಯೂ ಇರುವರು.

ಇತರ ನೇಮಕಗಳು ಹೀಗಿವೆ: —

ಚಾನ್ಸೆಲರ್ ಆಫ್ ದಿ ಎಕ್ಸ್‌ಚೆಕರ್ ಮಿ|| ರಿಚರ್ಡ್ ಎ ಬಟ್ಲರ್.

ಕಾಮನ್ಸ್‌ಲೆಫ್ಟ್ ರಿಲೇಷನ್ಸ್ : ಲಾರ್ಡ್ ಇಸ್ಮೆ.

ವಸಾಹತು ಕಾರ್ಯದರ್ಶಿ : ಆಲಿವರ್ ಲಿಟ್ಟಲ್ಟನ್.

ಲಾರ್ಡ್ ಪ್ರೆಸಿಡೆಂಟ್ ಆಫ್ ದಿ ಕೌನ್ಸಿಲ್ (ಆಹಾರ ಮತ್ತು ವ್ಯವಸಾಯ ಕಾಯೆಯ ಜವಾಬ್ದಾರಿಯೂ ಸೇರಿ): ಲಾರ್ಡ್ ವೂಲ್ಟನ್.

ಆರ್ಥಿಕ ಮಂತ್ರಿ : ಸರ್ ವಾಲ್ಟರ್ ಮಾಂಕ್ಟನ್

ಲಾರ್ಡ್ ಪ್ರೈವೀಸೀಲ್ ಮತ್ತು ಹೌಸ್ ಆಫ್ ಲಾರ್ಡ್ಸ್ ಸಭಾ ನಾಯಕರು : ಮಾರ್ಕ್ವೀಸ್ ಆಫ್ ಸ್ಯಾಲಿಸ್‌ಬರಿ.

ಮಂತ್ರಿಮಂಡಲದ ಇತರ ಸದಸ್ಯರ ಹೆಸರುಗಳೆಲ್ಲು ಇನ್ನು ಕೆಲವು ದಿನಗಳೊಳಗೆ ಪೂರೈಸಲಾಗುತ್ತದೆ.

ಬ್ರಿಟಿಷ್ ಚುನಾವಣೆ ಫಲಿತಾಂಶದ ಬಗ್ಗೆ ದೆಹಲಿಯಲ್ಲಿ ಪ್ರತಿಕ್ರಿಯೆ

ಕನ್ಸರ್ವೇಟಿವ್ ಪಕ್ಷವು ಅಧಿಕಾರಕ್ಕೆ ಬಂದಿತು. ಲೇಬರ್ ಪಕ್ಷವು ಪರಾಜಯ ಹೊಂದಿತು ಕನ್ಸರ್ವೇಟಿವ್ ಪಕ್ಷಕ್ಕೆ ಅತ್ಯಲ್ಪ ಬಹುಮತದೊರೆತಿರುವುದರಿಂದ ಬ್ರಿಟನ್ನಿನ ಮುಂದಿನ ಸುತ್ತಿನ ಶಿಲ್ಪದಲ್ಲಿ ಚುನಾವಣೆ ನಡೆಯುವೇಕಾಗಿ ಬಹುಬೇಗನೆ ಬ್ರಿಟಿಷ್ ಸಾರ್ವತ್ರಿಕ ಚುನಾವಣೆಯ ಫಲಿತಾಂಶದ ಬಗ್ಗೆ ದೆಹಲಿಯಲ್ಲಿ ಅಭಿಪ್ರಾಯ ಕೇಂದು ಬರುತ್ತಿದೆ

ಚುನಾವಣೆಗಳ ಫಲಿತಾಂಶವು ಬ್ರಿಟನ್ನಿನ ಗೃಹ ಕೃತ್ಯಕ್ಕೆ ಸಂಬಂಧಪಟ್ಟ ಸಮಸ್ಯೆಯಾಪುದರಿಂದ ದೆಹಲಿಯಲ್ಲಿ ಬ್ರಿಟಿಷ್ ಚುನಾವಣೆಗಳ ಬಗ್ಗೆ ಅಧಿಕೃತವಲಯಗಳಲ್ಲಿ ಯಾವ ಟೀಕೆಯೂ ಕಂಡುಬಂದಿಲ್ಲ ಆದರೆ ಖಾಸಗೀ ವಲಯಗಳಲ್ಲಿ ಲೇಬರ್ ಪಕ್ಷದ ಪರಾಭವದ ಬಗ್ಗೆ ವಿಷಾದ ವ್ಯಕ್ತಪಡಿಸಲಾಗಿದೆ. ಭಾರತ, ಬರ್ಮಾ ಮತ್ತು ಸಿರೋನ್‌ಗಳಿಗೆ ಲೇಬರ್ ಪಕ್ಷವು ಸ್ವಾತಂತ್ರ್ಯ ವಿತ್ತುದನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸಲಾಗಿದೆ

ಮಿ|| ಚರ್ಚಿಲ್ಲರು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಭಾರತದ ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿದ್ದುದನ್ನು ನಾವು ಮರೆಯುವಂತಿಲ್ಲ. ಆದರೂ ಭಾರತ ಮತ್ತು ಇತರ ರಾಷ್ಟ್ರಗಳಿಗೆ ಅಧಿಕಾರ ವರ್ಗಾವಣೆ ಮಾಡಿದ ರೀತಿಯನ್ನು ಮಿ|| ಚರ್ಚಿಲ್ಲರು ಒಪ್ಪದಿದ್ದರೂ ನೂತನ ರಾಷ್ಟ್ರಗಳಿಗೆ ಇವರು ಶುಭಾಶಯ ಕೋರಿದ್ದಾರೆ ಬ್ರಿಟಿಷ್ ಚುನಾವಣೆಗಳ ಫಲಿತಾಂಶವು ಅಂತರರಾಷ್ಟ್ರೀಯ ರಂಗದಲ್ಲಿ ಮಹತ್ತರ ಪರಿಣಾಮವನ್ನುಂಟುಮಾಡುವುದು ಎಂದು ರಾಜಕೀಯ ಪ್ರೇತ್ರದಲ್ಲಿ ಅಭಿಪ್ರಾಯ ಪಡಲಾಗಿದೆ.

ಪಸಿವು ಸಹಿಸಲಾರದ ತಾಯಂದಿರ ದುಸ್ಕೃತ್ಯ

ಪೂರ್ವಪಾಕಿಸ್ತಾನದ ಖುಲ್ನಾ ಜಿಲ್ಲೆಯಲ್ಲಿನ ೧೫ ಲಕ್ಷ ಮಂದಿ ಭೀಕರ ಕ್ಷಾಮದ ದವಡೆಯಲ್ಲಿ ಸಿಲುಕಿ ದ್ದಾರೆ ಖುಲ್ನಾದ ೩೫೦ ಹಡುರಮ್ಮೆಲಿ ಪ್ರದೇಶದಲ್ಲಿ ಭೀಕರ ಕ್ಷಾಮ ತಲೆದೋರಿದೆ. ಕಳೆದ ಎರಡು ವರ್ಷ ಗಳಿಂದ ಮಳೆಯಾಗದೆ ಬೆಳೆ ನಿಲುಗಡೆ ಸಹ್ಯವಾಗಿ ಕ್ಷಾಮ ತಲೆದೋರಿದೆ ಹಸಿವು ತಡೆಯಲಾರದೆ ಅನೇಕರು ಮಡಿ ಯುತ್ತಿದ್ದಾರೆ. ಖುಲ್ನಾ ಆಸ್ಪತ್ರೆ ರೋಗಿಗಳಿಂದ ತುಂಬಿ ತುಳುಕಾಡುತ್ತಿದೆ ತಮ್ಮ ಮಕ್ಕಳು ತಮ್ಮ ಕಣ್ಮುಂ ದೆಯೇ ಹಸಿವು ತಡೆಯಲಾರದೆ ನರಳುವ ಭೀಕರ ದೃಶ್ಯ ನ್ನು ನೋಡಲಾರದೆ ಅನೇಕ ತಾಯಂದಿರು ತಮ್ಮ ಸ್ವಂತ ಮಕ್ಕಳನ್ನು ತಮ್ಮ ಕೈಯಾರೆ ಕೆರೆಗಳಿಗೆ ಎಸೆಯಬಹುತ್ತಿದ್ದಾರೆಂದು ನರಪಿಯಾಗಿದೆ.

ಗುಜರಾತಿನಲ್ಲಿ ಭಯಂಕರ ಕ್ಷಾಮ

ಮಳೆ ಇಲ್ಲದೆ ಗುಜರಾತಿನಲ್ಲಿ ಭಯಂಕರವಾದ ಕ್ಷಾಮವು ಉಂಟಾಗಿದ್ದು ಮೂಲಕ ಆಹಾರಸಚಿವರಾದ ಕೆ. ಎಂ. ಮುನ್ಷಿಯವರು ಆ ಪ್ರಾಂತದಲ್ಲಿ ಸಂಚಾರ ಮಾಡಿ ಇನ್ನು ನಾಲ್ಕಾರು ವಾರಗಳಲ್ಲಿ ಅತ್ಯುಗ್ರವಾದ ಪರಿಸ್ಥಿತಿ ತಲೆದೋರುವರೆಗೆಂದು ತಮ್ಮ ಹೇಳಿಕೆ ಇತ್ತಿರುವ ವಾಗಿ ತಿಳಿದುಬಂದಿದೆ. ಈಗಲೇ ಸರಿಯಾದ ಎಚ್ಚರಿಕೆ ತೆಗೆದುಕೊಳ್ಳದಿದ್ದರೆ ಹುಲ್ಲಿಗೂ, ಕುಡಿಯುವ ನೀರಿಗೂ ಉಗ್ರ ಅಭಾವ ಉಂಟಾಗುವಂತಿದೆ ಹೊಟ್ಟೆಗೆ ಹಾಕಲಾರದೆ ಹಳ್ಳಿಗರು ತಮ್ಮ ಉತ್ತಮ ದನಕರುಗಳನ್ನು ಮಾರುತ್ತಿದ್ದಾರೆ ಆಹಾರ ಬೆಳೆಯಲ್ಲಾ ನಾಶವಾಗಿರು ವುದಲ್ಲದೆ ಹತ್ತು ಬೆಳೆಯಲ್ಲಿ ಕೇಳಡಾ ೧೩ ರಷ್ಟು ಕೈಗೆ ಬರಬಹುದೆಂದು ಮಂತ್ರಿಗಳು ತಿಳಿಸಿದರು ಪಂಚಾಯತ್ ಸಿಸ್ಟಾರ್‌ನಿಂದ ಗುಜರಾತ ವರೆಗಿರುವ ೧೦೦೦ ಮೈಲು ಪ್ರದೇಶದಲ್ಲಿ ಸಹ ಮಳೆಯ ಅಭಾವದಿಂದ ಇಂಥ ಪರಿ ಸ್ಥಿತಿಯೇ ಉಂಟಾಗಿರುವೆಡೆಯು ಅವರು ಹೇಳಿದರು. ಆ ಪ್ರದೇಶದ ಜನಸಂಖ್ಯೆ ೧೭೦ ಲಕ್ಷ

ಹೈದ್ರಾಬಾದ್‌ನಲ್ಲಿ ವಿಚಿತ್ರ ಪ್ರಸಂಗ

ಹೈದ್ರಾಬಾದಿನ ಮನೆಯೊಂದರಲ್ಲಿ ನಡೆದ ವಿಚಿತ್ರ ಪ್ರಸಂಗವು ಪೋಲೀಸರಾದಿಯಾಗಿ ಅನೇಕರಿಗೆ ಆಶ್ಚರ್ಯ ವನ್ನುಂಟುಮಾಡಿತು.

ಕಳೆದ ಹಲವಾರು ದಿನಗಳಿಂದ ಎಲ್ಲಿಂದಲೋ ಮನೆ ಯೊಳಕ್ಕೆ ಕಲ್ಲುಗಳು ಬೀಳುತ್ತಿದ್ದವು ಪೋಲೀ ಕಾನ್ ಸ್ಟೇಬಲುಗಳನ್ನು ಕಾವಲು ಹಾಕಲಾಯಿತು. ಆದರೂ ಕಲ್ಲುಗಳು, ಮಿಂಚಿನಂತೆ, ಸೀನಿಗೆಗು, ಕೋಳಿ ಮೊಟ್ಟೆಗಳು ಇನ್ನೆಲ್ಲ ಮನೆಯೊಳಕ್ಕೆ ಬಿದ್ದವು. ಕೆಟಿಕೆ ಬಾಣಲಿಗಳವರೆಲ್ಲಾ ಹಾಕಿದ್ದರೂ ಹೀಗಾಯಿತು.

ಇಷ್ಟಾದರೂ ಮನೆಯವರಿಗಾಗಿಲ್ಲ ಗಾಯಗೆಳಾಗಲಿ ಲ್ಲ ಸೊತ್ತಿನೊಡೆಬ್ಬನು ಪ್ರತ್ಯಕ್ಷನೆ ಪಡೆಸಿದಾಗಾ ಗಲೂ ಸಾಂತಿಕ. ಇದು ಡೆವ್ವದ ಕಾಟವೆಂದು ಹೇಳಲಾಗಿದೆ.

ನೈಜಾಂ ಸ್ಟೇಟ್ ರೈಲ್ವೆ

ನೈಜಾಂ ಸ್ಟೇಟ್ ರೈಲ್ವೆಯನ್ನು ಕೇಂದ್ರ ರೈಲ್ವೆ ಯೊಡನೆ ವಿಲೀನಗೊಳಿಸಲಾಗುತ್ತದೆ. ಡಿಸೆಂಬರ್ ೫ ರಿಂದ ಇದು ಜಾರಿಗೆ ಬರುತ್ತದೆ.

ಕೇಂದ್ರ ಮತ್ತು ಪಶ್ಚಿಮ ರೈಲ್ವೆಗಳು

ಕೇಂದ್ರ ಮತ್ತು ಪಶ್ಚಿಮ ರೈಲ್ವೆ ಕಚೇರಿಗಳು ನವೆಂಬರ್ ೬ ರಿಂದ ಬೊಂಬಾಯಿನಲ್ಲಿ ಕೆಲಸಮಾಡಲು ಆರಂಭಿಸುವುವು ಜಿ ಐ ಪಿ, ನೈಜಾಂ ಸ್ಟೇಟ್ ರೈಲ್ವೆ, ಸಿಂಧ್ಯ ಸ್ಟೇಟ್ ಮತ್ತು ಧೋಲ್ಪುರ ಸ್ಟೇಟ್ ರೈಲ್ವೆಗಳನ್ನು ಒಂದುಗೂಡಿಸಿ ಕೇಂದ್ರ ರೈಲ್ವೆಯನ್ನು ರೂಪುಗೊಳಿಸ ಲಾಗುತ್ತದೆ ಬಿ ಬಿ. ಆಂಡ್ ಸಿ ಐ ; ಸೌರಾಷ್ಟ್ರ, ಜೈಪುರ ಸಂಸ್ಥಾನ ಮತ್ತು ರಾಜಾಸ್ಥಾನ್ ರೈಲ್ವೆಗಳು ನುಂತಾದುವನ್ನು ಸೇರಿಸಿ ಪಶ್ಚಿಮ ರೈಲ್ವೆಗಳನ್ನಾಗಿ ರೂಪುಗೊಳಿಸಲಾಗುತ್ತದೆ

ಸಗಣಿಯಿಂದ ಗ್ಯಾಸ್ ತಯಾರಿಕೆ

ಮನುಷ್ಯರ ಅಮೇಧ್ಯ ಅಥವಾ ದನಗಳ ಸಗಣಿ ಯಿಂದ ಗ್ಯಾಸ್ ತಯಾರಿಸಿ ಅದನ್ನು ಬೀದಿ ದೀಪಗಳನ್ನು ಉರಿಸುವುದಕ್ಕೂ ಅಡಿಗೆಮಾಡುವುದೇ ಮುಂತಾದ ಕಾರ್ಯಗಳಿಗೂ ಉಪಯೋಗಿಸುವ ವ್ಯವಸ್ಥೆಯನ್ನು ಮಾಡ ಲಾಗುವುದೆಂದು ಅಧಿಕೃತವಾಗಿ ಹೇಳಲಾಗಿದೆ ಪಟ್ಟಣ ಜನರ ಎಂಬ ಹಳ್ಳಿಯಲ್ಲಿ ೨೦ ದೀಪಗಳಿಗಾಗುವಷ್ಟು ಗ್ಯಾಸ್ ತಯಾರಿಸುವ ಸಣ್ಣ ಯಂತ್ರವನ್ನು (ಆಐ೦೦ ರೂ. ಬೆಲೆ) ಸ್ಥಾಪಿಸಿ ದೀಪಾವಳಿ ದಿನದಿಂದ ದೀಪ ಕೊಡಲಾಗುತ್ತದೆ

ಮಾರ್ಕೆಟ್‌ಗೆ ಬೆಂಕಿ

೧೦ ಲಕ್ಷ ರೂ. ನಷ್ಟ

ಕಳೆದ ೧೩ನೇ ತಾ|| ರಾತ್ರಿ ಗಡಿಗೆ ಧಾನ್ಯದ ಮಾರ್ಕೆಟ್ಟಿಗೆ ಬೆಂಕಿ ಬಿದ್ದು ಸುಮಾರು ೧೦ ಲಕ್ಷ ರೂ. ನಷ್ಟ ಸಂಭವಿಸಿತು ಬೆಂಕಿಯ ಅನಾಹುತದಲ್ಲಿ ಒಬ್ಬ ಹುಡುಗ ಸತ್ತನೆಂದು ವದಿಯಾಗಿದೆ ೧೫೦ ಅಂಗಡಿ ಗಳು ನೆಲಸಮವಾದವು. ಅದರ ಕಾರಣ ಗೊತ್ತಿಲ್ಲ.

ಬಟ್ಟೆವಾಣಿದಮೇಲಿನ ನಿರ್ಭಂಧ ಹೋಯಿತು

ಎಲ್ಲದಡೆಯ ಬಟ್ಟೆಗಳ ಮಾರಾಟದ ಹತೋಟೆ ಯನ್ನು ಬೊಂಬಾಯಿ ಸರಕಾರವರು, ತೆಗೆದುಹಾಕಿ ದ್ದಾರೆ ಮಿಲ್‌ರೇಟ್‌ನಮೇಲೆ ಶೇ|| ೧೪ ರಷ್ಟು ಲಾಭ ಕ್ಕಿಂತ ಹೆಚ್ಚಿಗೆ ದರ ಹಾಕಕೂಡದೆಂಬ ಒಂದು ನಿಯಮ ವನ್ನು ಮಾತ್ರ ಉಳಿಸಿದ್ದಾರೆ. ವ್ಯಾಪಾರಿಗಳು ಈಗ ಬಟ್ಟೆಯನ್ನು ಯಾರಿಗೆಬೇಕಾದರೂ ಮಾರಬಹುದು.

ಪಂ|| ನೆಹ್ರೂರವರಿಗೆ ಪ್ರತಿಸ್ಪರ್ಧೆ

ಪಾಕಿಸ್ತಾನ ವಿರುದ್ಧ ಚಳುವಳಿಯ ನಾಯಕರಾದ ಶ್ರೀ ಎಲ್. ಜಿ. ತಪ್ಪೆಯವರು ಅಲಹಾಬಾದು ಜಿಲ್ಲೆ ಯಿಂದ ಪಂ|| ಜವಹರಲಾಲರಿಗೆ ಪ್ರತಿಸ್ಪರ್ಧಿಯಾಗಿ ಪಾರ್ಲಿಮೆಂಟ್ ಚುನಾವಣೆಗೆ ನಿಲ್ಲುವರೆಂದು ತಿಳಿದು ಬಂದಿದೆ.

ಪಂ|| ನೆಹ್ರೂರವರಿಗೆ ನಾಜಿಮುದ್ದೀನರ ತಂತಿ

ಪಾರ್ಕ್-ಮಹಾಪ್ರಧಾನಿ ಮಿ|| ಖ್ವಾಜಾ ನಾಜಿಮುದ್ದೀನರು ಭಾರತದ ಮುಖ್ಯ ಸಚಿವರಾದ ಪಂ|| ಜವಾಹರ ಲಾಲ್ ನೆಹ್ರೂರವರಿಗೆ ಕೆಳಗೆ ಕಂಡ ತಂತಿಯನ್ನು ಕಳುಹಿಸಿದ್ದಾರೆ

'ಪಾಕಿಸ್ತಾನದ ಮುಖ್ಯಮಂತ್ರಿಯ ಅಧಿಕಾರವನ್ನು ನಾನು ವಹಿಸಿದ ಸಮಯದಲ್ಲಿ ನೀವೂ ನಿಮ್ಮ ಸಹೋ ದ್ಯೋಗಿಗಳೂ, ವೈಕ್ತಪಡಿಸಿದ ಸದಾಕಯತ್ನಾಗಿ ನಾನು ಕೃತಜ್ಞನಾಗಿದ್ದೇನೆ ನಮ್ಮ ಎರಡು ದೇಶಗಳ ಸ್ನೇಹವನ್ನು ಹೆಚ್ಚಿಸಲು ನಾವು ಹೃತ್ಪೂರ್ವಕವಾಗಿ ಕೆಲಸಮಾಡುವೆ ನೆಂದು ಭರವಸೆಕೊಡುವೆ. ಈ ಪ್ರಯತ್ನದಲ್ಲಿ ತಮ್ಮ ಸಂಪೂರ್ಣವಾದ ನೆರವು ದೊರೆಯುವುದೆಂದು ಕೇಳಿ ಕರ್ಣಗೊಂಡಿದ್ದೇನೆ'.

ಶ್ರೀ ಗೋಕರ್ಣ ವೀರಶೈವ ಮಠದ ಕಟ್ಟಡಕ್ಕೆ ಸ್ತುತ್ಯರ್ಹದಾನ

ಹುಬ್ಬಳ್ಳಿ ಹತ್ತಿರದಿಂದಿರುವ ಚರಪಟ್ಟಾಧ್ಯಕ್ಷರೂ ಗೋಕರ್ಣ ವೀರಶೈವ ಮಠದ ಸ್ಥಾಪಕರೂ ಆದ ಶ್ರೀ ಜ ಜಗದ್ಗುರು ಮಡಿವಾಳೇಶ್ವರಾಜ್ಯಮಹಾಸ್ವಾಮಿಗಳವರು ದಸರಾಮಹೋತ್ಸವಕ್ಕಾಗಿ ಬೀದರ ನಗರಕ್ಕೆ ದಯಮಾಡಿಸಿ ಅಲ್ಲಿಂದ ಭಕ್ತಜನರ ಸ್ವಾಗತದ ಬಿನ್ನಹದ ಮೇರೆಗೆ ಪೈದಂಡಾಬಾದ ಒಳ್ಳಾರಿ ಗ್ರಾಮಗಳಿಗೆ ದಯಮಾಡಿಸಿ ಸಕಲ ಭಕ್ತಾದಿಮಹಾಜನಗಳಿಗೆ ದರ್ಶನ ಆಶೀರ್ವಚನಗಳನ್ನಿತ್ತು ಶ್ರೀ ಗವಿಶಿದ್ಧಪ್ಪ ಚಿಂತಪಲ್ಲಿ ಇವರ ಆಮಂತ್ರಣದ ಮೇರೆಗೆ ಕೊಪ್ಪಳಕ್ಕೆ ದಯಮಾಡಿಸಿದಾಗ್ಗೆ ಅಲ್ಲಿಯ ಕೆಲವು ಭಕ್ತರು ಗೋಕರ್ಣ ಮಠದ ಕಟ್ಟಡಕ್ಕೆ ಧನಸಹಾಯ ಸಲ್ಲಿಸಿದರು ಶ್ರೀ ಬಳ್ಳೊಳ್ಳಿ ವೀರಭದ್ರಪ್ಪ ನವರು ಮಠದ ಕಟ್ಟಡಕ್ಕೆ ೫೦೧ ರೂ ಗಳನ್ನು ಆರ್ಪಿಸಿದರು ಶ್ರೀ ನಾಗಪ್ಪ ಮಾಳಗಿ ಸಾ ಕಾಕರಕಿ ತಾ|| ಕೊಪ್ಪಳ ಇವರು ಗೋಕರ್ಣ ಮಠದ ಉಪಯೋಗಕ್ಕಾಗಿ ಎರಡು ಗ್ಯಾಸುಗೆಳನ್ನು ದಾನವಾಗಿ ಕೊಡಲಿಕ್ಕೆ ವಾಗ್ದಾನ ಮಾಡಿದರು ಮತ್ತು ಶ್ರೀ ವಾಲಿಕೆತೆಪ್ಪ ಕೊ ಕಾಶಪ್ಪ ಹಮ್ಮಿಗಿ ಇವರು ತಮ್ಮ ಮಗ ಶ್ರೀ ಸಕೆರಪ್ಪನ ಹಸರಿನಿಂದ ಸದರಿ ಮಠದ ಕಟ್ಟಡಕ್ಕಾಗಿ ೫೧೧ ರೂಪಾಯಿ ದಾನಕೊಡುವದಾಗಿ ವಾಗ್ದಾನ ಮಾಡಿ ೧೧ ರೂಪಾಯಿಗಳನ್ನು ರೋಖ ಮುಟ್ಟಿ ಸಿದರು ಇನ್ನು ಉಳಿದ ೫೦೦ ರೂಪಾಯಿಗಳನ್ನು ತೀರ್ಪು ದಲ್ಲಿಯೇ ಮುಟ್ಟಿಸುವದಾಗಿ ತಿಳಿಸಿದರು ಈರೀತಿಯಾಗಿ ಧನ್ಯಕ್ಕಾರ್ಯಗಳಿಗೆ ಸರ್ವಾಯ ಸಲ್ಲಿಸಲಿಚ್ಛೆಯುಳ್ಳವರಿಗೆ ಪರಮಾತ್ಮನು ಆಯುಷ್ಯಾರೋಗ್ಯಾಭ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ

ವೀರಶೈವ ಮಠದ ಕಾರುಬಾರಿಗಳು, ಗೋಕರ್ಣ

ಸೂಚನಾ

ನವಲಗುಂದ ಆಯುರ್ವೇದ ದವಾಖಾನೆಯ ಸಂಚಾಲಕರಾದ ಡಾ|| ಗುರುದೇವಶಿವಾಚಾರ್ಯಸ್ವಾಮಿಗಳವರು ಚಿಕ್ಕಮಣ್ಣೂರ ಬ್ಯಹನ್ನೂರಾಧ್ಯಕ್ಷ ಇವರು ಕಣ್ಣಿನ ಆಪರೇಷನ್ ಅಭ್ಯಾಸಕ್ಕಾಗಿ ತಾ|| ೧೫-೧೦-೨೫ ನೇ ದಿವಸ ಮುಂಬೈಗೆ ಹೋಗಿರುತ್ತಾರೆ ಆದ್ದರಿಂದ ನವಲಗುಂದ ದಲ್ಲಿ ಸದ್ಯ ದವಾಖಾನೆಯು ಬಂದ ಇರುತ್ತದೆ

ವೈದ್ಯಸ್ವಾಮಕ,
ಆಯುರ್ವೇದ ದವಾಖಾನಾ, ನವಲಗುಂದ

ಸ್ವೀಕಾರ

ಒಳ್ಳಾರಿ ಡಿ| ಹೊಸಪೇಟೆ ಮಹಾಂತಿನ ಮಠದ ವೇ|| ಜಂಒಯ್ಯ ತಂದಿ ಹಿರಿಮಲ್ಲಿಕಾರ್ಜುನವರು ಇವರ ಉಪನಯನ (ಉಯ್ಯಾಜಾರ) ಕಾರ್ಯದಲ್ಲಿ ಪ್ರಭಾ ಪ್ರೋಷಣಾರ್ಥವಾಗಿ ತೆಗೆಯಿಸಿದ 1 ರೂ ಯ ಚಿಕ್ಕ ಮಣ್ಣಿನ ಶ್ರೀಗಳವರ ದ್ವಾರಾ ಕಲ್ಪಿರುತ್ತದ

ಈ ಸೇವ್ಯಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನುಂಟುಮಾಡಲೆಂದು ಹರಿಸುತ್ತೇನೆ

ಸಿದ್ಧಾಂತ ಶಿಖಾಮಣಿ

ವೀರಶೈವಮತಾಭಿವೃದ್ಧಿಗಾಗಿ ಜಗದ್ಗುರುಗಳಾದ ಪ್ರಾತಃಸ್ಮರಣೀಯರೂ ಆಗಿ ಸಿದ್ಧಾಂತಶಿಖಾಮಣಿಗ್ರಂಥವನ್ನು ಪ್ರಾಣದಂತೆ ರಚಿಸಿ ಪ್ರಚುರಪಡಿಸಿದ ಮಹಾಗ್ರಂಥಕರ್ತರಾದ ಶ್ರೀಮದ್ವಿರೂಪಾಕ್ಷಾಚಾರ್ಯರು ಜಗದ್ಗುರು ಪಂಚಾಚಾರ್ಯಪೀಠಾಧಿಪತಿಗಳಾಗಿ ವೀರಶೈವಮತಾಭಿವೃದ್ಧಿಗಾಗಿ ಅಹರ್ನಿಶವೂ ಶ್ರಮಿಸಿ ಅನೇಕ ಗ್ರಂಥಗಳನ್ನು ರಚಿಸಿ ಪ್ರಚುರಪಡಿಸಿದ್ದಾರೆ. ಅವುಗಳಲ್ಲಿ ಸಿದ್ಧಾಂತಶಿಖಾಮಣಿಗ್ರಂಥವು ಅತ್ಯಂತ ಪ್ರಮುಖವಾದುದು. ಈ ಗ್ರಂಥವು ಸಂಸ್ಕೃತಭಾಷೆಯಲ್ಲಿ ಸಿದ್ಧಾಂತಶಿಖಾಮಣಿಯೆಂಬ ಹೆಸರಿನಿಂದ ಪ್ರಸಿದ್ಧವಾಗಿದ್ದು ಅದರ ಕನ್ನಡ ಭಾಷಾಂತರವು ಸಿದ್ಧಾಂತಶಿಖಾಮಣಿಯೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ

REGISTERED No. M. 2266 ‖ ಶ್ರೀಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು ‖ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರವಸಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧರ್ ।ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ಹಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಅಂಚಾ ಪರಸ್ಥಳದವರಿಗೆ ೩ ರೂ ಸಂಪಾದಕರು— ಹಾಗನೂರು ಬೃ॥ ಮಹಾದೇವಯ್ಯನವರು ೨ ಪಿ ಖರ್ಚು ಸೇರಿ ೩ ರೂ ೮ ಆಣೆ.

ಸಂಪುಟ ೨೫॥ ಸೋಮವಾರ ತಾ॥ ೫ ನೇ ನವೆಂಬರ್ ೧೯೫೧ ॥ಸಂಚಿಕೆ ೨೬

ಪತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ನೀಹಾವಳಿ ಹಬ್ಬ

ಪ್ರಸಂಚಿದ ಮಾನವರು ಅನೇಕ ವಿಧವಾದ ಕಾಯ ಕ್ಲೇಶಗಳಿಂದ ತಮ್ಮ ತಮ್ಮ ಜೀವನಯಾತ್ರೆಯನ್ನು ಮಾಡುತ್ತ ಹಗಲಿರುಳೂ ದುಡಿದು ಬೇಸರಯುವರಿಂದ ಆಗಾಗ್ಗೆ ವಿಶ್ರಾಂತಿಸೌಖ್ಯವನ್ನು ಹೊಂದುವುದಕ್ಕಾಗಿ ಪೂರ್ವಕಾಲದಿಂದಲೂ ಅನೇಕ ವಿಧವಾದ ಹಬ್ಬಗಳನ್ನು ಆಯಾಯ ದೇಶಾನುಗುಣವಾಗಿ ವ್ಯವಹರಿಸುತ್ತಿರುವರು ನಮ್ಮ ಭಾರತೀಯರು ಕೂಡಾ ಆಗಾಗ್ಗೆ ಅನೇಕ ಹಬ್ಬಗಳನ್ನು ಆಚರಿಸುತ್ತಾರೆ ಇಂತಹ ಹಬ್ಬಗಳ ಒಂದಾಗಿ ಬೆಲ್ಲಾ ತಮ್ಮ ಕೆಲಸ ಕಾರ್ಯಗಳಿಪ್ಪಿದ್ದರೂ ಅವುಗಳ ಲ್ಲೆಲ್ಲಾ ಲಕ್ಷ್ಮೀಕೃತರೆ ತರೆದೆ ಶ್ರೀಮತುತಾದಿಯಾಗಿ ಬಡವರ ವರೆಗೂ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮಗಳಗನ್ನು ಸಾರವಾಗಿ ಹಬ್ಬಗಳನ್ನು ಮಾಡುತ್ತ ಬಂಧುಬಾಂಧವರಿಂದೊಡಗೂಡಿ ಸುಖಭೋಜನವಾಡಿ ಆ ದಿವಸಗಳನ್ನು ಸಂತೋಷದಿಂದ ಕಳೆಯುವ ಸಾಂಪ್ರದಾಯವು ಎಲ್ಲ ರಲ್ಲಿಯೂ ರೂಢವಾಗಿ ಬಂದಿರುತ್ತದೆ

ಈ ಹಬ್ಬಗಳಲ್ಲಿ ದೀಪಾವಳಿ ಹಬ್ಬವೆಂಬುದೊಂದು ಸಮಸ್ತ ಭಾರತೀಯರಿಂದ ಅಮಿಸ್ಕಿಪಟ್ಟಕಕ್ಕುದಾಗಿದೆ ಈ ಹಬ್ಬವನ್ನು ಭಾರತೀಯರು ಆಶ್ವಿನ ಬಾ॥ ೧೩ ನಿವಸದಿಂದ ಕಾರ್ತಿಂಕಶುದ್ಧ ಪಾಡ್ಯದವರೆಗೂ ಸಂಪ್ರದಾಯ ಪೈರುಪಚ್ಚೆಗಳು ಹದವರಿತು ಕೈಗೆ ಸೇರಬೇಕಾದ ಸಮಯವಾಮದರಿಂದ ಎಲ್ಲ ಕಡೆಯಲ್ಲಿಯೂ ಈ ದೀಪಾವಳಿಯ ಹಬ್ಬವನ್ನು ಬಹು ಸಂತೋಷದಿಂದ ಮಾಡುವರು ಹೀಗೆ ಮೂರು ದಿವಸಗಳವರೆಗೂ ಈ ಹಬ್ಬವನ್ನು ಮಾಡಲು ಇತಿಹಾಸದಲ್ಲಿ ಒಂದೊಂದು ವಿಧವಾದ ಕಾರಣಗಳು ಹೇಳಲ್ಪಟ್ಟಿವೆ. ಪೂರ್ವಕಾಲ ದಲ್ಲಿ ವಿರೋಚನೆಂಬ ದೈತ್ಯನಿಗೆ ಬಲಿಚಕ್ರವರ್ತಿಯೆಂಬ ಮಗನು ಹುಟ್ಟಿದನು ಈತನು ವೇದಿದವರ ಇಷ್ಟಾರ್ಥ ನೆನ್ನು ಪೊಡೆಸುವ ಶಕ್ತಿಯನ್ನು ಸಡೆದುದರಿಂದ ಮಹಾ ವಾನಸೂರನೆಂದು ಲೋಕದಲ್ಲೆಲ್ಲಾ ಪ್ರಖ್ಯಾತಿಪಡೆದ ನ್ನಲೆ, ತನ್ನ ಪರಾಕ್ರಮಾತಿಶಯದಿಂದ ಇಂದ್ರಾದಿದೇವ ತೆಗಳ ಸಂಚಕ್ಕನ್ನೆಲ್ಲಾ ಅಕ್ರಮಿಸಿದ್ದನು ಇಷ್ಟರೊಗಾಗಿ ಕಶ್ಯಪ ಪುತ್ರನಾದ ವಾಮನನು ಉಪ್ಪರಬ್ಬೇರಂತಾಗಿ ತನ್ನ ಗರ್ವವನ್ನು ಪಾಶಗೊಳಿಸುವದಕ್ಕಾಗಿ ಭಿಕ್ಷಾ ಬಿಪ್ರಾವ್ಪ ಭಿಕ್ಷಾ ಪಾತ್ರಾದಿ ಲಕ್ಷಣಗಳಿಂದ ಕೂಡಿದ ಪ್ರಹ್ಮಚಾರವೇಷದಿಂದ ಬಲಿಯ ಸಮೀಪಕ್ಕೆ ಬಂದು ಮೂರು ಹೆಜ್ಜೆ ಭೂಮಿಯನ್ನು) ಭಿಕ್ಷವೇಡಿದನು.

ಅದಕ್ಕೆ ಬಲಿಯು ಇವೇನು ? ನಾನು ಕೇಳಿದುದನ್ನು ಕೊಡಲು ಸಿದ್ಧವಾಗಿರುವಾಗ ಈ ಅಲ್ಪವಾಮನನು ಏಕೆ ಕೇಳುವೆಯೆಂದು ಪುಡಿಯಲು ವಾಮನನು ಇಷ್ಟೇ ಸಾಕಾಗಿದೆಯೆಂದು ಹೇಳಿದನು. ಒಲಿಯು ನಿರೂಪಾಯ ನಾಗಿ ಕೊಡಲೊಪ್ಪಿ ದೈತ್ಯಗುರುವಾದ ಶುಕ್ರಾಚಾರ್ಯ ನನ್ನು ಕರೆಯಿಸಿ ದಾನದ ಸಂಕಲ್ಪವನ್ನು ಹೇಳಲು ಆಜ್ಞಪಿಸಿ ನೂಡಿದನು ಆಗ ಶುಕ್ರಾಚಾರ್ಯನು, ಎಲೈ ಬಲಿಯೇ, ನಿನ್ನ ಪರೀಕ್ಷೆಗಾಗಿ ವಿಷ್ಣುವೇ ನಮಿನೇಷ ದಿಂದ ಬಂದಿರುವನು, ಈ ಮೋಹಕ್ಕೊಳಗಾಗಬೇಡ ನೆಂದು ಹೇಳಿದರೂ ಕೇಳದೆ ತನ್ನ ಸತ್ಯನಚಿವನನ್ನೇ ಪರಿಪಾಲಿಸಲುದ್ಯುಕ್ತನಾಗಿ ಜಲಧಾರೆಯನ್ನು ಬಿಡಲು ಪ್ರಾರಂಭಿಸಿದನು ಆಕ್ಷಣದಲ್ಲಿ ಆ ಶುಕ್ರಾಚಾರ್ಯರು ಆ ಪಾತ್ರೆಯಿಂದ ನೀರು ಬೀಳದಂತೆ ಸೂಕ್ಷ್ಮರೂಪದಿಂದ ಪಾತ್ರೆಯೊಳಗೆ ಹೊಕ್ಕು ಜಲಧಾರೆಯನ್ನು ಕಡೆದನು ಆತನ ಕಪಟವು ಸರ್ವಜ್ಞನಾದ ವಾಮನಿಗೆ ಗೊತ್ತಾಗಿ ಒಂದು ದರ್ಭೆಯಿಂದ ಆ ರಂಧ್ರಕ್ಕೆ ಚುಚ್ಚಲಾಗಿ ಶುಕ್ರಾಚಾರ್ಯನ ಕಣ್ಣು ಒಡೆದುಹೋಗಿ ಅಧ್ವಾನದನು ಒಳಕ ಜಲಧಾರೆಯಿಂದ ದಾನವನ್ನು ಪರಿಗ್ರಹಿಸಿ ಇತೆ ತ್ರಯೋದಶಿ ದಿವಸ ಒಂದು ಹೆಜ್ಜೆಯಿಂದ ಭೂಮಂಡಲ ವನ್ನೆಲ್ಲಾ ಆಕ್ರಮಿಸಿದನು ಮರುದಿವಸ ಇನ್ನೊಂದು ಹೆಜ್ಜೆಯಿಂದ ಸ್ವರ್ಗ ವನ್ನು ಕ್ರಮಿಸಿದನು ಅಮವಾಸ್ಯೆಯ ದಿವಸ ಮತ್ತೊಂದು ಹೆಜ್ಜೆಯನ್ನು ಆತನ ತಲೆಯ ನೇರಿರಿಸಿ ನಾಶಾರ್ಥ ಆಕ್ರಮಿಸಿದನು ಎಷ್ಟೂರೂಪಿಯಾದ ವಾಮನನು ಅತನ ತುಳ್ಳಿಗೆ ಮೆಚ್ಚಿ ನಿನ್ನಿಷ್ಟಾರ್ಥವೇನು ಎಂದು ಕೇಳಲು ಭಗವದ್ಭಕ್ತನಾದ ಆ ಬಲಿಯು, ಎಲೈ ಪೂಜ್ಯನೇ, ನೀನೇ ತೆಸ್ಟ ಆತಿಥಿಯಾದ ಮೇಲೆ ಇದ ಕ್ಕಿಂತಲೂ ಇನ್ನಾವುದು ತಾನೇ ವಿಶೇಷವಾಗಿರುವುದು ? ನನಗೇನೂ ಹೆಚ್ಚಿನ ವರವು ಬೇಕಾಗಿಲ್ಲ, ಆದರೆ ಆಶ್ವಿನ ಬಹುಳ ತ್ರಯೋದಶಿಯಿಂದ ಮೂರು ದಿವಸಗಳವರೆಗೂ ಅಚಂದ್ರಾರ್ಕವಾಗಿ ನನ್ನ ರಾಜ್ಯದ ಸ್ಮರಣಾರ್ಥವಾಗಿ ಎಲ್ಲ ಮನೆಗಳಲ್ಲಿಯೂ ದೀಪೋತ್ಸವವು ನಡೆಯುವಿಕು. ಯಾರು ಈ ದೀಪಮಾಲೆಗಳನ್ನು ಹಚ್ಚುವರೋ ಅವರ ಮನೆಗಳಲ್ಲೆಲ್ಲಾ ಲಕ್ಷ್ಮೀದೇವಿಯು ಸ್ಥಿರವಾಗಿ ವಾಸ ಮಾಡಲಿ, ಯಾರು ದೀಪಮಾಲೆಗಳಂದ ಮನೆಗಳನ್ನ ಲಂಕರಿಸುವದಿಲ್ಲವೋ ಅವರ ಮನೆಗಳಲ್ಲಿ ದಾರಿದ್ರ್ಯ ಲಕ್ಷ್ಮಿಯು ವಾಸಮಾಡಲಿ, ಚತುರ್ದಶಿಯ ದಿವಸ ದೀಪೋತ್ಸವನಮಾಡುವದರಿಂದ ಪಿತೃಗಳು ನರಕದಿಂದ ಉತ್ತೀರ್ಣರಾಗಲಿ; ಎಂದು ಬಲಿಯು ವರವನ್ನು ಕೇಳಿ ಕೊಳ್ಳಲಾಗಿ ಹಾಗೇ ಆಗಲೆಂದು ವಾಮನನು ವರವನ್ನು ಕೊಟ್ಟನು. ಅಂದಿನಿಂದಲೂ ಈ ಹಬ್ಬಕ್ಕೆ ದೀಪಾವಳಿ ಹಬ್ಬವೆಂದು ಹೆಸರುಂಟಾಯಿತು ಈ ಹಬ್ಬದಲ್ಲಿ ನಮ್ಮ ಭಾರತೀಯ ಮಹಾರಾಜರೆಲ್ಲರೂ ಧ್ವಾಸಕಾರ್ಥವಾಗಿ ಒಲೀಂದ್ರಪೂಜೆಯನ್ನಾ ಚರಿಸುವ ಪದ್ಧತಿಯನ್ನು ಇಟ್ಟು ಕೊಂಡಿರುತ್ತಾರೆ ಬ್ಯಾಕ್ಟೀರಿಯರು ಈ ದೀಪಾವಳಿಯ ಹಬ್ಬದಲ್ಲಿ ಧನಪೂಜೆಯನ್ನು ಬಹಳ ವೈಭವದಿಂದ ಆಚರಿಸುತ್ತಾರೆ ಬಹಳವಾಗಿ ದಾನಧರ್ಮಗಳನ್ನು ಮಾಡು ತ್ತುಲಿದ್ದಾರೆ ತಮಗೆ ಬೇಕಾದ ಇಷ್ಟಮಿತ್ರರನ್ನು ಬರ ಮಾಡಿಕೊಂಡು ಸುಖಭೋಜನವಿಂದ ಪರಸ್ಪರ ಮೈತ್ರಿ ಯನ್ನು ಬೆಳಿಸಿಕೊಳ್ಳುತ್ತಿರುವ್ಯಾರೆ. ಪ್ರತಿಯೊಬ್ಬ ವ್ಯವ ಸಾಯಗಾರರೂ ಈ ಮೂರು ದಿವಸವೂ ವಿಶ್ರಾಂತಿ ಯನ್ನು ಹೊಂದುತ್ತ ಹಾವ ಪೋಷಿಸುತ್ತಿರುವ ದಪಕರು ಗಳನ್ನು ಸ್ನಾನಮಾಡಿಸಿ ವಿಚಿತ್ರ ಬಣ್ಣಗಳಿಂದಲೂ, ಪುಷ್ಪಮಾಲೆಗಳಿಂದಲೂ ಅಲಂಕರಿಸಿ ಓಡಾಡಿಸುವ ಸಾಂಪ್ರದಾಯವು ಆಗ್ನೇಯ ಕಡೆಗಳಲ್ಲಿರುತ್ತದೆ ಮನು ಷ್ಯನ ವ್ಯವಹಾರಕ್ಕೆ ಪ್ರತಿಬಂಧಿಯಾದ ಪಶುಗಳಿಯನ್ನು ಕಳೆದುಹೋಗಿ ರರಪ್ಪತ್ತುವು ಪ್ರಾಪ್ತವಾದುದರಿಂದ ಪಶು ದ್ಯೋಗಿಯಾಗಿ ಕುಳಿತಿವ್ವ ಪ್ರತಿಯೊಬ್ಬ ಮನುಷ್ಯನೂ ತನ್ನ ಆಲಸ್ಯವನ್ನು ಬಿಟ್ಟು ಉದ್ಯೋಗದಲ್ಲಿ ಜಾಗರೂಕ ನಾಗಲು ಈ ಹಬ್ಬವು ಪ್ರಾರಂಭಗೂಡಿಕೆಯಾಗಿರುವದು ಆಷ.ದರಿಂದ ಪರಮಾಪ್ತಿ ಕರಾದ ಭಾರತೀಯರು ಉದ್ಯೋ ಗಾರಂಭಶೂರತೆಯವರಾದ ಈ ದೀಪಾವಳಿಯನ್ನು ಎಲ್ಲರೂ ಮಿಳತರಾಗಿ ತಮ್ಮ ತಮ್ಮ ದುಃಖಗಳನ್ನೆಲ್ಲಾ ಬಿಟ್ಟು ಸುಖಸಂತೋಷದಿಂದ ಆಚರಿಸಿ ಉದ್ಯೋಗನರತರಾಗಿ ನಿಜಯಲಕ್ಷ್ಮಿಯನ್ನು ಹೊಂದಿ ಸರ್ವರೂ ಸುಖದಿಂದ ಬಾಳಲೆಂದು ಈಶ್ವರನನ್ನು ಪ್ರಾರ್ಥಿಸುತ್ತೇನೆ

ವೇ॥ ಸಿ॥ ರೇಣಾಸಿದ್ಧೇಶ್ವರಶಾಸ್ತ್ರಿ ಶಿರೋಳ,
ಬೃಹನ್ನರ

ದಸರಾನುಮೋದ್ಘಸನ, ಕುರನತ್ತಿ

ಶ್ರೀ॥ ಷ॥ ಬ್ರ॥ ಸೃತ್ಯುಂಜಯ ಶಿವಾಚಾರ್ಯರವರು ಬಿಡೇಮಹ ಕುರವತ್ತಿ ಇವರ ಮಠದಲ್ಲಿ ತಾ॥ ೭-೧೦-೫೧ ಆದಿತ್ಯವಾರ ಪಾರಡಾಪ್ಯಾನೆ, ೮ ನೇ ಸೋಮವಾರ ವೇದೋಕ್ತವಾದ ಪೂಜಾಸಮಾರಂಭವು, ೯ ನೇ ಮಂಗಳವಾರ ಆಯುಧಾದಿಗಳ ಪೂಜೆಯು, ಅದೇ ದಿನ ರಾತ್ರಿ ೯ ಘಂಟೆಯಿಂದ ೧೧ ರ ವರೆಗೆ ವೇ॥ ಪುರಾಣೀಕ ಮಹದ ಕೊಟ್ಟಯ್ಯನವರ ' ಅನ್ನಪೂರ್ಣಾ ' ಎಂಬ ವಿಷಯದ ಮೇಲೆ ಚಿತ್ರಾಕರ್ಷಕವಾದ ಕೀರ್ತನೆಯು, ೧೦ ನೇ ಬುಧವಾರ ಸ್ನಾತಕಾಲ ೮॥ ಘಂಟೆಗೆ ಮಹೇಂದ್ರಮುಹೂರ್ತದಲ್ಲಿ ವೇ॥ ಪುರಾಣೀಕಮಠದ ವೀರಯ್ಯನವರ ಸೂಚನೆ ಮೇರೆಗೆ ' ಅಪಿಲ ಭಾರತೀಯ ಸಂಸ್ಕೃತ ಪಾಠಶಾಲಾ ' ಬೃಹನ್ಮಠ ಕುರುವತ್ತಿ ಎಂಬ ಸುಸಾಮರಣಾದಿಂದ ಗ್ರಾಮಾಧ್ಯಕ್ಷ ಶ್ರೀ ಬಸವಣ ಗೌಡರೇ ಮೊದಲಾದ ವಿದ್ಯಾಭಿಮಾನೀಜನತೆಯ ಆಮಂ ನೋದದಿಂದ ಸಂಸ್ಕೃತ ಪಾಠಶಾಲೆಯು ಸ್ಥಾಪಿಸ ಲ್ಪಟ್ಟಿತು ರಾತ್ರಿ ೧೦ ರಿಂದ ೧೧ ರ ವರೆಗೆ ಪಿ ಲಿಂಗಪ್ಪ ಹಾರ್ಮೋನಿಸ್ಟರ, ಕೆ ಮಲ್ಲಿಕಾರ್ಜುನಪ್ಪ ಗಾಸಲೋಲ ಇವರ ಸುಶ್ರಾವ್ಯನಾದ ಗಾನವು ಶ್ರೋತೃಕಗಳ ಕರ್ಣಾ ಮೃತವಾಗಿ ಜಾಗರಿಸ್ಥರನ ಪ್ರಾಮುಸ್ಯಗಳಿಯಿಂದ ಮುಕ್ತಾಯವಾಯಿತು. ಜಗನ್ನ್ಯಾಯಾಮಳಾ ಇವರೆಲ್ಲ ರಿಗೂ ಚಿರಾಯುರಾರೋಗ್ಯಭಾಗ್ಯಾದಿಗಳನ್ನು ತೊಡ ರೆಂದು ಬಯಸುತ್ತೇನೆ

ತನ್ನ ವಿಧೇಯ ಪಾಟೀಲ ಹರವಿ.

ದಿವಕ್ಕೆ ೧೫ ಟನ್ ಸಿಲ್ಕ್ ಉತ್ಪತ್ತಿ

ಶೈದರಾಬಾದಿನಲ್ಲಿ ದಿನಕ್ಕೆ ೧೫ ಟನ್ ರೇಷ್ಮೆಯನ್ನು ತಾಗಿದವಸ್ತು ತಯಾರು ಮಾಡುವ ಪಾಕಾಗಿ ಕಾರ್ಖಾನೆ ಯೊಂದನ್ನು ಸರಕಾರ ವಹಿಸಿಕೊಳ್ಳುವುದಾಗಿ ಹೈದ್ರಾ ಬಾದ್ ಮುಖ್ಯಮಂತ್ರಿ ತಿಳಿಸಿದ್ದಾರೆ.

ಪಂಚಾಚಾರ್ಯಪ್ರಭಾ

೧೯೫೧ನೆಯ ನವೆಂಬರ್ ತಾ॥ ೫ ನೇ ಸೋಮವಾರ

ಕರ್ಣಾಟಕದ ಗತವೈಭವ

[ಹಿಂದಿನಿಂದ ಮುಂದುವರೆದುದು]

ಶಿವತತ್ತ್ವರತ್ನಾಕರ ಎಂಬ ಗ್ರಂಥವು ಮದ್ರಾಸ್ ಗವರ್ನಮೆಂಟಿನವರಿಂದ ಮುದ್ರಿಸಲ್ಪಟ್ಟಿದೆ ಈ ಗ್ರಂಥದ ನಾಲ್ಕನೇ ಕಲ್ಲೋಲದ ೧೨ ನೇ ತರಂಗದಿಂದ ತಿಳಿದು ಬರುವುದೇನೆಂದರೆ—

ಶಿವಧರ್ಮನೆಂಬ ಬ್ರಾಹ್ಮಣನು ಬಡತನದ ವ್ಯಸನದಿಂದ ರೇವಣಸಿದ್ಧ ಸಾಂಪ್ರದಾಯಿಕರಾದ ಶ್ರೀಶಂಕರಾಚಾರ್ಯರ ಪೀಠಕ್ಕೆ ಅಧಿಪತಿಗಳಾಗಿದ್ದ ವಿದ್ಯಾಶಂಕರ ತೀರ್ಥಸ್ವಾಮಿಗಳವರಲ್ಲಿ ಬಂದು ತನ್ನ ನಿಜಸ್ಥಿತಿಯನ್ನು ಹೇಳಿಕೊಂಡನೆಂದೂ, ಶ್ರೀ ಸ್ವಾಮಿಗಳವರು ಅವನಿಗೆ ಶ್ರೀಚಕ್ರವನ್ನಾ ಶೀರ್ವದಿಸಿ ಅದನ್ನು ಪೂಜಿಸಲು ಅಪ್ಪಣೆಯನ್ನು ಮಾಡಿದರೆಂದೂ, ಆ ಶ್ರೀಚಕ್ರಪೂಜೆಯ ಸಾಮರ್ಥ್ಯದಿಂದಲೇ ಅವನು ಮಹಾಜ್ಞಾನಿಯಾಗಿ, ಆ ಸ್ವಾಮಿಗಳವರಿಂದಲೇ ಸನ್ಯಾಸದೀಕ್ಷೆಯನ್ನು ಪಡೆದು ಕೊಂಡು ವಿದ್ಯಾರಣ್ಯನೆಂಬ ನಾಮಧೇಯದಿಂದ ಪ್ರಸಿದ್ಧನಾದನೆಂದೂ, ಶ್ರೀಸ್ವಾಮಿಗಳವರು ತಮ್ಮ ಶಿಷ್ಯರಾದ ಆ ವಿದ್ಯಾರಣ್ಯರಿಗೆ, ಅದಿಯಲ್ಲಿ ಶ್ರೀರೇಣುಕಾಚಾರ್ಯರಿಂದ ಶ್ರೀಶಂಕರಾಚಾರ್ಯರಿಗೆ ಪ್ರಾಪ್ತವಾಗಿದ್ದ ಗುರು ಪರಂಪರೆಯಿಂದ ಬಂದ ಶ್ರೀಚಂದ್ರಮೌಳೀಶ್ವರಲಿಂಗ ವನ್ನು ಕೊಟ್ಟು, "ನೀನು ಈ ಲಿಂಗವನ್ನು ಪೂಜಿಸು, ಇದರಿಂದ ನಿನ್ನ ಮನೋಭೀಷ್ಟವು ಪೂರ್ತಿಯಾಗುವದು" ಎಂದು ಆಜ್ಞೆಯನ್ನಿತ್ತರೆಂದೂ ತಿಳಿದು ಬರುತ್ತದೆ

ಈ ಶಿವತತ್ತ್ವರತ್ನಾಕರ ಗ್ರಂಥಕಾರನು ಶ್ರೀ ರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನ ನುಗ್ರಹಿಸಿದ ವಿಷಯವನ್ನು, ವಿದ್ಯಾರಣ್ಯರಿಂದ ನಿರಿಚಿತವಾದ "ಪಿತಾಮಹಸಂಹಿತೆ' ಮತ್ತು ಭಾರತೀ ಕೃಷ್ಣಯತಿಯಿಂದ ವಿರಚಿತವಾದ "ವಿದ್ಯಾರಣ್ಯಕೃತಿ" ಎಂಬೀ ಗ್ರಂಥಗಳ ಆಧಾರದ ಮೇಲಿಂದ ಬರೆದಿರುವೆನೆಂದು ಚತುರ್ಥಕಲ್ಲೋಲದ ಅಂತ್ಯದಲ್ಲಿ—

ವಿದ್ಯಾರಣ್ಯಕೃತಂ ಚೈವ ಪಿತಾಮಹಸಂಹಿತಾಂ ।
ವಿಲೋಕ್ಯಾಽಯಂ ವಿಚಿತ್ರಃ ಕಲ್ಲೋಲೋಽಭೂತ್ಪುರತಃ ॥

ಎಂದು ಉಲ್ಲೇಖಿಸಿದ್ದಾನೆ ಇದರ ಮೇಲಿಂದ ವಿದ್ಯಾರಣ್ಯರು ಬರೆದ ಪಿತಾಮಹಸಂಹಿತೆಯಲ್ಲಿಯೂ ಮತ್ತು ಭಾರತೀಕೃಷ್ಣಯತಿಯು ಬರೆದ ವಿದ್ಯಾರಣ್ಯಕೃತಿಯಲ್ಲಿಯೂ ಚಂದ್ರಮೌಳೀಶ್ವರಲಿಂಗಪ್ರದಾನ ವಿಷಯವು ವಿಶದವಾಗಿ ಬರೆಯಲ್ಪಟ್ಟಿರುವೆನೆಂದು ಸ್ಪಷ್ಟವಾಗುತ್ತದೆ ಇದಲ್ಲದೆ ನೈಸೂರು ಗವರ್ನಮೆಂಟಿನವರಿಂದ ಮುದ್ರಿಸಲ್ಪಟ್ಟಿರುವ "ಕೆಳದಿವೆಂಕಪಿಜಯ" ಎಂಬ ಗ್ರಂಥದಲ್ಲಿಯೂ ಸಹ ಶ್ರೀಚಂದ್ರಮೌಳೀಶ್ವರಲಿಂಗಪ್ರದಾನ ವಿಷಯವು ಬರೆಯಲ್ಪಟ್ಟಿರುವದು.

ಮೇಲ್ಕಂಡ "ಶಿವತತ್ತ್ವರತ್ನಾಕರ" ಗ್ರಂಥಕ್ಕೆ ಇಂಡಿಯಾ ಗವರ್ನಮೆಂಟಿನಲ್ಲಿ ಪ್ರಾಚ್ಯವಿದ್ಯಾಸಂಶೋಧಕರಾಗಿದ್ದ ಕೈ॥ ರಾವ್‌ಬಹದ್ದೂರ್ ಎಚ್ ಕೃಷ್ಣಶಾಸ್ತ್ರಿಯರ್, ಬಿ ಎ., ಎಂಬವರು ಆಂಗ್ಲಭಾಷೆಯಿಂದ ಬಹು ವಿಶಾಲವಾದ ಪ್ರಸ್ತಾವನೆಯನ್ನು ಬರೆದಿರುತ್ತಾರೆ ಆವರು ತಮ್ಮ ಪ್ರಸ್ತಾವನೆಯ ಒಂದು ಕಡೆಯಲ್ಲಿ ಈ ರೀತಿಯಾಗಿ ಬರೆದಿದ್ದಾರೆ—

"ಆಂಧರ ಈ ಗ್ರಂಥದ ೪ ನೆಯ ಕಲ್ಲೋಲದ ೧೬ ನೆಯ ತರಂಗದಲ್ಲಿರುವ ವಿದ್ಯಾರಣ್ಯರ ಜರಿತ್ರೆಯಲ್ಲಿ, ವಿದ್ಯಾರಣ್ಯರಿಗೆ ಸನ್ಯಾಸವನ್ನಿತ್ತ ಶಂಕರಾಚಾರ್ಯರ ಮಠಾಧಿಪತಿಗಳಾಗಿದ್ದ ಆಚಾರ್ಯರು ರೇವಣಸಿದ್ಧಸಂಪ್ರದಾಯವನ್ನು ಅನುಸರಿಸುತ್ತಿದ್ದರೆಂಬ ವಿಷಯವು ಸರ್ವರಿಂದಲೂ ಅತ್ಯವಶ್ಯವಾಗಿ ನೋಡಲ್ಪಡತಕ್ಕದ್ದಾಗಿದೆ ಶೃಂಗೇರಿಮಠದಲ್ಲಿ ಇಂದಿನವರೆಗೂ ಆ ಮಠದ ಆಚಾರ್ಯರಿಂದ ಮುಖ್ಯೋಪಾಸ್ಯದೇವರಾಗಿ ಪೂಜಿಸಲ್ಪಡುತ್ತಿರುವ ಶ್ರೀಚಂದ್ರಮೌಳೀಶ್ವರಲಿಂಗವು ವಿದ್ಯಾರಣ್ಯರಿಗೆ ಅವರ ಗುರುಗಳಿಂದ ತೊಡಲ್ಪಟ್ಟಿತೆಂದು ಹೇಳಿತೆ. ಶ್ರೀ ರೇವಣಸಿದ್ಧರು ಪ್ರಸಿದ್ಧರಾದ ತೈನಿಪ್ರಾಂತ್ಯ ಸ್ವಾಪಕರಾಗಿದ್ದಾರೆ ಆವರನ್ನು ವೀರಶೈವರು ತಮ್ಮ ಮತದ ತ್ಯಂತ ಪ್ರಾಚೀನಾಚಾರ್ಯರಲ್ಲೊಬ್ಬರನ್ನಾಗಿ ಹೇಳುತ್ತಾರೆ ಶಂಕರಾಚಾರ್ಯರು ರೇವಣಸಿದ್ಧಸಂಪ್ರದಾಯಕ್ಕೆ ಸೇರಿದವರಾದುದರಿಂದಲೇ ವೀರಶೈವ ಮತಾನುಯಾಯಿಗಳಾದ ಕೆಲವಿರಾಜರು ಶೃಂಗೇರಿ ಶಂಕರಾಚಾರ್ಯರ ಮಠಕ್ಕೆ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು ಶಂಕರಾಚಾರ್ಯರು ಶಿವನಿಲ್ಲದೇವತೆಗಳಲ್ಲಿ ಭೇದವನ್ನೆಣಿಸಿ ವಿದ್ದರೂ, ಇಂದಿಗೂ ಸಹ ತದ್ವೈತ್ರತಮತಕ್ಕೆ ಸೇರಿದ ಆನುವರಲ್ಲಿ ವೈಷ್ಣವಮತ, ಕೃಷ್ಣಪೂಜೆ ಇವುಗಳಿಗಿಂತ, ಶೈವಮತ, ಶಿವಲಿಂಗಪೂಜೆ ಇವುಗಳಿಗೇ ವಿಶೇಷ ಪ್ರಾಧಾನ್ಯತೆಯಿರುವುದು ಈ ಕಾರಣದಿಂದಲೇ ಎಂದು ಕಂಡುಬರುತ್ತದೆ"

ಜಗದ್ವಿಖ್ಯಾತವಾದ ಶ್ರೀ ಚಂದ್ರಮೌಳೀಶ್ವರಲಿಂಗ ವನ್ನು ಶ್ರೀ ರೇಣುಕಾಚಾರ್ಯರು ಶ್ರೀಮದಾದ್ಯಂಕಾಚಾರ್ಯರಿಗೆ ಅನುಗ್ರಹಿಸಿರುವ ವಿಷಯವು ಶಿವತತ್ತ್ವರತ್ನಕರವಲ್ಲದೆ, ರೇಣುಕವಿಜಯ, ವೇದಾಂತಸಾರ, ವೀರಶೈವ ಚಿಂತಾಮಣಿ, ಗುರುವಂಶಕಾವ್ಯ, ಪಿತಾಮಹಸಂಹಿತೆ, ವಿದ್ಯಾರಣ್ಯಕೃತಿ ಇತ್ಯಾದಿ ಪರಮ ಪ್ರಾಚೀನಗ್ರಂಥಗಳಲ್ಲಿಯೂ ಪ್ರತಿಪಾದಿಸಲ್ಪಟ್ಟಿರುವುದು ಪೂರ್ವದಲ್ಲಿ ಶೃಂಗೇರಿ ಪೀಠಾಧಿಪತಿಗಳಾಗಿದ್ದ ಶ್ರೀ ಸಚ್ಚಿದಾನಂದಭಾರತೀಸ್ವಾಮಿಗಳವರಿಂದ ಬರೆಯಿಸಲ್ಪಟ್ಟಿರುವ "ಗುರುವಂಶಕಾವ್ಯ"ದ ಮೂರನೆಯ ಸರ್ಗದಲ್ಲಿ—

ಶ್ರೀಶಂಕರಾಚಾರ್ಯರು ಭರತಖಂಡವೆನ್ನೆಲ್ಲ ಸಂಚರಿಸಿ ಕಾಶ್ಮೀರ ದೇಶಕ್ಕೆ ಹೋಗಿ, ಅಲ್ಲಿದ್ದ ಶಾರದಾದೇವಿಯನ್ನು ತಂದು ಶೃಂಗೇರಿಯಲ್ಲಿ ಸ್ಥಾಪಿಸಿದರೆಂದೂ, ಅನಂತರ ತಾವು ಕಾಂಚೀಕ್ಷೇತ್ರಕ್ಕೆ ಹೊರಡಲು ಸಿದ್ಧರಾಗಿ ಸುರೇಶ್ವರಾಚಾರ್ಯನಿಂದ ತನ್ನ, ಪೃಥಮತಿಶ್ವರಿಗೆ ಶೃಂಗೇರಿ ಮಠದ ಪಟ್ಟವನ್ನು ಕಟ್ಟಿದರೆಂದೂ, ಆಮೇಲೆ ಸುರೇಶ್ವರಾಚಾರ್ಯನಿಗೆ 'ಎಲೈ ಸುರೇಶ್ವರಾಚಾರ್ಯನೇ! ನೀನು ಶ್ರೀರೇಣುಕಾಚಾರ್ಯರು ನನಗೆ ಈ ಮೊದಲು ಅನುಗ್ರಹಿಸಿರುವ ಚಂದ್ರಮೌಳೀಶ್ವರಲಿಂಗವನ್ನೂ ಮತ್ತು ರತ್ನಗರ್ಭಗಣಪತಿಯನ್ನೂ ಪೂಜಿಸು" ಎಂದು ಆಜ್ಞೆಯನ್ನು ಮಾಡಿ ಕಾಂಚೀಕ್ಷೇತ್ರಕ್ಕೆ ತೆರಳಿದ ರೆಂದೂ ಬರೆಯಲ್ಪಟ್ಟಿರುತ್ತದ

ಇತ್ಯಾದಿ ವಿಷಯಗಳನ್ನು ಪರ್ಯಾಲೋಚಿಸಿನೋಡಿದರೆ ಶ್ರೀಚಂದ್ರಮೌಳೀಶ್ವರಲಿಂಗವು ಶ್ರೀಮದಾದ್ಯಂಕಾಚಾರ್ಯರಿಗೆ ಶ್ರೀರೇಣುಕಾಚಾರ್ಯರಿಂದ ಅನುಗ್ರಹಿಸಲ್ಪಟ್ಟಿತೆಂದೂ, ಗುರುಪರಂಪರಾಪ್ರಾಪ್ತ ಆ ಲಿಂಗವು ಶ್ರೀ ವಿದ್ಯಾರಣ್ಯರಿಗೆ ಪ್ರಾಪ್ತವಾಯಿತೆಂದೂ, ವಿದ್ಯಾರಣ್ಯರ ದ್ವಾರಾ ಆ ದಿವ್ಯಲಿಂಗದ ಪ್ರಸಾದವು ಹರಿಹರರಾಯನಿಗೆ ಪ್ರಾಪ್ತವಾಯಿತೆಂದೂ ಸ್ಪಷ್ಟವಾಗುತ್ತದೆ ಹರಿಹರರಾಯನು ಶ್ರೀರೇಣುಕಾಚಾರ್ಯರ ಆಶೀರ್ವಾದಪ್ರಭಾವದಿಂದ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿ, ಆ ಸುನಗ್ರಾಜ್ಯದ ಕೀರ್ತಿಯನ್ನು ಈ ಭೂಮಂಡಲದಲ್ಲೆಲ್ಲ ಸೂರ್ಯಚಂದ್ರರಿರುವವರೆಗೆ ಸ್ಥಿರಗೊಳಿಸಿದನು ಇಂತಹ ಮಹಾಸಾಮ್ರಾಜ್ಯವನ್ನು ಸ್ಥಾಪಿಸಿ ದಿಗಂತವಿಶ್ರಾಂತ ಕೀರ್ತಿಶಾಲಿಯಾದ ಶ್ರೀರೇಣುಕಸಿದ್ಧನ ಮಹಾಭಕ್ತರಾದ ಹರಿಹರರಾಯನ ನಿರ್ಮಲಕೀರ್ತಿಯು ಧರಣತಲದಲ್ಲಿ ಸದಾ ಬೆಳಗುತ್ತಿರಲಿ!

(ಮುಂದುವರೆಯುವುದು)

ಕರ್ಣಾಟಕ ಏಕೀಕರಣದ ಬಗ್ಗೆ ಕೊಡಗಿನಾದ್ಯಂತ ಸ್ವಾಮಿಜಿಯವರ ಭಾಷಣ

ಬಲ್ಯಾರಿ ಜಿಲ್ಲಾ ಹಿಂಗೇರಿಯಲ್ಲಿ ಅಕ್ಟೋಬರ್ ೯-೧೦-೧೧ ನೇ ತಾರೀಖುಗಳಲ್ಲಿ ನಡಾದಜಿಲ್ಲ ಮಹಿಳಾಪ್ರತಿನಿಧಿ ಮಹಾಸ್ಮೆಳನದಿಂದ ನೆರೆವೇರಿಸಲಾಯಿತು ಮೊದಲೇ ನಿಶ್ಚಯವಾದಂತೆ ಪುರಪ್ರಮುಖರ ಪ್ರಾರ್ಥನೆಯ ಮೇರೆಗೆ ಕೊಡಗುಮಂಡ�ಿ ಸಂಸ್ಥಾನ್ ಹಿರಿಮಹಿತ ಶ್ರೀ॥ ಪ್ರ॥ ಶರವಣ್ಣಾಧೃಷ್ಟ ಪಂಡಿತ ಶ್ರೀ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಪರಿವಾರ ಸೊಡನೆ ದಿನಾಂಕ ೯ ಮಧ್ಯಾಹ್ನ ೩ ಘಂಟೆಗೆ ಆಗಮಿಸಿದ ಸಮಯದೇ ಪುರಜನರು ಉಚ್ಚಸಭಪೂರ್ವಕವಾಗಿ ಕಳಶತೋರಣಗಳಿಂದ ಭವ್ಯವಾಗಿ ಅಲಂಕೃತಗೊಂಡಿದ್ದ ಶ್ರೀರಾಪಲಿಂಗೇಶ್ವರ ದೇವಸ್ಥಾನಕ್ಕೆ ದಯಮಾಡಿಸಿ ಕೊಂಡರು ಸಾಯಂಕಾಲ ೫ ಘಂಟೆಗೆ ಸಭೆಕೂಡಿತು, ಸಭೆಗೆ ಸಾವಿರಾರು ಜನರಿಗು ಆಗಮಿಸಿದ್ದರಲ್ಲದೆ, ಶಾನವಾಸಪುರ, ಚಾನಾಳು, ಜೈಲೂರು, ತಿರಿಗೇರಿ ದಮ್ಮೂರು ಮೊದಲಾದ ಅಜೂಬಾಜು ಗ್ರಾಮಗಳಿಂದ ಪ್ರಮುಖ ಮಹಾಜನಗಳು ಆಗಮಿಸಿದ್ದರು. ಸ್ಟಾರ್‌ಬ್ಯ ದಲ್ಲಿ ರೌಡಕುಂದಿ ಬೃಹನ್ಮಠದ ಸಂಗೀತವಿದ್ವಾನರದ ಡಾ॥ ರುದ್ರಮುನಿಸ್ವಾಮಿಯವರಿಂದ "ಉದಯವಾಗಲಿ ನಮ್ಮ ಜಲುವ ಕನ್ನಡನಾಡು" ಎಂಬ ಕರ್ಣಾಟಕ ರಾಷ್ಟ್ರಗೀತೆಯು ಸುಶ್ರಾವ್ಯವಾಗಿ ಹಾಡಲ್ಪಟ್ಟಿತು ನಂತರ ಸ್ವಾಮಿಗಳವರು "ನಾಡಹಬ್ಬವೆ ಮಹತ್ತು, ಕರ್ಣಾಟಕ ಏಕೀಕರಣದಲ್ಲಿ ವೀರಶೈವಾಚಾರ್ಯರು, ಕರ್ಣಾಟಕ ಏಕೀಕರಣದಿಂದಾಗುವ ಲಾಭಗಳು" ಇತ್ಯಾದಿ ವಿಷಯಗಳ ಬಗ್ಗೆ ೩ ದಿವಸ ತಮ್ಮ ಮಹತ್ವಪೂರ್ಣವಾದ ವಿದ್ವತ್ಪೂರ್ಣ ಭಾಷಣಗಳನ್ನಿತ್ತರು ಭಾಷಣವನ್ನು ಕೇಳಿದ ಸಾವಿರಾರು ಜನಗಳು ಬ್ರಿಟೀಷರ ಛೇದಧೋರಿತಿಯ ಫಲವಾಗಿ ಹರಿದು ಹಂಚಿಹೋದ ಕರ್ಣಾಟಕದ ಗತವೈಭವ ಮತ್ತು ಸದ್ಯದ ದುಸ್ಥಿತಿಯನ್ನು ನೆನೆದು ಕಣ್ಣೀರು ಸುರಿಸಿದರಲ್ಲದೆ ಕರ್ಣಾಟಕ ಏಕೀಕರಣದಿಂದಲೇ ಕನ್ನಡಿಗರು ಉಳಗಾಲವಲ್ಲದೆ ಬೇರೆ ಇಲ್ಲವೆಂದೂ, ಸದ್ಯದ ಪರಕಾರ್ಯ ಬಳ್ಳಾರಿಯ ಪೂರ್ವತಾಲ್ಲೂಕುಗಳಾದ ಆಲೂರು, ಆದವಾನಿ, ರಾಯದುರ್ಗಗಳನ್ನು ಕನ್ನಡಿಗರ ಕೈಯಿಂದ ಕಸಿದು ಆಂಧ್ರರಿಗೆ ಕೊಡಿಸುವದು ತೀರಾ ಅನ್ಯಾಯವೆಂದೂ, ಗಡಿ ನಿರ್ಧಾರ ಸಮಿತಿಯು ಗಡಿ ನಿರ್ಣಯ ಮಾಡುವವರೆಗೆ ಮಂತ್ರಿಮಂಡಲದ ಛೇದಪ್ರತಿಜ್ಞೆಯನ್ನು ಅಖಂಡ ಕನ್ನಡನಾಡಿನ ಬಂಧುಗಳೆಲ್ಲರೂ ನಿಷೇಧಿಸಬೇಕೆಂದೂ ಒಂದು ಗೊತ್ತುವಳಿಯನ್ನು ಪಾಸುಮಾಡಿದರು ಮತ್ತು ಮುಂದಿನ ಜನವರಿಯಲ್ಲಿ ಶ್ರೀಸ್ವಾಮಿಗಳವರಿಂದ ಕೂಡಿಸಲಿರುವ ಕರ್ಣಾಟಕ ಏಕೀಕರಣ ಸಂಸತ್ತಿಗಾಗಿ ಶ್ರಮಿಕರಣಪೂರ್ವಕ ಸೇವೆ ಸಲ್ಲಿಸುತ್ತೇವೆಂದು ವಾಗ್ದಾನಮಾಡಿದರು ತಾ॥ ೧೦ ಬುಧವಾರ ರಾತ್ರಿ ೧೦ ಘಂಟೆಯಿಂದ ೧೨ ಘಂಟೆ ಪರಿಯಂತರ ನಾಡದೇವಿಯ ಉತ್ಸವವು ಸಾನಾವಧಿ ವಾದ್ಯಗಳ ವೈಭವದಿಂದ ಅಭೂತಪೂರ್ವವಾಗಿ ಜರುಗಿ ರಾಮಲಿಂಗೇಶ್ವರ ದೇವಸ್ಥಾನಕ್ಕೆ ತಲುಪಿದ ಕೂಡಲೆ ನೆರೆದ ಸಾರ್ವಜನಿಕ ಸಭೆಯಲ್ಲಿ ಶ್ರೀಗಳವರು 'ವಿಜಯದಶಮಿಯೆಂದರೇನು' ಎಂಬ ವಿಷಯವಾಗಿ ೩ ಘಂಟೆ ಪರಿಯಂತರ ಭಾಷಣವನ್ನು ಮಾಡಿ ಸರ್ವರನ್ನು ಆಶೀರ್ವದಿಸಿದರು. ಮಧ್ಯಾಹ್ನ ಶ್ರೀಯಾಗಿದ್ದರೂ ಜನಗಳು ಕುಳಿತು ಶ್ರೀಗಳವರ ಉಪದೇಶವನ್ನು ಶ್ರವಣಮಾಡುತ್ತಿದ್ದರು. ಕಡೆಗೆ ಮಜಾನುಗಳಾಗಿರುವಾಗ ಪ್ರಸಾದವಿನಿಯೋಗವಾದನಂತರ ಸಭಾವಿಸರ್ಜನೆಯಾಯಿತು ಪರಮಪೂಜ್ಯಾಧಿಗಳವರು ಶಿವಲಿಂಗಪೂಜಾನಿಷ್ಠರೂ ಘನವಿದ್ವಾಂಸರೂ ಶಾಂತ ಮೂರ್ತಿಗಳೂ ಬಳ್ಳಾರಿ ಜಿಲ್ಲೆಯಲ್ಲಿ ೧೦ ಶಿವಯೋಗಮಂದಿರಗಳನ್ನು ಆರಂಭಿಸಿ ಏಕೀಕರಣ ಕಾರ್ಯಗಳನ್ನು ಆದುಗಿಸಿ ಪ್ರಸಿದ್ಧರಾದವರೂ ಶಾಖಾಮುಗ್ರಹ ಸಮರ್ಥರೂ ಆದ ಶ್ರೀ ಸ್ವಾಮಿಗಳವರು ಕರ್ಣಾಟಕಾತ್ರ ಶ್ರೇಯೋಭಿವೃದ್ಧಿಗಾಗಿ ಕರ್ಣಾಟಕ ಏಕೀಕರಣ ಕಾರ್ಯ ವನ್ನು ಕೈಗೊಂಡಿರುವದು ನಮ್ಮೆಗಳ ಸುದೈವವಲ್ಲದೆ ಬೇರೆಯಲ್ಲ! ಶ್ರೀಗಳವರು ಇದೇ ಕಾರ್ಯಕ್ಕಾಗಿ ಬಳ್ಳಾರಿಯ ಪೂರ್ವತಾಲ್ಲೂಕುಗಳಲ್ಲಿ ಪ್ರವಾಸಮಾಡಿ ಸಂಚಲನಪಡಿಸಲಿರುವರು. ಕನ್ನಡ ಜನಕ್ಕೆ ಸ್ವಾಮಿಗಳವರ ಕಾರ್ಯದಲ್ಲಿ ಸಹಕರಿಸಿ ಸೇವೆ ಸಲ್ಲಿಸುವಿರೆಂದು ಆಶಿಸ್ತಿದ್ದೇವೆ ಈ ಮಜಾಕಾರ್ಯದಲ್ಲಿ ತನುಮನಧನಗಳಿಂದ ಸೇವೆ ಸಲ್ಲಿಸಿ ಕೃತಾರ್ಥರಾದ ಮಹಾನ್ಪುರುಷರಲ್ಲಿ ಮತದ ಹಿಪ್ಪೆರಿದ್ದಸ್ವಾಮಿಗಳು, ವೇ॥ ಹಂದ್ಯಾಳ ಮತದ ದೊಡ್ಡಯ್ಯನವರು, ಡಾ॥ ಹೆಚ್. ಎಂ ಜಡೆಯ್ಯನವರು, ತಿರಿಗೇರಿ ಚಿ॥ ಮತದ ಟೀಚರ್ ಸೋಮಲಿಂಗಯ್ಯನವರು, ಶ್ರೀ ರೆಡ್ಡಿ ವೀರಭದ್ರಗೌಡರು, ಶ್ರೀ ಕರಣಂ ಗೋಪಾಲರಾಯರು, ಶ್ರೀ ದೊಡ್ಡಮಂಡಿ ಲಿಂಗಪ್ಪನವರು, ಶ್ರೀ ಬಂಡೂರು ದೊಡ್ಡಲಿಂಗಪ್ಪನವರು, ವೈಶ್ಯಬಂಧುಗಳು, ವೀರಣ್ಣ, ಮಲ್ಲಯ್ಯ ಮಾರೆಪ್ಪ ಮುಂತಾದ ಸಮಸ್ತ ಮಹಾಜನಗಳು ಆಶ್ರಾಪೂರ್ಣವಾದ ಸೇವೆಯು ವರ್ಣಾತೀತವಾದದ್ದೇ ಸರಿ ಈ ಮಹಾಕಾರ್ಯರುಗಳಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿಶ್ಚಮಂಗಲವನ್ನಿತ್ತು ಆಶಾಹಲಿಂಗ ಭವಿಸುತ್ತೇನೆ.

ಬಿ. ಎಂ. ಮಲ್ಲಯ್ಯಸ್ವಾಮಿ

ಪ್ರಚಲಿತ ಸಂಗ್ರಹ

ಹೊಂಗಾರ್ಡ್ ಶಿಬಿರಕ್ಕೆ ಮುತ್ತಿಗೆ

ಶಸ್ತ್ರಧಾರಿಗಳಾದ ಸುಮಾರು ೨೦ ಮಂದಿ ಪುಂಡರು ದರಾಜಾಪಿನ ಸುಬ್ಬರೆಡ್ಡಿಗುಂಪಲ್ಲಿರುವ ಹೊಂ ರ್ಡ್ ಶಿಬಿರವನ್ನು ಮುತ್ತಿ (೫ ತಿಂಗಳಲ್ಲಿ) ೧೬ ರೂಕುಗಳನ್ನೂ ಮದ್ದುಗುಂಡುಗಳನ್ನೂ ತೆಗೆದು ಂಡು ಹೋದರು. ಇದಕ್ಕೆ ಹಿಂದಿನ ದಿನ ನಾಡಿನಾದ್ಯಾದ್ಯಂತದಲ್ಲಿ ಪೋಲೀಸರಿಗೂ ಮತ್ತು ಪುಂಡರಿಗೂ ಡೆಯಾಟ ನಡೆದು ಬನಿಯಾ ಎಂಬ ಪ್ರೊಂಡರ ನಾಯಕನ್ನು ಕೊಂದರು. ಆತನು ಅನೇಕ ಕೊಲೆಗಳಿಗೆ ಣಕಾರಣದ್ದನೆಂಬ ಬನಿಯನ ಬಳ ಒಂದು ನಾಡು ದೂಳ ಮತ್ತು ಕಿಮ್ಮಾನಿಸ್ಸ್ ಸಾಹಿತ್ಯ ದೊರಕಿತು.

ಸೂಯೆಜ್ ಮಂಡಲದಿಂದ ಬ್ರಿಟಿಷ್ ಸೈನ್ಯ ಕಾಲ್ತೆಗೆಯದು

ಜಿಪ್ಟಿಗೆ ಬ್ರಿಟಿಷ್ ದಂಡನಾಯಕರ ಎಚ್ಚರಿಕೆ

ಈಜಿಪ್ಟ್‌ಸರಕಾರಕ್ಕೆ ಜ್ಞಾಪನೋದಯವಾಗುವವರೆಗೂ ಟಿಷ್ ಪಡೆಗಳು ಸೂಯೆಜ್ ಕಡಲ್ಕಾಲುವೆಯ ಂಡಲದಲ್ಲಿ ಇದ್ದೇ ಇರುವುವು ಎಂಬುದಾಗಿ ಈಜಿಪ್ಟಿ ರುವ ಬ್ರಿಟಿಷ್ ಮಿಲಿಟರಿ ಕಮ್ಯಾಂಡರ್ ಲೀ ಜಾ ' ಜಾರ್ಜ್‌ವಿಸ್ಸರಿಕರವರು ಎಚ್ಚರಿಸಿರುವರು.

ಬ್ರಿಟಿಷ್ ಪಡೆಗಳಿಗಾಗಿ ಕೆಲಸ ಮಾಡುತ್ತಿರುವ ಜಿಪ್ಟ್ ಕಾರ್ಮಿಕರುಮೇಲೆ ಫಿರಂಧ ಹೆಚ್ಚುತ್ತಿದೆ ಬುದಾಗಿ ವರದಿಯಾಗಿದೆ

" ನಮ್ಮ ಸ್ಥಾನಮಾನಗಳನ್ನು ರಕ್ಷಿಸಿಕೊಳ್ಳಲು ನಾವು ರುವುದಿಲ್ಲವೆ ತಮ್ಮ ಪಡೆಗಳ ಬಗ್ಗೆ ಈಜಿಪ್ಟಿಯನ್ನರು ಹಕಾರ ಭಾವನೆಯನ್ನು ತೋರಿಸುವುದು ಖಂಡಿತ ಜಿಪ್ಟ್ ಪ್ರಜೆಗೂಡಿಸಿ ನನಗೆ ವೈಷಮ್ಯವಿಲ್ಲ. ನಾವು ್ಯ ಹತ್ಯುಬಯ್ಯತೆಗಳಿಗಾಗಿ ಕಾದಾಡುವೆವು ನಮ್ಮನ್ನು ಟ್ಟಿಸಿನಂದ ಬಲಪ್ರಯೋಗದಿಂದ ಹೊರದೂಡ ದು " ಎಂದು ಅವರು ಸೈನ್ಯಕ್ಕೆ ಳಕುಹಿಸಿದ ಸಂದೇ ಲ್ಲಿ ವಿವರಿಸಿದ್ದಾರೆ.

ಸಂಚಾರಕ್ಕೆ ಅಡಚಣೆ

ಸೂಯೆಜ್ ಕಾಲುವೆಯ ಮಂಡಲದಲ್ಲಿರುವ ಬ್ರಿಟಿಷ್ ೀಕ್ಷಗಳಿಗೆ ಹೋಗುವ ಮಾರ್ಗಗಳಲ್ಲಿ ಈಜಿಪ್ಟಿನ ುತ್ತಿ ಪಡೆ ಸಂಚಾರವನ್ನು ನಿಲ್ಲಿಸಿದೆ. ಬ್ರಿಟಿಷರಿಗೆ ರವನ್ನು ಸಾಗಿಸುತ್ತಿರುವ ಲಾರಿಗಳನ್ನು ನಿಲ್ಲಿಸ ುತ್ತಿದೆ.

ಬ್ರಿಟಿಷ್‌ಪಡೆಗಳಿಗೆ ಸೇವೆಸಲ್ಲಿಸುವ ಕಾರ್ಮಿಕರ ಅನು ಪತ್ರಗಳನ್ನು ವಿಮುಕ್ತಿ ಪಡೆ ಕಿಸುಕುಳಿಕ್ಕುತ್ತಿದೆ.

ಅರಬ್ ರಾಷ್ಟ್ರಗಳ ಸಮಾಲೋಚನೆ

ಮಧ್ಯಪ್ರಾಚ್ಯದ ರಕ್ಷಣೆಯ ಬಗ್ಗೆ ನಾಲ್ಕು ರಾಷ್ಟ್ರಗಳು ತಿಸಿರುವ ಸಲಹೆಗಳನ್ನು ಕುರಿತು ಚರ್ಚಿಸಲು ಅರಬ್ ಷ್ಟ್ರಗಳ ವಿದೇಶಾಂಗ ಮಂತ್ರಿಗಳ ಸಮ್ಮೇಳನವನ್ನೇ ರಿಸಲು ತಮ್ಮ ತಮ್ಮ ರಾಷ್ಟ್ರಗಳಿಗೆ ಮನವಿಮಾಡಲು ್ ಲೀಗ್ ಪ್ರತಿನಿಧಿಗಳು ನಿರ್ಧರಿಸಿದ್ದಾರೆ.

ಬಿಯಾ, ಲೇಬನಾನ್, ಇರಾಕ್, ಸಾದಿಕರೇಬಿಯಾ, ನ್, ಮತ್ತು ಜಾರ್ಡಾನ್ ಪ್ರತಿನಿಧಿಗಳೊಡನೆ ಸ್ಟ್ ವಿದೇಶಾಂಗ ಸಚಿವರಾದ ಸಲಾ ಎಲ್‌ದಿನ್ ಾರವರು ಚರ್ಚಿಸಿದ್ದಾರೆ

ಬ್ರಿಟಿಷ್ ಪಡೆಗಳ ನಿರ್ಗಮನವೇ ಬಿಕ್ಕಟ್ಟಿನ ಪರಿಹಾರ ಮಾರ್ಗ

ಈಜಿಪ್ಟ್ ಒಕಾಡಳಿತ ಸಚಿವರ ಎಚ್ಚರಿಕೆ

ಸೂಯೆಜ್ ಕಡಲ್ಕಾಲುವೆ ಮಂಡಲದಲ್ಲಿ ಹಿಗಿನ ಭೂದಲ್ಲಿ ಪರಿಸ್ಥಿತಿ ಬಹಳ ಅಪಾಯಕಾರಿಯಾಗಿದೆ. ಜ್ ಪಡೆಗಳು ಈಜಿಪ್ಟ್ ರಾಷ್ಟ್ರದಲ್ಲಿರುವವರೆಗೂ ತ ಶಾಂತಿ ನೆಲೆಯುಕ್ತಿಲೆ ಇರುವುದು—ಎಂಬು ಈಜಿಪ್ಟಿನ ಒಕಾಡಳಿತ ಸಚಿವರಾದ ಸೆನಾ ಎಲ್ ಬಾಕಾರವರು ಎಚ್ಚರಿಸಿರುವರು.

" ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿವಾರಿಸಲು ಕೇವಲ ಒಂದೇ ಮಾರ್ಗವಿದೆ ಬ್ರಿಟಿಷ್ ಪಡೆಗಳ ನಿರ್ಗಮನವೇ ಈ ಬಿಕ್ಕಟ್ಟನ್ನು ಒಗೆದರಿಸಬಲ್ಲದು ಬ್ರಿಟಿಷ್ ಪಡೆಗಳು ಕಾಲ್ತೆಗೆದರೆ ಉಭಯ ರಾಷ್ಟ್ರಗಳ ಮಧ್ಯೆ ಸಂಧಾನಕ್ಕೆ ಹೆಚ್ಚು ಅವಕಾಶವಿರುವುದು ಉಭಯ ರಾಷ್ಟ್ರಗಳ ಸಂಬಂಧ ಬಾಂಧವ್ಯದ ಬಗ್ಗೆ ಮಧ್ಯಸ್ಥಿಕೆಯ ರಾಯಭಾರಗಳನ್ನು ನಡೆಸಬಹುದು.

ಕಾಲುವೆಯ ಮಂಡಲದಿಂದ ತ್ವರಿತ ಸರಬರಾಜನ್ನು ಬ್ರಿಟನ್ ನಿಲ್ಲಿಸಿದೆ ಈ ಬಗ್ಗೆ ಈಜಿಪ್ಟ್ ಸರ್ಕಾರ ತೀವ್ರ ತಾಗಿ ಯೋಚಿಸುತ್ತಿದೆ. ಪೆಟ್ರೋಲ್ ಕೊರತೆಯಿಂದ ಸಂಚಾರ ವ್ಯವಸ್ಥೆ ನಿಂತುಹೋಗುವುದು. ಈಜಿಪ್ಟ್ ಪ್ರಜೆಗಳೇ ಆಷ್ಟಿದೆ ತಕರರೂ ಈ ಬಗ್ಗೆ, ಕಷ್ಟಪಡಬೇಕಾಗುವುದು ಇದರಿಂದ ಈಜಿಪ್ಟ್ ಸರ್ಕಾರ ಮತ್ತು ಪ್ರಜೆಗಳ ಮೇಲೆ ಪ್ರಭಾವ ಬೀರಲು ಬ್ರಿಟಿಷರು ವ್ಯರ್ಥಪ್ರಯತ್ನ ಮಾಡಿದಂತಾಗುವುದು "—ಎಂದರು

ಬ್ರಿಟಿಷರ ವಿರುದ್ಧ ಪಾಕಿಸ್ತಾನ್ ವಿದ್ಯಾರ್ಥಿಗಳ ಪ್ರದರ್ಶನ

ಲಾಹೋರ್‌ನಲ್ಲಿ ೫೦೦ ವಿದ್ಯಾರ್ಥಿಗಳು ಬ್ರಿಟಿಷ್ ಹೈಕಮಿಷನರ್ ಕಛೇರಿಯ ಬಳ ಪ್ರದರ್ಶನ ನಡೆಸಿದರು "ಬ್ರಿಟಿಷ್ ಸಾಮ್ರಾಜ್ಯಶಾಹಿ ನಾಶವಾಗಲಿ" " ಫರೂಕ್ ದೊರೆ ಚಿರಾಯುವಾಗಲಿ!" 'ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಕಳ್ಳರನ್ನು ಬಹಿಷ್ಕರಿಸಿ!' " ಅಂಗ್ಲೊ ಅಮೆರಿಕನ್ ಒಕ್ಕೂಟ ಭಗ್ನವಾಗಲಿ!" " ಬ್ರಿಟಿಷ್ ಧ್ವಜವನ್ನು ಕಿತ್ತೆಸೆಯಿರಿ!" 'ಈಜಿಪ್ಟ್ ಧ್ವಜವನ್ನು ಮೇಲೇರಿಸಿ!'—ಎಂದು ಅವರು ಘೋಷಿಸಿದರು ಅವರು ಹಿಂದು ನಿರ್ಣಯವನ್ನು ಮಾಡಿ ಹೈಕಮೀಷನರ್‌ರವರಿಗೆ ಕೊಟ್ಟರು. ಬ್ರಿಟಿಷ್ ಪಡೆಗಳು ಸೂಯೆಜ್ ಮಂಡಲವನ್ನು ತ್ಯಜಿಸಬೇಕೆಂದು ಎಚ್ಚರಿಸಲಾಗಿದೆ

ಸೂಯೆಜ್‌ಗೆ ಬ್ರಿಟಿಷ್ ಸೈನ್ಯ ವಿಮಾನಗಳಿಂದ ರವಾನೆ

ಸೂಯೆಜ್ ಕಡಲ್ಕಾಲುವೆಯ ಮಂಡಲಕ್ಕೆ ಬ್ರಿಟನ್, ಟ್ರಿಪೋಲಿ ಮತ್ತು ಸೈಪ್ರಸ್‌ನಗಳಿಂದ ಹೆಚ್ಚು ಬ್ರಿಟಿಷ್ ಸೈನಿಕರನ್ನು ವಿಮಾನದಲ್ಲಿ ರವಾನಿಸಲಾಗುತ್ತಿದೆ.

ಸೂಯೆಜ್ ಕಾಲುವೆಯ ಮಂಡಲದಲ್ಲಿ ಬ್ರಿಟಿಷ್ ಸೈನಿಕರು ಹಗಲಿರುಳು ಕಾವಲು ಕಾಯುತ್ತಿದ್ದಾರೆ.

ಅಧಿಕಾರಲಾಲಸೆ ನನಗಿಲ್ಲ
ಶ್ರೀ ಜೆ. ಹೆಚ್. ಪೈಷ್ಟಾನಿ

ಅಧಿಕಾರಕ್ಕೆ ಬರಬೇಕೆಂಬ ಬಯಕೆಯಿಂದ ನಾನು ಪಕ್ಷವನ್ನು ಕಟ್ಟಿಲ್ಲ ನನಗೆ ಅಧಿಕಾರಲಾಲಸೆ ಇಲ್ಲ ಅಧಿಕಾರದಲ್ಲಿರುವ ಪಕ್ಷದ ದುರಾಡಳಿತವನ್ನು ಕೊನೆಗಾಣಿಸಿ ಪ್ರಜಾಹಿತಸಾಧನೆ ಮಾಡಬೇಕೆಂಬ ಏಕೈಕ ಆಭಿಲಾಷೆಯಿಂದ ಜಾತೀಯಪಕ್ಷಕಟ್ಟಿದೆ ನಾಲ್ಕು ಜಿಲ್ಲೆ ಕೋಟಿ ಕೆಯಂತೆಯೂ ಪ್ರಜಾಪ್ರಭುತ್ವದಲ್ಲಿ ಬಲವಾದ ವಿರೋಧ ಪಕ್ಷವಿಲ್ಲದೆ ಸರ್ಕಾರ ಸರಿಯಾಗಿ ನಡೆಯದೆಂಬ ಧ್ಯೇಯದ ಮೇಲೆಯೂ ಈ ಹೊಸಪಕ್ಷ ಕಟ್ಟಿದೆ ಎಂದು ಅಖಿಲ ಭಾರತ ಕಿಸಾನ್ ಮಜ್ದೂರ್ ಪ್ರಜಾಪಕ್ಷದ ನಾಯಕರಾದ ಆಚಾರ್ಯ ಶ್ರೀ ಜೆ ಬಿ ಕೃಪ್ಟಾನಿಯವರು ಬೆಂಗಳೂರಿಲ್ಲಿ ನಡೆದ ಮೈಸೂರು ಪ್ರಾಂತೀಯ ಕಿಸಾನ್ ಮಜ್ದೂರ್ ಪ್ರಜಾಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಭಾಷಣಮಾಡುತ್ತಾ ತಿಳಿಸಿದರು.

ಸತ್ಪತ್ರರ ಚಿನ್ನದ ಹಲ್ಲುಗಳಿಗಾಗಿ ಸಾವಿರ ಗೋರಿಗಳನ್ನು ಅಗಿದರು .

ಏನಾವ ದುರಂತದಲ್ಲಿ ಸತ್ಪತ್ರರನ್ನು ಹೂಳಲಾಗಿರುವ ಟೋಕಿಯೋ ನ್ಗರವಿನ ಅರು ಸಹಸ್ರ ಗೋರಿಗಳಲ್ಲಿ ಅನೇಕ ಗೋರಿಗಳನ್ನು ಅಗಿದು ಹೂಳಲ್ಪಟ್ಟಿದ್ದವರ ಒಂದು ಸಹಸ್ರ ಬಂಗಾರದ ಹಲ್ಲುಗಳನ್ನು ಕಿತ್ತಿದ್ದ ೩೩ ಕಳ್ಳಸಾಗರಿಕ್ಕು ಪೋಲೀಸರು ಬಂಧಿಸಿದರು. ಈ ಕಳ್ಳಸಾಗರು ಬಂಗಾರದ ಹಲ್ಲುಗಳಿಗಾಗಿ ಒಂದು ಸಹಸ್ರ ಗೋರಿಗಳನ್ನು ಅಗಿರುವುದಾಕ್ಕೆರುಜುಕ್ಕಿದೆ.

ಡಾರ್ಜಿಲಿಂಗ್‌ನಲ್ಲಿ ಪ್ರವಾಸಿಗರ ಸಂದಣಿ

ಈ ವರ್ಷ ಆಕ್ಟೋಬರಿನಲ್ಲಿ ಡಾರ್ಜಿಲಿಂಗಿಗೆ ಬಂದಿಳಿದ ಜನ ಪ್ರವಾಸಿಗರು ಹಿಂದೆಂದೂ ಬಂದಿರಲಿಲ್ಲ ಸುಮಾರು ೭೦೦೦ ಮಂದಿ ಇಲ್ಲಿನ ಹೋಟೆಲುಗಳು, ಡಾಕ್‌ಬಂಗಲೆಗಳು,ಖಾಸಗಿ ಗೃಹಗಳಲ್ಲಿ ತುಂಬಿದ್ದರು. ಟೆಲಿಫೋನ್ ಆಪರೇಟರುಗಳೂ ಮತ್ತು ಅಂಚೆ ಇಲಾಖೆಯವರೂ ಕೆಲಸಮಾಡುವುದು ತುಂಬಾ ಕಷ್ಟವಾಯಿತು. ಸಣ್ಣ ವ್ಯಾಪಾರಿಗಾರರಿಗೆ ಇದರಿಂದ ಕೊಂಚ ಹೆಚ್ಚಿನ ಪಂಚಾಡನ್ನೆಗೆ ಅವಕಾಶವಾಯಿತು ಮುಂದಿನ ವೇಸಿಗೆಯಲ್ಲಿ ಇನ್ನೂ ಹೆಚ್ಚಿನ ಜನಕ್ಕೆ ಸೌಕರ್ಯ ಕಲ್ಪಿಸುವ ಪ್ರಯತ್ನ ನಡೆದಿದೆ

ಕೆಳದರ್ಜೆಯ ರೈಲ್ವೆ ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯ

ರೈಲ್ವೆಗಳಲ್ಲಿ ಕೆಳದರ್ಜೆ ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯ ಕಲ್ಪಿಸಲು ಮುಂದಿನ ೫ ವರ್ಷಗಳಲ್ಲಿ ೬ ಕೋಟಿ ರೂ ವೆಚ್ಚಮಾಡಲಿರುವುದಾಗಿ ರೈಲ್ವೆ ಸಚಿವರಾದ ಶ್ರೀ ಎನ್. ಜಿ ಅಯ್ಯಂಗಾರ್ಯರು ಬೊಂಬಾಯಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

ಮದ್ರಾಸಿಗೆ ರಾಜಾಜಿಯವರ ಆಗಮನ

ಭಾರತ ಸರಕಾರದ ನಿವೃತ್ತ ಗೃಹಸಚಿವರಾದ ಶ್ರೀ ಸಿ. ರಾಜಗೋಪಾಲಾಚಾರ್ಯರು ಮದ್ರಾಸಿಗೆ ದೆಹಲಿಯಿಂದ ತಮ್ಮ ಪುತ್ರಿಯೊಡನೆ ಆಗಮಿಸಿದರು. ಮದರಾಸಿನ ಗವರ್ನರು, ಮಂತ್ರಿಗಳು ಅನೇಕ ಮಂದಿ ಮಿತ್ರರು ಅವರಿಗೆ ಸ್ವಾಗತ ನೀಡಿದರು.

ಸಿಂಧ್ರಿ ಗೊಬ್ಬರದ ಕಾರ್ಖಾನೆ

ದೆಹಲಿಯಲ್ಲಿ ಸಿಂಧ್ರಿ ಗೊಬ್ಬರದ ಕಾರ್ಖಾನೆಯು ಆ ೩೦-೩೧ ನೇ ತಾ|| ಮಧ್ಯರಾತ್ರಿಯಿಂದ ತಯಾರಿಕೆಯನ್ನು ಆರಂಭಿಸಿದೆ ಈ ಕಾರ್ಖಾನೆಯ ಸ್ಥಾಪನೆಗೆ ೩೩ ಕೋಟಿ ರೂ. ವೆಚ್ಚವಾಗಿದೆ.

ಇನ್ನು ೫-೬ ತಿಂಗಳೊಳಗೆ ಕಾರ್ಖಾನೆಯಲ್ಲಿ ದಿನಕ್ಕೆ ೧೦೦ ಟನ್ ಅಮೋನಿಯಂಸಲ್ಫೇಟ್ ತಯಾರಿಸುವೆಂ ತಾಗುವುದೆಂದು ನಂಬಲಾಗಿದೆ.

ಮೈಸೂರಿನ ಶ್ರೀಮನ್ಮಹಾರಾಜರು ಉಜ್ವಲ ರಾಷ್ಟ್ರ ಪ್ರೇಮಿಗಳು

" ಮೈಸೂರು ಸಂಸ್ಥಾನವು ಇತರ ವಿಷಯಗಳಲ್ಲಿ ಪ್ರಗತಿಕರ ಸಂಸ್ಥಾನವೆಂದು ಖ್ಯಾತಿಪಡೆದಿರುವಂತೆಯೇ ಸಂಸ್ಥಾನಗಳ ವಿಲೀನೀಕರಣದಲ್ಲಿಯೂ ಇಡೀ ರಾಷ್ಟ್ರಕ್ಕೆ ಮಾರ್ಗದರ್ಶಕವಾಗಿದ್ದಿತು ಮೈಸೂರು ಸಂಸ್ಥಾನದ ಪ್ರಜೆಗಳು ವಿಶೇಷವಾಗಿಯೂ ಅದೃಷ್ಟಶಾಲಿಗಳು ಮೈಸೂರಿನ ಶ್ರೀಮನ್ಮಹಾರಾಜರಲ್ಲಿ ಉಜ್ವಲ ರಾಷ್ಟ್ರಪ್ರೇಮಿಗಳು ಅವರು ಸಮಸ್ತ ಭಾರತದ ಶಿಖಾಮಣಿಯೆನಿಸಿರುವುದು ಮಹತ್ಸಾಧ್ಯರು. ಅವರಿಗೆ ಇಡೀ ಭಾರತವೆಲ್ಲಾ ಒಂದೇ. ಇವರು ರಾಷ್ಟ್ರದ ಸೇವಕರೆಂದು ಭಾವಿಸಿದ್ದಾರೆ- ಇವರಿಗಿಂತ ಹೆಚ್ಚಿನ ವಿದ್ಯಾವಂತರೂ, ವೇಶಾಭಿಮಾನಿಗಳೂ ಅವರ ಆಸನದಲ್ಲಿ ಇನ್ನು ಬೇರೆ ನೋಡಿಲ್ಲ "—ಎಂಬುದಾಗಿ ಇಂದಿಯ ಸರ್ವಾರದ ಸಂಸ್ಥಾನಗಳ ಮಂತ್ರಿಪ್ರಾಬಲ್ಯದ ಮಾಜಿ ಕಾಶ್ಮೀರಿಗಳೂ, ಒರಿಸ್ಸದ ಮಾಜಿ ಗವರ್ನರೂ ಆದ ಶ್ರೀ ಎಂ ಪಿ ಮೆಪ್ಪನ್‌ರವರು ಬೆಂಗಳೂರು ಬಸವನಗುಡಿಯಲ್ಲಿರುವ ಬಿ ಎಂ. ಶ್ರೀನಿವಾಸಯ್ಯಂಗಾರ್ ಬೆಂಗ್ ಕಾಲೇಜಿನ ಸಂಸ್ಥೆದ ಅಭ್ಯುದಯದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಅ ಬಗ್ಗೆ ಕನ್ನಡಿಗರ ಬಗೆ

ಲೇ —ಶ್ರೀ॥ ಷ ಬ್ರ॥ ಜಾಲಬ್ಬಹಸ್ಪತಿ ಗಂಗಾಧರಶಿವಾಚಾರ್ಯ
ಮಹಾಸ್ವಾಮಿಗಳವರು ಮರಬ ಜಡೆಯಬ್ಬಹಸ್ಪರ
ಶ್ರೀಜಗದ್ಗುರು ವಿಶ್ವಾರಾಧ್ಯಕೀಸಾಶ್ರಮ, ಬೈಲಹಂಗಲ

ಓಂಕಾರವು ಹಿಂದೂಜನಾಂಗಕ್ಕೆ ಪರಮಪೂಜ್ಯ ಅಕ್ಷರವಾಗಿದೆ ನಿಖಿಲವಾಙ್ಮಯಮಾತ್ರ ಜೀವನವನ್ನುತ್ತು ವೆಂದು, ಪರಬ್ರಹ್ಮವಾಚಕವೆಂದು, ಸ್ವನ್ನಾದವೆಂದು, ಪ್ರಪಂಚದ ಮೂಲಾಕ್ಷರವೆಂದು ಅನೇಕರೀತಿಯಿಂದ ಗನೋಪಸಿಷತ್ತುಗಳಲ್ಲಿ ವರ್ಣಿತವಾಗಿದೆ "ಓಂಕಾರ ಶುದ್ಧಿಕಾಯುಟಮೌತ್ಪಿಕಂ" ಓಂ ಎಂಬುದು ಚಿಟ್ಟಿನೊಳಗಿನ ತೊರೆಮುತ್ತು ಎಂಬುದಾಗಿ ರೇಣುಕಗೀತೆಯಲ್ಲಿ ಶಿವಯೋಗಿಶಿವಾಚಾರ್ಯರು ಶಿವನನ್ನು ಬಣ್ಣಿಸಿರುವದು ಅಕರ್ಷಕವೆನ್ನಿಸಿದೆ ಈ ಸೃಷ್ಟಿಯೊಳಗಿನ ಪ್ರತಿಯೊಂದು ಅಣುವು ತನ್ನ ನಿಸರ್ಗನಿಯಮದಂತೆ ಉತ್ಪಾದ್ಯತ್ವ ವೈದ್ಧಿತ್ವ-ವಿಲಯತ್ವಗಳಿಗೆ ಕಾರಣವಾಗಿ ತಿರುಗುವಹಾಗೆ ಪ್ರಣವದ ಅವಯವಾಕ್ಷರಗಳಾದ ಅ ಉ ಮ್ ಗಳು ಸಹ ಉತ್ಪಾದ್ಯತ್ವ-ವೈದ್ಧಿತ್ವ ವಿಲಯತ್ವಗಳಿಗೆ ಕಾರಣ ವಾಗಿರುವವು ಏನೊಂದು ಭಾಷವಿಲ್ಲದೆ ಕೇವಲ ಸುಪ್ತ ಸ್ಥಿತಿಯಲ್ಲಿ ಬೆಳೆದ ಗರ್ಭಸ್ಥ ಶಿಶುವು ಜನಿಸಿದ ತಕ್ಷಣ ಅ ಎಂಬ ಸ್ವರವು ಅದರ ಕಂಠದಿಂದ ಹುಟ್ಟುತ್ತದೆ ಮುಂದಿನ ತುಟಿಗಳ ಮಾತ್ರದಿಂದ ಅದೇ ಉಳಾತವಾಗಿ ಬೆಳೆದು ಮುಂದೆ ಆ ತುಟಿಗಳಿಂದ ಆ ಸ್ವರವನ್ನು ಮುಚ್ಚುವಾಗ ಮ್ ಎಂಬ ಅನುನಾಸಿಕಾದ್ಯವು ಹುಟ್ಟಿ ವಿಲಯವಾಗುವದು ಇಂತು ಆ ಉ ಮ್‌ಗಳಿಂದ ಕೂಡಿದ ಓಂಕಾರದ ಉಚ್ಚಾರವು ಮನುಷ್ಯ ಪ್ರಾಣಿಗೆ ಹುಟ್ಟು ಜೊತೆಗೆ ಸಾವು ಈ ಮೂರು ಮಾತ್ರೆಗಳ ಸ್ಥಿತಿ ರೀತಿಯ ಭಾವವನ್ನು ಬಿತ್ತರಿಸುತ್ತಲಿದೆ ಅದ್ದರಿಂದ ಅಕಾರವು ಸೃಷ್ಟಿಕಾರಣವಾದ ಬ್ರಹ್ಮನೆಂತಲೂ ಉಕಾರವು ಸ್ಥಿತಿಕರ್ತನಾದ ವಿಷ್ಣುವೆಂತಲೂ ಮ್ ಕಾರವು ಲಯಾಧಿಪನಾದ ರುದ್ರನೆಂತಲೂ ಈ ಮೂರು ಅಕ್ಷರಗಳಿಗೆ ನೆಲೆಯಾದ ಓಂಕಾರವೆ ತ್ರಿಮೂರ್ತಿಗಳಿಗೆ ನೆಲೆಯಾದ ಪರಮಾತ್ಮ ನೆಂತಲೂ ಕಣಿಎನಾಗಿದೆ ಸಿದ್ಧಾಂತಶಿಖಾಮಣಿಯಲ್ಲಿ ಶ್ರೀ ರೇಣುಕಭಗವತ್ಪಾದರು ಈ ವಿಷಯವನ್ನು ವಿವರಿಸಿ ಕರಿಸಿದುವರು ಸದ್ಯಕ್ಕೆ ಪ್ರಾಮುಖ್ಯವಾಗಿ ಆಕಾರವನ್ನು ಕುರಿತು ಧಾರಾಳವಾಗಿ ವಿವೇಚಿಸಲಾಗುತ್ತಿದೆ

"ಅಕ್ಷರಗಳಲ್ಲಿ ನಾನು ಅ ' ಇಂತೆಂದು ಭಗವದ್ಗೀತೆ ಯಲ್ಲಿ ಶ್ರೀಕೃಷ್ಣನು ಸಾರಿದ್ದಾನೆ 'ಆಂ ಪರಮಾತ್ಮಾನಂ ಗಚ್ಛತೀತಿ" ಎಂದು ಅಂ ಕಬ್ದದ ವ್ಯಾಖ್ಯಾನವನ್ನು ಶಿವಾನುಭವಿಗಳು ನಿರ್ದೇಶಿಸಿದ್ದಾರೆ ಈ ಬಗೆಯಾಗಿ ಅಕಾರಾರ್ಥವು ಪರಮಾತ್ಮನಿಗೆ ಯಾವಾಗಲೂ ಇದೆ ಎಂಬ ವದು ಸುಸ್ಪಷ್ಟವಾಗುತ್ತಲಿದೆ. ಇದು ಪರಶಿವನಿಗೆ ಯಾರೊಬ್ಬರು ಇಟ್ಟ ಹೆಸರು ಅಲ್ಲ ಕರೆದುದೂ ಅಲ್ಲ ಸ್ವಯಂಪ್ರೇರಿತ ಕಾಲಾತೀತ ಶಬ್ದವಾಗಿದೆ ಒಂದು ಶಬ್ದವು ಒಂದಿಲ್ಲೊಂದು ಅರ್ಥವನ್ನು ಕೊಡುವಂತೆ ಆ ಸಹ ಅಕ್ಷರ್ಧಾರೋಧರವೆಂದು ಸಿದ್ಧವಾಯಿತಷ್ಟೆ! ನಾಲಗೆ ಇಲ್ಲದ ಮೂಕಮಂಕರು ಕೂಡ ಇದನ್ನು ಉಚ್ಚೆ ವಿಸಬಲ್ಲರು ಪಕ್ಕ ನೊದಲಾಗಿ ಅಂಬಾ ಎಂಬ ಅನ್ನೆ ಉಚ್ಚರಿಸುವವು ಲೋಕದಲ್ಲಿ ಯಾವನೊಬ್ಬ ಮನುಷ್ಯನು ಜಾಡಗಾರನ ವಿಚಿತ್ರ ಚಮತ್ಕಾರವನ್ನು ಕಣ್ಣಾರೆ ಕಂಡು ಬದಿಯ ಗೆಳೆಯನಿಗೆ ಆತುರದಿಂದ ಕರೆದು ತೋರಿಸುವಂತೆ ಜೀವಾತ್ಮನು ಪರಶಿವನ ಅನಾಧ್ಯವಾದ ಅದ್ಭುತ ಲೀಲಾವೈಚಿತ್ರಿಯನ್ನು ನೋಡಿ ಹೌಹಾರಿ ಆ ಅಭಿಪ್ರಾಯದಿಂದಲೆ ಜನ್ಮಜನ್ಮಗಳಲ್ಲಿ ತಿವನನ್ನು ಕರೆಯುತ್ತ ಬಂದಿದ್ದಾನೆ ಅಂತೆಯೆ ಪ್ರತಿಯೊಬ್ಬರು ಆ ನಾಮಕರಣವನ್ನು ಪರಶಿವನಿಗೆ ಗೊತ್ತುಪಡಿಸಿರುವರು ಇನ್ನು ಕೆಲವರು ಆ ಕೈ ಇಲ್ಲವೆಂಬ ಅರ್ಥವನ್ನು ಕಲ್ಪಿಸಿ ಶೂನ್ಯಾರ್ಥದೊಳಗೆ ಎಳೆದಿದ್ದಾರೆ ಆ ಶೂನ್ಯಗಾಮಿ ವಾದರು ಪರಮಾತ್ಮನ ನಿರ್ಗುಣತಾಮಮಾನಿದೆ ಈ ತೆರ ನಾದ ಶೂನ್ಯಮೂರ್ತಿಗೆ ಮಹಮ್ಮದೀಯರು ಅಲ್ಲಾ ಎಂದಿದ್ದಾರೆ ಪೈಗಂಬರರಿಗೆ ಅದಂ ಎಂದರು ಜೈನರು ಅರ್ಹಂ ಎಂದರು ಕನ್ನಡಿಗರಾದು ಆ ಕೈ ಆಕ್ಷತವಾದು ದನ್ನೆಲ್ಲ ಆ ಎಂಬ ದರ್ಶಕಪದದಲ್ಲಿ ತೋರಿಸಿದ್ದಾರೆ ಆ ಎನೆ ತಾನು ಆ ಎನಲು ತನಗೆ ತೊರಹಾದುದು ಈ ರೀತಿ ಆ ಅಂಗು ಅತ್ಯನಾತ್ಮಭಾವನೆಯನ್ನು ವಿಕಾರವಾಗಿ ಸಾರತಕ್ಕವುಗಳಾಗಿವೆ ಅದಪ್ರಯುಕ್ತ ಇನ್ನುಗಳಿಗೆ ಹೆಚ್ಚಿನ ಬೆಲೆ, ಪ್ರಣ ಜನಂಗವು ಶಿಕ್ಷಣದ ಮೂಲಾಕ್ಷರ ಕೆಂದು ಆರಂಭದಲ್ಲಿ ಇವನ್ನು ತಿಂಸುತ್ತ ಬಂದಿದ್ದಾರೆ ವ್ಯಾಕರಣಶಾಸ್ತ್ರದ ಪ ಣಿನಿಯು ಆ ಇ ಉಣ್ ಋ ಕ ಎಂದು ವ್ಯಾಕರಣಸೂತ್ರಗಳನ್ನು ಆರಂ ಭಿಸಿದ್ದಾನೆ ಭಾರತವಲ್ಲದ ಎಸ್ಪೋ ಪಾಶ್ಚಿಮಾತ್ಯ ಶಿಕ್ಷಣಕಲೆಯು ಆರಂಭವು ಕೂಡ ಎ ಎಂದರೆ ಆಕಾರ ದಿಂದ ಮಾಡಲ್ಪಡುತ್ತಿದ ನಮ್ಮ ಲಿಪಿಗೆ ಬಿಪಿಗೆ ಮೊದಲಾಗುತ್ತಿರುವದು ಗಮ ನಾರ್ಹವಿಸಿದೆ ಆದರೆ ಆ ಕೈ ಹೆಚ್ಚು ಕೆಚ್ಚಾಗಿ ಬೆಳೆ ಸಿಂಡಿದವರು ಕನ್ನಡಿಗರೇ ಆರಿವೆಂಬುದು ಸತ್ಯತವು! ಇವರನ್ನುಳಿದ ಭಲೆಯವರು ಇದರ ವಿಶಿಷ್ಟತೆಯನ್ನು ಶ್ರೇಷ್ಠತೆಯನ್ನು ಅಷ್ಟೊಂದು ಮನಗಾಣಲಿಲ್ಲವೆನ್ನೆಂಬುದು ಜಾಣರು ಅರಿತ ಸಂಗತಿಯಾಗಿದೆ

ಎಸ್ಪೋಜನರು ತಮ್ಮ ಮೂಲದೇವರಿಗೆ ಮತ್ತು ಮೂಲಭಾಷೆಗಳಿಗೆ ಆಕಾರಾದಿ ಶಬ್ದವನ್ನು ಅಂದರೆ ಅತ್ಯ ಅರ್ಹಂತ ಅದಿನಾಥ ಅಲ್ಲಾ ಆದಂ ಆಚಾರ್ಯ ಹೀಗೆ ಮೊದಲು ಆ ಅನ್ವರ್ಯಿಸಿದ್ದಾರೆ ಕನ್ನಡಿಗರು ಮಾತ್ರ ಮೂಲದೇವ ಮತ್ತು ಪುರುಷರಿಗಷ್ಟೆ ಅಲ್ಲ ತಮಗೆ ಪೂಜ್ಯರಾದ ಗುರು ಹಿರಿಯರಿಗೆ ಅವರ್ಣಾದಿಯಾದ ಶಬ್ದಗಳನ್ನೇ ಬಳಸುತ್ತ ಬಂದಿರುತ್ತಾರೆ ದೇವರಿಗೆ ಆತ್ಮ, ಗುರುಗಳಿಗೆ ಅಯ್ಯ, ತಂದೆಗೆ ಅಪ್ಪ ತಾಯಿಗೆ ಅವ್ವ, ತಂದೆಯ ತಂದೆಗೆ ಅಜ್ಜ, ಅಜ್ಜನ ಹೆಂಡತಿಗೆ ಅಜ್ಜಿ ಇಲ್ಲವೆ ಅಮ್ಮ, ತನಗಿಂತ ಮೊದಲು ಹುಟ್ಟಿದವರಿಗೆ ಅಣ್ಣ ಅಕ್ಕ, ತಂದಯ ತಂಗಿಗೆ ಅತ್ತೆ ಹೀಗೆ ಇವರು ಆಕಾರಾದಿಯಾದ ಶಬ್ದಗಳನ್ನೆ ಬಳಸುತ್ತಿದ್ದಾರೆ ಇತರ ವಾಙ್ಮಯದಲ್ಲಿ ಇಸಿತಾ ಇಸಿಗಾದ ಸರಳ ರಮಸ್ಸೃಣಾಗಿ ಶಬ್ದಗಳು ಆಸ್ವಾಭಾವಿಕ ಶಬ್ದಗಳಲ್ಲಿ ಸಾತಾಳಗಡೆ ಹಾಕಿ ಹುಡುಕಿದರು ಇಂದುಬಾರವು ಹಿಂದಿಯಲ್ಲಿ ಮಾಯಿ ಬಾಪ್ ಭಾಯಿ ಮುಸಲ್ಮಾನ್ಸಿಯಲ್ಲಿ ಬಾಪ-ಭಾಯಿ ಮರಾಠಿಯಲ್ಲಿ ಆಯಿ ಬಾಪ-ಭಾವು ಇನ್ನು ಇಂಗ್ಲೀಷಿ ನಲ್ಲಿ ಮದರ್ ಫಾದರ್ ಬ್ರದರ್ ಆರ್ಯಸಂಸ್ಕೃತಿಯ ಮುಖ್ಯಭಾಷೆಯಾದ ಸಂಸ್ಕೃತದಲ್ಲಿ ಮಾತೃ ಪಿತೃ ಭ್ರಾತೃ ಅಂತಹ್ಯರ್ಗಳು ಒಂದಾಗಿದ್ದರು ಆದ್ಯಾಕ್ಷರ ಗಳು ಛಿನ್ನವಾಗಿವೆ ಒರ್ಧದಾಯಶಕ್ತವಾಗಿದ್ದರು ವಿಕಾ ಕ್ಷರಸಂಬಂಧವಿಲ್ಲವಾಗಿದ

ಒಟ್ಟಾರೆ ಕನ್ನಡದಲ್ಲಿ ಕೆರಿಯರು ಹಿರಿಯರಿಗೆ ಸಂ ಬೋಧಿಸುವ ಶಬ್ದಗಳಲ್ಲಿ ಬಹುತರವಾಗಿ ಆಕಾರಾದಿ ಯಾವವುಗಳೇ ಆಗಿವೆ ಇನ್ನು ಹಿರಿಯರು ಕಿರಿಯರಿಗೆ ಸಂಬೋಧಿಸುವ ಶಬ್ದಗಳು ಮಾತ್ರ ಹೆಚ್ಚು ವ್ಯವಹಾರ ಜ್ಞಾನಮಯಗಳಾಗಿವೆ ಕೇವಲ ಸಂಬಂಧವಾಚಕಗಳಾ ಗಿನೆ ಮೊದಲಿನ ಪೂಜ್ಯಾಚಕಶಬ್ದಗಳು ಗುರುಹಿರಿಯ ರಿಂದ ಚಿಕ್ಕವರಿಗೆ ಕಲಿಸಲ್ಪಡತಕ್ಕವು ಆಗಿವೆ ಹಿರಿಯರು ಸಣ್ಣವರಿಗೆ ತಾವಾಗಿ ತಮ್ಮ ಸಾಮಾನ್ಯ ತಿಳುವಳಿಕೆಯ ಸಂಬಂಧವಾಚಕಗಳಾದ ತಮ್ಮ ತಂಗಿ ಎಂಬ ಶಬ್ದಗಳಿಂದ ಹೆಸರಿಸುತ್ತಾರೆ ತಮಗೆ ಮುಂದೋಡದ ಅಪ್ಪನಕೆ ದೆನತಾರೂಪಸಿದೆಂದರಿದು ಪೂಜ್ಯಬುದ್ಧಿಯಿಂದ ಅತ್ಯ ವಾಚಕಶಬ್ದವನ್ನೇ ಬಳಸುತ್ತ ಬಂದಿರುವದು ಕನ್ನಡದ ಗೌರವವಲ್ಲವೆ! ಕನ್ನಡವಾಙ್ಮಯಕಾರರು ಸುಯುಕ್ತಿ ಯಿಂದ ಅ-ಆ ಅಕ್ಷರಗಳನ್ನು ಸಕ್ಷರೆಯಂತೆ ಅಳ್ಳರೆ ಯಿಂದ ಬಳಸುತ್ತಲಿರುವದು ನಿಜಕ್ಕೂ ಮಾದರಿಯ ವಾಗಿದೆ ಕನ್ನಡಿಗರ ಜಾಣ್ಮೆಯ ಮೇಲ್ಮೈಗೆ ನಿದರ್ಶನ ವಾಗಿದೆ

ಜಯ ಭುವನೇಶ್ವರಿ
ಸಿರಿಗನ್ನಡಂ ಗೆಲ್ಗೆ-ವರಕವಿಗಳ್ ಬಾಳ್ಗೆ !!

ಶಿವಕಥಾಕಾಲಕ್ಷೇಪ

ಶಿವಮೊಗ್ಗಾ ಮಿ॥ ಹಾರನಹಳ್ಳಿಯಲ್ಲಿರುವ ಶ್ರೀ॥ ಜಗ ದಂಭಾಪುರೀ ಸಂಸ್ಥಾನದ ಆಸ್ಥಾನವಿದ್ವಾನ್ ಕೇತೇಶ್ವ ಕೇಸರಿ, ಕವಿರತ್ನ ವೇ॥ ಬ್ರ॥ ಶ್ರೀ॥ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ಈಚೆಗೆ ಶ್ರಾವಣಮಾಸದಲ್ಲಿ ಒಂದು ತಿಂಗಳುಪರಿಯಂತರ ಹಾರನಹಳ್ಳಿ ಎಂಬೀ ಗ್ರಾಮದ ಮಹಾಜನರ ಕೋರಿಕೆಯಂತೆ ಪೇಟೆ ಶ್ರೀ ಬಸವೇಶ್ವರ ದೇವಾಲಯದಲ್ಲಿ ಶಿವಸಂಕೀರ್ತನೆಗಳನ್ನು ನಡೆಯಿಸಿದ ಬಳಿಕ ಭಾದ್ರಪದ ಮಾಸದಲ್ಲೂ ಕೆಲವು ಆಧಿಗೆಗಳನ್ನು ಇದೇ ಗ್ರಾಮದಲ್ಲಿ ಗಣ್ಯರ ಗೃಹಗಳಲ್ಲಿ ಅನುನಾದಮಾಡಿದ ತರುವಾಯ ಪಾಲೀಕೊಪ್ಪ ಗ್ರಾಮ ದಲ್ಲಿ ನ ಭೂತೋ ನ ಭವಿಷ್ಯತಿ ಎನ್ನುವ ಹಾಗೆ ನಿ ವೇರಿದ ಶ್ರೀರಂಭಾಪುರೀ ಜಗದ್ಗುರುಗಳವರ ದಸ ಮಹೋತ್ಸವದಲ್ಲಿ ವಾರ್ಷಿಕ ಪಠ್ಯತಯಂತೆ ಭಾಗಿಗಳಾ ಕೀರ್ತನೆಗಳಿಗೆ ಮುಪೇನ ಸೇವೆಯಂ ಸಮರ್ಪಿಸಿ ಶ್ರೀ ಮಹಾಸನ್ನಿಧಿಯಿಂದ ಕೃಪಾತಿರ್ಣವೆಂಬ ಹೊಂ ಸ್ವಸ್ಥವಂ ಸೇರಿದವೆಂತರ ಜಕಾತಿಕೊಪ್ಪ, ಗಡೇಕಟ್ಟಿ ಆರೆಹಳ್ಳಿ ಗ್ರಾಮಗಳ ಮುಖ್ಯರಿಂದ ಆಹ್ವಾನಿತರಾ ಆಯಾಯ ಗ್ರಾಮಗಳಲ್ಲಿ ಸರಸವಾದ ಕಥೆಗಳನ್ನು ಮಾಡಿ ಸಮಸ್ತ ಜನರನ್ನೂ ಆನಂದಗೊಳಿಸಿದರು ಅಸ್ತು ಶಾಸ್ತ್ರಿಗಳವರು ಅಭಿವೃದ್ಧಿಪಡಿಸಿರುವ ಕಥಾ ಮಾಧುರ್ಯವೂ ವಿಷಯಸ್ಪರ್ತಿತಾದನಾತ್ಮಕ್ಕಿಯೂ ಉಚ ಕಥೆಗಳ ಜೋಡಣೆಯ ಚತುರತೆಯೂ, ಕಥಾಶ್ಲೀಲಿಯಾ ಜನಮನೋರಂಜನೆಯಾಗಿ ಶ್ಲಾಘನೀಯವಾನಿವೆ ಇ ಕೈಲ್ಲಾ ಮಹಾಗುರುವಿನ ಅಪಗ್ರಹಬಲವೇ ಬಲವೆಂದ ಸಂ॥ ಕಾತೀನಾಥಶಾಸ್ತ್ರಿಗಳೇ ಹೇಳಿರುವರು ಇದ ಸಪಜನೇ ಸರಿ ಶ್ರೀರಂಭಾಪುರೀ ಶಿವೈಕ್ಯ ಜಗದ್ಗುರು ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿ ಗಳವರು ಅಧಿಕಾರಾರೂಢರಾದರಿಂದಿಂದ ಇಂದಿನವರೆಗೂ ೧೬ ವರ್ಷಗಳಿಂದ ಸರ್ವತೋಮುಖವಾಗಿ ಸೇವೆಯ ಸಲ್ಲಿಸಿರುವರು ಹಿಂದಿನ ಜಗದ್ಗುರುಗಳು ಕೃಪೆಮಾ ಡಿರುವ ವಿಷಯವು ಮಹಾಪಾದಕ್ಕೆ ಅರಿಕೆಯಾಗಿ ಇಂದಿನ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ರಾಜೇಂದ್ರಶಿವಾಚಾರ್ಯ ಮಹಾಸನ್ನಿಧಿಯವರೂ ಸಂ ಇವರಿಗೆ ಹಿಂದಿನಂತೆಯೇ ಕೃಪಾಶ್ರಯವನ್ನಿತ್ತು, ವರ್ಷಾ ಕಾಲವನ್ನು ದಯಪಾಲಿಸುತ್ತಿರುವರು ಈ ಮಹಾಗುರು ವರ್ಯರು ಅಧಿಕಾರಾರೂಢರಾದಮೇಲೆ ಎಡೆಯೂರ, ಕಿಸಟೂರು, ಗದಗ, ಸವಣೂರು, ಪಾಲೀಕೊಪ್ಪ ಕ್ಷೇತ್ರಗಳಲ್ಲಿ ಪಟ್ಟದ ದಸರಾಮಹೋತ್ಸವಗಳಲ್ಲಿ ಭಾಗವಹಿಸಿ ಕೀರ್ತನ, ಭಾಷಣ, ಕವಿತಾಸಮರ್ಪಣಾದಿ ಗಳಿಂದ ಸೇವೆಯಂ ಸಲ್ಲಿಸಿರುವ ವಿಷಯವಂ ತಿಳಿದ ಸಂತೋಷವೆನಿಸುತ್ತದೆ ಶ್ರೀಜಗದ್ಗುರು ಪಂಚಾ ಚಾರ್ಯರು ಇನ್ನೂ ಹೆಚ್ಚಿನ ಸೇವೆ ಮಾಡಲು ಶಾಸ್ತ್ರಿ ಗಳವರಿಗೆ ದೀರ್ಘಾಯುಂ-ರೋಗ್ಯಭಾಗ್ಯಗಳನ್ನಿತ್ತು ಯ ಲೆಂದು ನಿರಂತರ ಹಾರೈಸುವ,

ರೇವಣಸಿದ್ಧಾರ್ಯ
ಗುರುದೇವರಮಠ ಚಾಮೇನಹಳ್ಳಿ

ಪಂಚಲೋಹದ ಲಿಂಗೋದ್ಭವ ಮೂರ್ತಿಗಳು

ರುದ್ರಾಭಿಷೇಕಾದಿಗಳನ್ನು ಮಾಡುವ ದಕ್ಕೆ ಅನುಕೂಲವಾಗುವಂತೆ ವಂಚಲೋಹ ದಲ್ಲಿ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗಳನ್ನು ತಯಾರಿಸಬೇಕೆಂದು ಬಹುಜನ ಗುರುಭಕ್ತರು ಅಪೇಕ್ಷಿಸುತ್ತಿದ್ದರು. ಅವರ ಅಪೇಕ್ಷಾನುಸಾರವಾಗಿ ಈಗ ಮೂರ್ತಿಗಳು ತಯಾರಾಗಿವೆ ಬೇಕಾದವರು ಬರೆದು ತರಿಸಿಕೊಳ್ಳಬೇಕು

ಒಂದು ಮೂರ್ತಿಯ ಬೆಲೆ ೧೬ ರೂ

ಮ್ಯಾನೇಜರ್—
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

Edited, Printed and Published by Bruhanmath Mahadevaah at Shri Panchacharya Electric Press, Sayaji Rao Road, Mysore.

REGISTERED No. M. 2266 ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಾಶಜನಿತೆರ್ ಪಂಚಾಸ್ಯವಿಶಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರುತ್ರಿಮರವರ್ ಪಾಲಿಪ್ಪುದೀಲ್ಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ॥ ಷಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು— ನಾಗನೂರು ಬ್ಯೂ॥ ಮಹಾದೇವಯ್ಯನವರು ವಿ ಪಿ. ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೨೫] ಸೋಮವಾರ ತಾ॥ ೧೨ನೇ ನವೆಂಬರ್ ೧೯೫೧ [ಸಂಚಿಕೆ ೨೭

ಪತ್ರವ್ಯವಹಾರ

[ಬಾಕ್ಸಿದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಶ್ರೀಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಯಾರೂ ಲಕ್ಷ್ಯದಲ್ಲಡತಕ್ಕದ್ದು —ಸಂ]

ಸತ್ಯ

ಲೇ —ಮಹಾಂತಶಿವ ರ ಎಮ್ಮಿಗನೂರು ಸ್ವಾಮೀಜಿ

॥ ಕಂದ ॥

ಎಲ್ಲಿ ಸುಶೀಲಂ ಸದ್ಗುಣ
ಮೆಲ್ಲಿ ದಯಾಧರ್ಮಮೆಸೆವ ಸತ್ಯಂ ನೆಲೆಗೊಂ
ಡಲ್ಲಿಯೆ ಅಯುಂ ಸಿರಿಯುಂ
ಸಲ್ಲಿಲೆಯೊಳ್ಪುವಲ್ಲೆಜೂಡಾರತ್ನ ॥

ವೃ। ಮುನಿಯಾವನ್ಗಾದೊಡಂ ಪೆರರ್ಗೆ ನೋವನೊಡ
ರ್ದೆ, ರಂಭೆಯಾದೊಡಂ ವನಿತೆಗೆ ಮೆಚ್ಚೆ ಸಿಲ್ಕದೆ,
ರಿದ್ರತೆಯಾದೊಡಮರ್ಥಿಗೇಗುವಿಲ್ಲೆನಿಸದೆ, ಜಾನಿ
ಗಾದೊಡಮಸತ್ಯವಲೆಳವೆ, ಬಂಳ್ವ ಮರ್ತ್ಯನೇ ಮುನಿ
ರ ನಾತನಾಜರಕಕೆ ಯುಗ್ರತಪಂ ಗುರುವರ್ತಿ
ಸಲಂ ।

ಇಂತಹ ಗುಣಗಳುಳ್ಳವನು ಉಗ್ರವಾದ ತಪಸ್ಸು ಸಾಧಿಸಿದ್ದರೂ ತಪಸ್ಸಿದ್ಧಿಯು ಜ್ಞಾನಾಗಿಯೇ ದೊರೆಯು ದು

ಸತ್ಯ ಎಲ್ಲಿದೆಯೋ ಅಲ್ಲಿ ಅಸತ್ಯವು ಹುಡುಕುತ್ತ ರುತ್ತದೆ ಇದಕ್ಕೆ ದೃಷ್ಟಾಂತ ಹರಿಶ್ಚಂದ್ರನೇ—

ಸತ್ಯವಂತರಿಗೆ ಸಂಕಟ ಬಹಳ।
ನಿತ್ಯ ಸ್ವರ್ಗ ದೊರೆಯುವದು ಸಹಜ ॥೫॥

ಸತ್ಯ ಹರಿಶ್ಚಂದ್ರ ಸ್ಮಶಾನವಕಾಯ್ದನು ।
ಸತ್ಯದ ಕೀರ್ತಿಯು ಬೆಳಗಿತು ಜಗದೊಳು ॥೧॥

ಸತ್ಯವಸತ್ಯಗಳೆರಡನು ತೋಡಿಸಿ ।
ನಿತ್ಯವೆಂಬುದು ಫಿ ತಿಳಿಯಿಲೆಮನವೆ ॥೨॥

ನೇಷ್ಟ್ಯಕವಿಯು ಹೇಳಿರುವದೇನೆಂದರೆ —

ಸತ್ಯರು ಹುಸಿಯೊಡೆ ಒತ್ತಿ ಹರಿದಡೆ ಶರಧಿ
ಉತ್ಪ್ರಮರು ತಪ್ಪಿ ನಡೆದಡೆ ಲೋಕವಿನ್ನೆತ್ತಸೇರು
ವುದು ಸರ್ವಜ್ಞ

ನೇಕರಿಗಳು ಸತ್ಯಕ್ಕೆ ಆಚ್ಚರುವ ಬೆಲೆಯೇನೆಂದರೆ—

ಕ್ಕೊಸ್ಸಿ ಅಶ್ವಮೇಧ ಸಹಸ್ರಂಗಳ್ ಸತ್ಯಂ ಚ ತುಲಯಾ
ತಮ್ । ಅಶ್ವಮೇಧ ಸಹಸ್ರಾಚ್ಚ ಸತ್ಯಮೇವ ವಿಶಿ
ತೇ ॥

ಸಹಸ್ರ ಅಶ್ವಮೇಧಗಳಕ್ಕೂ ಸತ್ಯವನ್ನು ತಕ್ಕಡಿಗೆ ಕಿಕೆ ತೂಗಿ ನೋಡಿದ್ದರಲ್ಲಿ ಸಹಸ್ರ ಅಶ್ವಮೇಧಗಳಿಗಿಂತ ಸತ್ಯವೇ ಹೆಚ್ಚಾಗುತೆಂತೆ. ಹರಿಶ್ಚಂದ್ರನನ್ನು ವಿಶ್ವಾ ಮಿತ್ರನು ಎನ್ನು ಆಚ್ಚಕೊಟ್ಟು ತಕ್ಕಡಿಸಿದರೂ ತಪ್ಪಿ ಸತ್ಯವನ್ನು ಳಿಂತ್ಯದವರೆಗೂ ಬಿಡಲಿಲ್ಲ ಜಗತ್ಪಿತ್ರಲ್ಲಿ ಹರಿಶ್ಚಂದ್ರನು ಪರರ ಸೇವೆಯನ್ನು ಮಾಡುವಾಗ್ಗೆ ಅಂದದ್ದು —ಸುಮ್ಮನಿದ್ದರೆ ವಿಶ್ವಾಮಿತ್ರನು, ಚೆನ್ನಾಗಿ ನಾತನಾಡಿದರೆ ಭಾಯಿಬಡಕನೆನ್ನುವರು, ಹತ್ತಿರದಲ್ಲಿ ನಿಂತರೆ ದಿಟ್ಟನೆನ್ನುವರು, ದೂರದಲ್ಲಿ ನಿಂತರೆ ಮುಂದಾಳ್ತನವೆನ್ನುವರು, ಸಹನೆಯನ್ನು ತೋರಿಸಿದರೆ ಹೇಡಿಯೆನ್ನುವರು, ಸಹನೆಯನ್ನು ತೋರಿಸದಿದ್ದರೆ ಒಳ್ಳೆ ಮಹಿತನದವನಲ್ಲನೆನ್ನುವರು, ನೇಮಿಯು ಬಹು ಕಷ್ಟ ದೊಡ್ಡ ಯೋಗಿಗಳಿಗೂ ಕೂಡ ಸಾಧ್ಯವಿಲ್ಲ

ಹರಿಶ್ಚಂದ್ರನು ತನ್ನ ಹೆಂಡತಿಯನ್ನು ಕಾಶಿಯಪಟ್ಟಣ ದಲ್ಲಿ ಮಾರಿಕಡೆಗೆ ಹೊಲೆಯನಾಳಾಗಿ ಸ್ಮಶಾನವನ್ನು ಕಾಯುವಾಗ್ಗೆ ಕೋಟಿಬಾಕ್ಷನು ಹಾವುಕಚ್ಚಿ ಮರಣ ಹೊಂದಿಲು ಪರಮಪತಿವ್ರತೆಯಾದ ಚಂದ್ರಮತಿಯು ಗೋಳಾಡುತ್ತ ಮಗನ ಶವನನ್ನು ಸ್ಮಶಾನಕ್ಕೆ ತಂದಳು ಹರಿಶ್ಚಂದ್ರನು ಹತ್ತಿರಿಕ್ಕಿ ಟಂದು ಕಾಣಿಕೆಯನ್ನು ಕೇಳಲು ತಾನು ಪಾಪಿಯೆಂದು ಹೇಳಲು ಆಗ ಹರಿಶ್ಚಂ ದ್ರನು ಹೇಳಿದ್ದು —

"ಕೊರಳೊಳಿಗಿಳೆ ಮಾಂಗಲ್ಯ ಸವಣ್ಣ ನೆರೆ ಮೊರುತ ಸಡೆಪಣ । ಸರಿ ಒರಿದರಿಲಿದು ನಿನಗೀಸ್ಥಲ ದೊಳಗಿನಿಸಿರಿಂತೀ ಹೆಣ ॥ ತನ್ನ ಮಾಂಗಲ್ಯವನ್ನು ಗತಿ ತಿಸುವನನು ಗಂಡನೊಬ್ಬನೇ ಎಂದು ತಿಳಿದು

ಸತ್ಯನಂತರಿಗದು ಕಾಲವಲ್ಲ। ಮತ್ಯ್ಯಜನರಿಗೆ ಸುಭಿಕ್ಷ ಕಾಲ ॥ ಶಿವಸ್ಮರಣೆ ಮಾಡುವಗೆ ಪ್ರಯಾಣಗುವ ಕಾಲ । ಪರಮ ಪಾವಿಗಳಿಗೆ ಸುಭಿಕ್ಷಕಾಲ ॥ ಸ್ಥಿರವಾದ ಪತಿ ಪ್ರತಿಯ ಪರರು ನಿಂದಿಸಕಾಲ । ಧರೆಗೆ ಜಾರಿಯರ ಕೊಂಡಾಡುವ ಕಾಲ ॥೧॥ ಉಪಕಾರ ಮಾಡಿದರೆ ಅಪಕಾರಿಸುವ ಕಾಲ । ಸಕಲವು ತಿಳಿದವಗೆ ದುಭಿಕ್ಷ ಕಾಲ ॥ ಪತಿಸುತರು ಯಿಂಬುವರ ನಂಬಲರಿಯದ ಕಾಲ । ಸಟಿಯಲ್ಲ ವಿದುನೆ ವಿಪರೀತಕಾಲ ॥೨॥ ಧರ್ಮವ ಮಾಡುವಗೆ ನಿರ್ಮೂಲವಾಗುವ ಕಾಲ । ಕರ್ಮಾಚಕರಿಗೆ ಬಹು ಸೌಖ್ಯಕಾಲ ॥ ನಿರ್ಮಲಾತ್ಮಕ ಸಿರಿಪುರಂಧರ ವಿಠಲನ । ಮರ್ಮದೊಳು ಭಜಿಸಲರಿಯದ ಕಾಲ ವಮ್ಯ ॥೩॥

ಇದನ್ನು ನೋಡಿಯೇ ದೊಡ್ಡವರು ಹೇಳಿರುವದೇ ನೆಂದರೆ—

ದೇವಲೋಕ ಮರ್ತ್ಯಲೋಕವೆಂಬಿವು ಬೇರಲ್ಲ ಕಾಣಿರೋ ಸತ್ಯವ ನುಡಿಯುವುದೇ ದೇವಲೋಕ ಅನೃತವ ನುಡಿಯುವುದೇ ಮರ್ತ್ಯಲೋಕ ಆಚಾರವೇ ಸ್ವರ್ಗ ಅನಾಚಾರವೇ ನರಕ ಇದಕ್ಕೆ ನೀನೇ ಪ್ರಮಾಣ ಕೂಡಲಸಂಗಮದೇವ

ಮಹಾತ್ಮ ಗಾಂಧಿಯವರು ಸತ್ಯ, ಶಾಂತಿ, ಅಹಿಂಸೆ ಇವುಗಳನ್ನು ಬೋಧಿಸಿ ಕಣ್ಮರೆಯಾದರು. ಅವರಂತಾ ನೀವೆಲ್ಲರೂ ಈ ಮೂರಲ್ಲಿ ಒಂದಾದರೂ ಹಿಡಿದು ಶೇಷಿ ಕಾಯರಾಗಿರಿ

ಸತ್ಯಮೇವ ಜಯತೇ

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ ॥

ಶ್ರೀಸದ್ಗುರುಪೆಡೆರ್ಗೊಳಿಪೋಧಸರ್ಕಟಿನೆ

ಪ ಭಾಗಮನಿಸ್ಸೂ, ದಸರಾಮಹೋತ್ಸವವೂ ಬಿಸರಹಳ್ಳಿ

ಕೊಪ್ಪಳ ತಾಲೂಕ ಸೈತೆ ಬಿಸರಹಳ್ಳಿ ಗ್ರಾಮಕ್ಕೆ ಗದಗ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ ಸ್ಥಾಪಕರಾದ ಚಿಕ್ಕನಂಜಾಪುರ ಶ್ರೀ॥ ಷ ಬ್ರ॥ ಪಂಡಿತ ಶ್ರೀರೇಣಸಿದ್ಧಶಿವಾಚಾರ್ಯಮಹಾಸ್ವಾಮಿಗಳು ಬಿಜಯಂ ಗೈಸಿದರು ನಾಡಹಬ್ಬದ ಸಂತೋಷಕ್ಕಾಗಿ ಪುರಸ್ಸಮುಖ ರಿಂದ ತಾ॥ ೮-೧೦-೫೧ ನೇ ದಿನಸ ಸುರುಳಿಸಿದ್ಧೇಶ್ವರ ಮಂದಿರದಲ್ಲಿ ಶ್ರೀಗಳವರ ಆಧ್ಯಕ್ಷತೆಯ ಕೆಳಗೆ ಸಭೆ ನಡೆಯಿತು ಆಗ್ಗೆ ಶ್ರೀಗಳವರು ಮಾಡಿದ ಉಪದೇಶದ ಸಾರವನ್ನು ಕೆಳಗೆ ಕೊಡಲಾಗಿದ

ವೇದಶಾಸ್ತ್ರ, ಕುರಾನ, ಬೈಬಲ್ ಮೊದಲಾದ ಗ್ರಂಥ ಗಳು ಒಂದೊಂದು ರೂಪದಲ್ಲಿ ಮಹಾದೇವನನ್ನೇ ವರ್ಣಿ ಸುತ್ತವೆ ಇಂತಹ ಪರಿತಿನವಲ್ಲಿ ಭಕ್ತಿಪ್ರೇಮಾದಿಗಳನ್ನು ಇಟ್ಟು ಸದಾಚರಣೆ, ಗುರುನಿಷ್ಠೆ ಶಿವಾರ್ಚನೆಗಳಲ್ಲಿ ನಂಬಿಕೆಯಿಂದ ವರ್ತಿಸಿದರೆ ತೋಟದ ಗಿಡಕ್ಕೆ ನೀರು ಕಟ್ಟಿದಂತೆ ಮಾನವರ ದರ್ಮಕ್ಷೇತ್ರ ಬೆಳೆಯುತ್ತ ಹೋಗಿ ಭಾಗ್ಯೋದಯವಲ್ಲ್ಯಯೂ ಕೂಡ ನಿಮ್ಮಲ್ಲಿ ಪ್ರಸಮಾಡುವಳೆಂಬ ಒಲವಾಗಿ ತಿಳಿಯಿರಿ ಪವಿತ್ರ ಅತ್ಯ ಉಳ್ಳವರಾದರೆ ಪುಣ್ಯಪ್ರಾಪ್ತಿ ತಾನಾಗಿಯೇ ಬರುವದು ಯಾವಾಗಲೂ ಧರ್ಮಕೀರ್ತಿಯಲ್ಲಿಯೇ ಪಮುಖರು ಮಗ್ನರಾಗಬೇಕು ಇದೇ ಸುಖ ಶಾಂತಿಯನ್ನು ಹೊಂದಿಸುತ್ತದೆ ನೀವೆಲ್ಲರು ಭಕ್ತಿಪ್ರೇಮಾದಿಗಳಿಂದ ನಡೆದು ಕೃತಾರ್ಥರಾಗಬೇಕು ಇತ್ಯಾದಿ ಧರ್ಮೋಪದೇಶ ವಾದ ವ್ಯಾಖ್ಯಾನಮಾಡಿದರು ಇವರ ವ್ಯಾಖ್ಯಾನ ಕೇಳಿ ಸಮಸ್ತ ಧರ್ಮದವರು ತಲೆದೂಗುತ್ತಲೇ ಇದ್ದರು ಇಲ್ಲಿ ಮೂರು ಸಭೆಗಳು ನಡೆದು ಕೊನೆಯದಿನ ನಾಡಹಬ್ಬದ ಸುವರ್ಣ ಬ್ಲಿಯನ್ನು ಮುಡಿದು ಮಂಗಲದೊಡನೆ ಸಭೆಯು ಸಮಾಪ್ತವಾಯಿತು

ಮಹಾಶಯರೇ, ಶ್ರೀಚಿತ್ಕಮೆಣ್ಣಿಯ ಮಹಾಸ್ವಾಮಿ ಗಳವರು ಕೇವಲ ಪಂಡಿತರಿದ್ದು ಸಂಗೀತ ರಹಸ್ಯದೊಡನೆ ಈ ನೈಜಾಮದಲ್ಲಿ ಬೋಧಮಾಡಿ ನಿಜವಾದ ಜಗದ್ಗುರು ಗಳು ಯಾರು ಎಂಬುದನ್ನು ಪರಿಚಯಮಾಡಿಕೊಟ್ಟು ನಿಮ್ಮೆಲ್ಲರ ದೇಹದಲ್ಲಿ ಅಪ್ಪಾವರ್ಣಗಳೆಂಬ ಚಿಪ್ಪನ್ನು ಕೊಟ್ಟವರು ಶ್ರೀ ಜಗದ್ಗುರು ಪಂಚಾಚಾರ್ಯರೆಂಬು ದನ್ನು ತಿಳಿಸಿಕೊಟ್ಟಿದ್ದಕ್ಕಾಗಿ ಈ ಭಾಗದ ಭಕ್ತರು ಈ ಪೂಜ್ಯಗುರುಪುಂಗವರಿಗೆ ಜ್ಞಾನಸೌಗಿಗಳಿಂದು ಅನ್ನು ತ್ತಿರುವರು ಈ ಮಹಾನೀಯರು ತಮ್ಮ ಶರೀರವನ್ನೇ ಸಮಾಜಕಾರ್ಯಕ್ಕೆ ಮೀಸಲಾಗಿ ಅರ್ಪಿಸಿರುವರು ಗದಗ ಶ್ರೀಜಗದ್ಗುರು ರೇಣುಕಾಚಾರ್ಯಮಂದಿರ ಪ್ರಸಾದಫಲಿಯ ಆಚ್ಚುವರು. ಈ ಮಂದಿರಕ್ಕೆ ಪ್ರತಿಯೊಂದು ಗ್ರಾಮ ದವರು ಧಪಧಾನ್ಯಸಹಾಯ ಮಾಡಬೇಕೆಂದು ತಿಳಿಸುವ,

ಶ್ರೀ ತೀರ್ಥ ಬಸಿಚ್ಚೆಪ್ಪನವರು
ಬಿಸರಹಳ್ಳಿ.

ಪಂಚಾಚಾರ್ಯಪ್ರಭಾ

೧೯೫೧ ನೆಯ ನವೆಂಬರ್ ತಾ|| ೧೨ ನೇ ಸೋಮವಾರ

ಕರ್ನಾಟಕದ ಗತವೈಭವ

[ಹಿಂದಿನಿಂದ ಮುಂದು.ವರೆದುದು]

ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾದ ವೀರಶೈವಮತವು ಭರತಖಂಡದ ನಾನಾಭಾಗಗಳಲ್ಲಿ ವ್ಯಾಪಿಸಿ ಕೋಟ್ಯಾಂತರ ಜನರಿಂದ ಪೂಜಿಸಿಕೊಂಡಿದ್ದು ಒಂದಾನೊಂದು ಕಾಲದಲ್ಲಿ ಪರಧರ್ಮಿಗಳ ಪಾಪಳಿಯಿಂದ ಕ್ಷೀಣದಿಶೆಯನ್ನು ಹೊಂದಿತಲ್ಲದೆ ದಕ್ಷಿಣಭಾರತದಲ್ಲಿದ್ದ ಹಲವು ವೀರಶೈವಾಚಾರಿಗಳ ಸಹಾಯದಿಂದ ಕೆಲವಂಶ ಉಳಿದುಕೊಂಡಿತು ಕಾತಿ ಕೆ"ದಾರ ಉಜ್ಜಯಿನಿ ರಂಭಾಪುರಿ ಶ್ರೀಕೈಲಗಳಲ್ಲಿದ್ದ ಜಗದ್ಗುರು ವೀರಾಚಾರ್ಯರು ತಮ್ಮ ಮಹಿಮಾಪ್ರಭಾವದಿಂದ ಯಾವ ದಾಳಿಕಾರರ ಕೈವಾಡಕ್ಕೂ ಎಡೆಗೊಡದೆ ಮುಸಲ್ಮಾನರು, ಬ್ರಿಟಿಷರು ಮೊದಲಾದ ಸಾರ್ವಭೌಮರಿಂ" ಇನಾಮು ಗ್ರಾಮಗಳನ್ನೂ ಭೂಮಿಗಳನ್ನೂ ಪಡೆದು ಸಕಲ ರಾಜ ಮರ್ಯಾದೆಗಳಿಂದ ಇಂದಿಗೂ ಮೆರೆಯುತ್ತ ಒಂದರು ವದು ಸರ್ವಶ್ರುತವಿದೆ

ಅನೇಕ ವರ್ಷಗಳ ಹಿಂದೆ ಜೈನ ಬೌದ್ಧಧರ್ಮಗಳ ಪ್ರಾಬಲ್ಯದಿಂದ ವೀರಶೈವಮತಕ್ಕೆ ನಾನಾರೀತಿಯಿಂದ ತೊಂದರೆಗಳು ಒದಗಿದ ಸನಯದಲ್ಲಿ ಅನೇಕಜನ ಮತೋದ್ಧಾರಕರು ಮುಂಬೆ" ಬಂದು ಆಪತ್ತಿಹೋಗುತ್ತಿರುವ ವೀರಶೈವಧರ್ಮದ ಪ್ರಕಾಶವನ್ನು ಪುನಃ ರೂಪುಗೊಳಿಸಿ ಈ ಮತಕ್ಕೆ ಉಳಿಯನ್ನು ತಂದುಕೊಟ್ಟರು

ಇನಂತರ ಶ್ರೀರೇಣುಕಾಚಾರ್ಯರ ಅತೀವಾದರದಿಂದ ವಿಜಯನಗರರಾಜ್ಯವನ್ನು ಸ್ಥಾಪಿಸಿದ ಹರಿಹರರಾಯನೂ, ಕೊಡಗಿನ ರಾಜರೂ, ಮೈಸೂರಿನ ರಾಜರೂ ಈ ವೀರಶೈವಧರ್ಮಕ್ಕೆ ಸಹಾಯ ಸಲ್ಲಿಸುತ್ತ ಬಂದುದರಿಂದ ದಕ್ಷಿಣಭಾರತದಲ್ಲಿ ಅಂದರೆ ಕರ್ನಾಟಕದಲ್ಲಿ ಇದಿಂದು ದೊಡ್ಡ ಮತವಾಗಿ ಉಳಿದುಬಿಟ್ಟಿತು ಈ ಪ್ರಕಾರ ವೀರಶೈವಂದ ತುಂಬಿದ ಕರ್ನಾಟಕವು ೧೯ನೇ ಶತಮಾನದಲ್ಲಿ ಬ್ರಿಟಿಷರ ತಾಂತ್ರಿಕರಾಜ್ಯದಾಡಳಿತಕ್ಕೆ ಶಿಲುಕಿ ಮುಂಬಯಿ ಮದ್ರಾಸ್-ನೈಜಾಂ-ಮೈಸೂರು ಕೊಡಗು ಪ್ರಾಂತಗಳಗೆ ಹಂಚಿ ಹೋದಮೇಲೂ ಈ ಮತಕ್ಕೆ ಪ್ರಾಶಸ್ತ್ಯ ದೊರೆಯದಂತಾಯಿತು ಆದರೂ ವಿಶೇಷ್ಯೇಯಿಯಾ ಮಹಾರಾಣಿಯವರ ಜಾಹೀರಾನಾಮೆಯನ್ನು ಅನುಸರಿಸಿ ಮತಗಳ ವಿಚಾರದಲ್ಲಿ ಯಾವ ಬದಲಾವಣೆಯನ್ನೂ ಮಾಡದೆ ಸಂಸ್ಥಾನಿಕರಿಗೇ ಜಗದ್ಗುರುಗಳಿಗೂ ಮಠಾಧಿಕಾರಿಗಳಿಗೂ ಹೊರಲಿಸಿದಂತೆ ನಡೆಯುತ್ತ ಬಂದ ಗೌರವಗಳನ್ನು ಮುಂದುವರಿಸುತ್ತ ಬಂದರು ಇವರ ಸ್ವಾನಮಾನಗೌರಗಳನುಗುಣವಾಗಿ ಎಲ್ಲೆಡೆಯಲ್ಲಿಯೂ ಮರ್ಯಾದ ಇತ್ತು ಸ್ವಾತಂತ್ರಾನಂತರ ಗಳೂ ಧಾರ್ಮಿಕಕಾರ್ಯಗಳೂ ಏನಿ ಳ್ಳೆವಾಗಿ ನಡೆದು ಹಿಂದೂಧರ್ಮಸಂಸ್ಕೃತಿಯನ್ನು ಕಾಯ್ದುಕೊಳ್ಳಲಿಕ್ಕೆ ಎಷ್ಟೋ ಅನುಕೂಲವಾಗಿದ್ದಿತು ಆದರೆ ಈಗಿನ ಸ್ವಾತಂತ್ರ್ಯದ ರಾಜ್ಯದಲ್ಲಿ ಹಿಂದೂಧರ್ಮತತ್ವಗಳಿಗೆ ವಿರೋಧ ಗಳಾದ ಒಂದೊಂದೇ ಹೊಸ ಕಾನೂನುಗಳು ಉದ್ಭವಿಸಿ ಸನಾತನಧರ್ಮವನ್ನು ನಾಶಗೊಳಿಸಲಿಕ್ಕೆ ತೆರೆಯು ಮೊರೆಯಲ್ಲಿ ನಿಂತಿರುತ್ತವೆ ಈಗಾಗಲೆ ಜಗದ್ಗುರು ಪೀಠಗಳೂ ದೊಡ್ಡ ದೊಡ್ಡ ಮಠಗಳೂ ಹೊಸ ಹೊಸ ಆಡಳಿತರುಗಳು ಒರತಿನಿಂದೆ ಅವನ್ನು ನೋಡಿದರೆ ಜಗದ್ಗುರುಪೀಠಗಳೂ, ಮಠಗಳೂ ಅಳದುಹೋಗುವುದರಲ್ಲಿ ಯಾವ ಸಂದೇಹವೂ ಇಲ್ಲ ಇದಕ್ಕಾಗಿಯೇ ಆಂಧ್ರ ಪ್ರಾಂತದ ಜನರು ವಿಶಾಖಪಟ್ಟಣಂ ಉಪಮಾನಾದಿ ವೃತ್ತಗಳನ್ನೂ ಸಭೆಗಳನ್ನೂ ಮಾಡಿ ಆಂಧ್ರಸ್ತಾಂತರಚನೆಗಾಗಿ ಆಹೋರಾತ್ರಿ ಪ್ರಯತ್ನ ಸುತ್ತಿರುವುದನ್ನು ವಾಚಕರು ಪ್ರತಿನಿತ್ಯ ಓದುತ್ತಿರುವರು

ಮಹಾತ್ಮಾ ಗಾಂಧಿಯವರ ವಚನದಂತೆ ಆಂಧ್ರ ಪ್ರಾಂತದ ಜೊತೆಗೆ ಕರ್ನಾಟಕಕ್ಕೂ ಸ್ವಾತಂತ್ರ್ಯವು ದೊರೆಯಲೇ ಬೇಕು ಅಂದರೆ ಒಂದೇ ಬಾಯಿಮಾತಿನಿಂದ ಪ್ರಯೋಜನವಾಗಲಾರದು. ಅದಕ್ಕೆ ಅತುರುಜನವಾಗಿ ಅನ್ನ ತಿನಿರೆದ್ದರೂ ಮಡಿಯಲೇಬು ಅನ್ನ ಪಡಾಪಿನಲ್ಲಿ ವೀರಸವಾಗಿ ವೀರಕ್ಕೆನಿಂದ್ದಾದೆ. ಮೊದಲು ಅವರು ಎಚ್ಚರವಾಗಬೇಕು ಪ್ರತಿಯೊಂದು ರೀತಿಯಿಂದ ಪ್ರತಿ ಭಟಿಸಲಿಕ್ಕೆ ಸಿದ್ಧರಾಗಬೇಕು ಈಗ ಕರ್ನಾಟಕ ವಿರೋಧಣಕ್ಕಾಗಿ ನೈಜಾಂ ಪ್ರಾಂತದಿಂದ ರೌಡಕುಂದಿ ಶ್ರೀ ಶಿವಯೋಗಿಶಿವಾಚಾರ್ಯರು ತಮ್ಮ ಗಂಭೀರವಾದ ಉಪದೇಶದಿ ದ ಕನ್ನಡಿಗರಲ್ಲಿ ದೇಶಪ್ರೇಮವನ್ನು ಅಂಕುರಿಸುತ್ತಿರುವುದು ಕರ್ನಾಟಕದ ಹಾಗೂ ವೀರಶೈವರ ಸುದ್ದಿಸನಿಸೇದೇ ಹೇಳಬೇಕು ಈ ಮಹಾಪುರುಷರಂತೆ ಇನ್ನೂ ಅನೇಕಾನೇಕ ಸ್ವಾಮಿಗಳೂ ವಿದ್ವಾಂಸರೂ, ಬಲವಂತರೂ ಧನವಂತರೂ ನಡೆ ಕಟ್ಟೆ ನಿಂತು ತ್ಯಾಗಿ ಗಳಾಗಿ ಕನ್ನಡನಾಡಿಯ ಗೌರವನ್ನು ಮೂಡಲು ಉಪಕ್ರಮಿಸಿದಲ್ಲಿ ಆ ಮಹಾತಾಯಿಯ ಆಶೀರ್ವಾದದಿಂದ ಕರ್ನಾಟಕವ ವಿರೋಧಣಾಗಿ ಆ ರೂಪದಲ್ಲಿ ನಮ್ಮಾದ ತಳಹದಿಯನ್ನು ಒಲಪಡಿಸುವುದು ಈ ವಿರೋಧಣಕ್ಕಾಗಿ ಎಷ್ಟೋ ಕನ್ನಡಿಗರು ಪಂಥಸಾಹಿತ್ಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಆದರೂ ರಥವನ್ನು ಮುಂದೂಡಲು ಒಂದೆರಡು ಕೈಗಳು ಹೇಗೆ ಅಸಾಧ್ಯವೋ ಅದರಂತೆ ಈ ಕರ್ನಾಟಕ ವಿರೋಧಣ ಎಂಬ ರಥವನ್ನು ವಿಜಯಲಕ್ಷ್ಮಿಯ ಕೈಗಳು ಮುಂದುವರಿಯಬೇಕು ತನು ಮ ಧನಗಳನ್ನು ಅರ್ಪಿಸಬೇಕು ಅಂದಿಗೇ ಕನ್ನಡಿಗರ ವಿಜಯ ಶಿವಪ್ರೀತಿಪಾತ್ರವಾದ ಸನಾತನ ಧರ್ಮವನ್ನು ಕಾಪಾಡಲು ಸಿದ್ಧರಾಗುವ ವಿರೋಧಕರಾದ ಒಡನಾಡಿಗಳಿಗೆ ಶ್ರೀಜಗದ್ಗುರು ಭಗವತ್ಪಾದರು ಜಯಾಶೀರ್ವಾದವನ್ನೊಟುಮಾಡಲೆಂದು ಪ್ರಾರ್ಥಿಸುತ್ತೇನೆ

ಧಾರವಾಡ ಡಿ|| ಹೊಳೆಆಲೂರ ಎಸ್. ಕೆ. ಹೈಸ್ಕೂಲ ವಿದ್ಯಾರ್ಥಿಗಳ ಮೈಸೂರು ಪ್ರವಾಸ

ಇಲ್ಲಿಯ ಶ್ರೀ ಕಲ್ಮೇಶ್ವರ ಹೈಸ್ಕೂಲಿನ ಉಪಾಧ್ಯಾಯರು ರನ್ನೆಳಗೊಂಡು ಸುಮಾರು ೬೦೦ ವಿದ್ಯಾರ್ಥಿಗಳು ಮೈಸೂರಿನ ವಿಶಿಷ್ಟಾಕರ ಬೆಮೈಗೀಗಳಿಕ ಮತ್ತು ಮನ ರಂಜಕ ಸ್ಥಳಗಳನ್ನು ಸಂದರ್ಶಿಸಿ ಸುಖರೂಪವಾಗಿ ಹಿಂದಿರುಗಿದರೆಂದು ತಿಳಿಸಲು ಸಂತೋಷವಾಗುತ್ತದೆ

ತಾ|| ೧೯ ೧೦ ೫೧ ಸಾಯಂಕಾಲ ವಿದ್ಯಾರ್ಥಿಗಳು ಟಪಾಲು ಗಾಡಿಯಿಂದ ಊರುಬಿಟ್ಟು ಅದೇ ದಿನ ರಾತ್ರಿ ಹುಬ್ಬಳ್ಳಿ ಸೇರಿ ೨ ರಾತ್ರಿ ನಿಲ್ಲಾಣದಲ್ಲಿ ಬೆಸ್ಮಿಯಿ ಬೆಳಗಿನ ಪೂನಾ ಬೆಂಗಳೂರು ಎಕ್ಸ್‌ಪ್ರೆಸ್ ಗಾಡಿಯಿಂದ ಪ್ರಯಾಣಬೆಳೆಸಿದರು ಅದೇ ದಿನ ಸಾಯಂಕಾಲ ನಮ್ಮ ವಿದ್ಯಾರ್ಥಿ ತಂಡವು ೧೨ನೆಯ ಸರಿ ಮರುದಿನ ಬೆಸ್ಮಿಯಲ್ಲಿ ಶ್ರವಣಬೆಳಗೊಳ ತಲಪಿಬೆಂದು ಬೇಲೂರುಗಳನ್ನು ಸಂದರ್ಶಿ ಸಿ ಎಂದಿರುತ್ತು ಆ ತಿಜಾಸುಗಾಡು ಗುಮು ಬೇಕ್ಕರ, ಹಳೆಬೀಡು, ಬೇಲೂರು ದೇವಾಲಯಗಳ ಅನುಪಮ ಕಲಾಕೌಶಲ್ಯವು ವಿದ್ಯಾರ್ಥಿಗಳನ್ನು ದಿಗ್ಮೂಢ ರನ್ನಾಗಿ ಮಾಡಿತು ವಿದ್ಯಾರ್ಥಿಗಳ ಆನಂದ ಹೃದಯ ತುಂಬಿ ಮುಖದಲ್ಲಿ ಹೊರಸೂಸುತ್ತಿತ್ತು ಎಲ್ಲಿಂದ ಮೈಸೂರಿಗೆ ಪ್ರಯಾಣ ಬೆಳಸಲಯಿತು ಮೈಸೂರಿ ನಲ್ಲಿ ನಮ್ಮ ವಿದ್ಯಾರ್ಥಿಗಳು ಮೊದಲು ಸಂದರ್ಶಿಸಿದ್ದು ಬೃಂದಾವನ ಹೊತ್ತುಮುಳುಗಿ ಕತ್ತಲಾದಂತೆ ವಿದ್ಯುದ್ದೀಪಗಳ ವೈವಿಧ್ಯತೆಯಲ್ಲಿ ಕೊಳ ಕಾರಂಜಿಗಳು ಎಲ್ಲರ ಹೃದಯ ಸೆಳೆದವು ನಮ್ಮ ವಿದ್ಯಾರ್ಥಿಗಳು ಮೈಸೂರನ್ನು ಹಾಡಿ ಹಸಿದರು ಮರುದಿನ ಚಾಮುಂಡಿಬೆಟ್ಟ ಹತ್ತಿ ಮಾತೆಯ ದರ್ಶನಪಡೆದು ಬರುವಾಗ ದಾರಿಯಲ್ಲಿ ಸ್ವಾಮಿಸಂಗ್ರಹಾಲಯವನ್ನು ಸಂದರ್ಶಿಸಿದರು ಸಾಯಂಕಾಲ ಅಂತಃಪುರವನ್ನು ಪ್ರವೇಶಿಸಿ ಅಲ್ಲಿಯ ಚಿತ್ತಾಕರ್ಷಕ ಅವರ್ಣನೀಯ ಕಲಾಕೌಶಲ್ಯ ನೋಡಿ ಬೆರಗಾದರು ಮರುದಿನ ಶ್ರೀರಂಗಪಟ್ಟಣಕ್ಕೆ ಬಂದು ಟೀಪು ಸುಲ್ತಾನನ ಸಮಾಧಿ ಮೊದಲೊಂಯ ಎಲ್ಲ ಐತಿಹಾಸಿಕ ಸ್ಥಳಗಳನ್ನು ನೋಡಿಕೊಂಡು ದೆಗಳೂರಿಗೆ ಪ್ರಯಾಣ ಬೆಳಸಿದರು. ಅಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಕೊಂಡು ಗುಂಡಲ್ ಮಾರ್ಗವಾಗಿ ಸುರಕ್ಷಿತ ಎಲ್ಲ ವಿದ್ಯಾರ್ಥಿಗಳು ಆಲೂರು ಸೇರಿದರು.

ಮೈಸೂರಿನ ಸರಸಾರಿ ನೌಕರರು ಮತ್ತು ರೈಲ್ವೆ ಅಧಿಕಾರಿಗಳು ತಮಗೆ ಸಹಾಯ ಸಲಅಂಬಿಗೆಳನ್ನೂ ಪ ಸಕಲರಿಸಿಕ್ಷಣಾ ಎಲ್ಲ ವಿದ್ಯಾರ್ಥಿಗಳಿಗೆ ಪರಮಾ ಕೈಸ್ಮರಿಲಿಕ್ಕೆ ಸಂತೋಷ ಸಮಯ ಅವರಿಗೆ ಕೃತಜ್ಞೆ ಗಳನ್ನು ಸಿಸುತ್ತೆ.

ಧನಪ್ರಾಪ್ತಿ

ಗದಗ ಶ್ರೀಜಗದ್ಗುರು ರೇಣುಕಾಚಾರ್ಯ ಮಂದಿ ಸ್ಥಾಪಕರಾದ ಶ್ರೀಗಿ ಷ್ಟಿ ಪಂಡಿತ ಶ್ರೀರೇವಣಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು ಗುರುಸಂಸ್ಥಾ ಬ್ರಹ್ಮನ್ಮರ ಚಿಕ್ಕಮಣ್ಣೂರು ಇವರ ಸನ್ನಿಧಿಯಲ್ಲಿ—

ಸನಾಜ ಒಂಧುಗಳೇ, ವೈದ್ಯಭೂಷಣ, ವೈದ್ಯ ವಿಶಾರದ, ವೈದ್ಯಭಿಷಕ್ ಪದವೀಭೂಷಣರಾದ ಶ್ರೀ ನೇಗಿ ಪಂಚಿ ರುದ್ರಮುನಿಸ್ವಾಮಿ ಡಾಕ್ಟರ ಹಿರೇಮ ಚಿಕ್ಕಣ್ಣಾಣ್ಣೂರು ಇವರು ಯಲಬುರ್ಗಿ ತಾಲೂಕ ವೈ ಜೇಪೂರ ಗ್ರಾಮದಲ್ಲಿ ದವಾಖಾನೆ ಸ್ಥಾಪನೆಮಾಡಿ ವದು ಪ್ರಸಿದ್ಧವೇ ಆದೆ ಗವಿಗೆ, ವಾಯು, ಶೀತಪಿತ್ತ ಶೀತೋಷ್ಣ ಜ್ವರಕ್ಕೆ ಉತ್ತಮ ತರಗತಿಯಿಂದ ಗುಣ ಮಾಡುತ್ತಾರೆ ರೋಗಿಗಳಾಪ್ತ ಸ್ತ್ರೀ ಪುರುಷರು ಇವ ದವಾಖಾನೆಗೆ ಹೋಗಿ ಆರೋಗ್ಯವುಳ್ಳವರಾಗಬೇಕು ಸದರೀ ಡಾಕ್ಟರರು ಅನುಭವಿಗಳದ್ದು ಕೇವಲ ಪಂಡಿ ರಿದ್ದಾರೆ ಳ ಗದ್ದಮೇಂಟ ಪರೀಕ್ಷೆಗಳಲ್ಲಿ ಉತ್ತೀರ್ಣ ರಾಗಿ ಯೋಗ್ಯ ಸರ್ಟಿಫಿಕೇಟು ಪಡೆದಿದ್ದಾರೆ. ಆ ಕಾರಣ ಜೇಪೂರ ದವಾಖಾನೆಗೆ ಹೋಗಿ ರೋಗ ಕಳೆದು ಕೊಳ್ಳಿರಿ

ಶ್ರೀಶೈಲ ಜಗದ್ಗುರುಗಳ ಶುಭಾಗಮಕ್ಕೆ ಪತ್ರನವಾದಿ

ಶ್ರೀಶೈಲ ಜಗದ್ಗುರು ವಾಗೀಶಪಂಡಿತಾರಾಧ್ಯ ಶಿವಾಚಾರ್ಯಮಹಾಸ್ವಾಮಿಗಳವರು ಹರಿಹರ ತಾಲೂ ಹನಗವಾಡಿ ಗ್ರಾಮದ ಅಗ್ರಹರ ವೀರಭದ್ರ ಮೇರೆ ತಾ|| ೫೧೧ ೫೧ಕ್ಕೆ ದಯವಾಡಿಸಿದರು ಆಂ ಅಜಮಾಜಿಷ ಗ್ರಾಮಗಳ ಜನರು ತಾಲೂಕ ಅಮ ದಾರರವರೂ ಉತ್ಸವಪಡಗಿಗಳಾದ್ದರು ಪ್ರತಿ ಮಹಾಸನ್ನಿಧಿಯು ಅಭ್ಯುಕ್ಷಯಿಯಲ್ಲಿ ಧರ್ಮಪೀಠ ನಡೆಯುತ್ತಿದೆ ಶ್ರೀಶೈಲದ ಇತಿಹಾಸ ಅಜ್ಜಾವಠಣಗ ಮಹತ್ವ ಅತ್ಯೌದ್ಧಾರ್ಯ ಇತ್ಯಾದಿಗಳ ವಿಷಯ ಸರ್ವರೂ ಒಪ್ಪುವಂತೆ ಸನ್ನಿಧಿಯವರು ಉಚಿತ ಮಾಡಿದರು ಜಗದ್ಗುರುಗಳವರ ಕ್ಯಾಂಪು ಇಲ್ಲಿಯ ಇದ್ದು ಈ ಊರು ಹರಿಹರಕ್ಕೆ ತಾ|| ಮೈಲಿ ಅವ ಪ್ರತಿದಿನ ಸನ್ನಿಧಿಯವರ ದರ್ಶನಾಶೀರ್ವಾದಕ್ಕೆ ತಂಡೋಪ ಂಡವಾಗಿ ಭಕ್ತಾದಿಗಳು ಆಗಮಿಸುತ್ತಿದ್ದಾರೆ

ಓರ್ವ ಗುರುಭ

ದೀಕ್ಷಾವಳಿ-ಮಹಾಲಕ್ಷ್ಮಿ-ಸರಸ್ವತಿ ಪೂಜಾಮಹೋತ್ಸವ ಬೆರಗ

ಧಾರವಾಡ ಡಿ|| ನಿವಾಸಿಗಳಾದ ಶ್ರೀ ವೀರಭ ವೀರಬದ್ರಪ್ಪ ಬತೆಗಾರ ಇವರು ಇದೇ ಖರನಾಮ ಸಂ ಆಶ್ವಿನ ಬಹು ೩೦ ದಿವಸ ಲಕ್ಷ್ಮೀಪೂಜೆಯಸ್ಥಾ ಕಾರ್ತಿಕ ಶು|| ೧ ದಿವಸ ಸರಸ್ವತಿ ಪೂಜೆಯನ್ನೂ ವೆ ಚಿನ್ನಮಲ್ಲಯ್ಯನವರು ಹಿರೇಮಠ ಇವರ ವೈದಿಕತ್ವದ ವಿಧಿಪೂರ್ವಕವಾಗಿ ಪೂರ್ತಿಗೆಳಿಸಿ ನೂತನ ವರ್ಷದ ವೀರಶೈವನವರ ವ್ಯವಹಾರವು ಶ್ರೀಜಗದ್ಗುರು ಪಂಚ ಜಾರ್ಯರ ಆಶೀರ್ವಾದದಿಂದ ಲಾಭಮಯವಾಗಿಯೂ ಜನಪ್ರಿಯವಾಗಿಯೂ ನಡೆಯಲೆಂದು ಪ್ರಾರ್ಥಿಸುವ,

ಓರ್ವ ಪೂಜಾಭಾ

ಹೃದಯರೋಗಕ್ಕೆ ಹೊಸ ಔಷಧ

ಹೃದಯಬೇನೆಯಿಂದ ನರಳುತ್ತಿರುವವರ ಮೇ ತಣ್ಣಗೆ ಔಷಧಿಯ ಸೀರೆರಚಿದರೆ ಅವರ ನೋ ಕಡಿಮೆಯಾಗುವ ಪೂರ್ವ ಭಾವಿ ಪ್ರಯೋಗಗಳನ್ನೆ ನ್ಯೂಯಾರ್ಕ್ ಸಂಸ್ಥಾನದ ಕಾರ್ನೆಲ್ ವಿಶ್ವವಿದ್ಯಾಲಯ ದಲ್ಲಿ ಸಂಶೋಧನೆ ಮಾಡಲಾಗುತ್ತಿದೆ.

ಎಥಿಲ್ ಕ್ಲೊರೈಡ್ ಎಂಬ ಔಷಧಿಯ ಸೀರೆನ ಎರಗಿ ಮತ್ತು ಅದನ್ನು ತೀವ್ರವಾಗಿ ಎಡೆಯುವಲ್ಲಿ ಕ್ಷಣಕಾಲ ಚರ್ಮವು ಕಡಿಮೆಯಾಗುವ ಹಿಂದು ತಿಳಿಸುಬಂದಿದೆ.

ವರ್ತಮಾನ ಸಂಗ್ರಹ

ಹುಬ್ಬಳ್ಳಿಯಲ್ಲೊಂದು ವಿಮಾನ ನಿಲ್ದಾಣ

ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣವೊಂದನ್ನು ನಿರ್ಮಿಸಲು ಸ್ಥಳ ಪರಿಶೀಲನೆಗಾಗಿ ಭಾರತ ಸರ್ಕಾರದ ಸಿವಿಲ್ ಏವಿಯೇಷನ್ನಿನ ಜೀಫ್ ಇಂಜನಿಯರ್‌ರವರು ಬೆಳಗಾವಿಗೆ ಭೇಟಿಕೊಡಲಿದ್ದಾರೆ

ಜಿಪ್ಸ್ ಹತ್ತಿಗೆ ಭಾರತದ ಕಲ್ಲಿದ್ದಲು

ಈಜಿಪ್ಟಿನ ಹತ್ತಿಗೆ ಬದಲು ಭಾರತದ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳುವ ನಿರ್ಣಯವನ್ನು ಮೇಲೆ ಭಾರತ ಮತ್ತು ಈಜಿಪ್ಸ್‌ಗಳ ಮಧ್ಯೆ ಒಂದು ವಾಣಿಜ್ಯ ಒಪ್ಪಂದವಾಗಬೇಕೆಂದು ತೀರ್ಮಾನವಾಗಿದೆಯೆಂದು ತಿಳಿದುಬಂದಿದೆ

ಭಾರತ-ಸಿಲೋನ್ ವಾಣಿಜ್ಯ ಸಂಧಾನ

ಭಾರತ-ಸಿಲೋನ್ ವಾಣಿಜ್ಯ ಒಪ್ಪಂದಕ್ಕಾಗಿ ದಿನೇಂ ೧೦ ರಿಂದ ಕೊಲಂಬೋದಲ್ಲಿ ಸಂಧಾನ ನಡೆಯಲಿದೆ. ಹಿಂದಿನ ಒಪ್ಪಂದ ಳೆದ ದಿನೇಂಬರ್‌ನಲ್ಲೇ ಕ್ಕಾಯವಾಗಿತ್ತು.

ಪಂ॥ ನೆಹ್ರೂ ವಿರುದ್ಧ ಜನಸಂಘ ಪ್ರತಿನಿಧಿ

ಪ್ರಧಾನಿ ಪಂ॥ ನೆಹ್ರೂರವರ ವಿರುದ್ಧ ಭಾರತೀಯ ಜನಸಂಘವು ಅವಿಶ್ವಾಸ ನಿರ್ಣಯವೊಂದನ್ನು ಮಂಡಿಸುವ ಮೂಲಕ ಅವಿಶ್ವಾಸ ನಿರ್ಣಯವನ್ನು ಅಲ್ಪಮತದಿಂದ ಸೋಲುವಂತೆ ಮಾಡಿದ ಪ್ರತಿನಿಧಿ ಶ್ರೀ ಗಿಜ ರಂದು ನೆಹ್ರೂ ಘೋಷಣೆ

ಆಂಧ್ರಪ್ರಾಂತ ರಚನೆ ಬಗ್ಗೆ

ಆಂಧ್ರಪ್ರಾಂತ ರಚನೆಯ ಬಗ್ಗೆ ಪ್ರಧಾನಿ ಪಂ॥ ನೆಹ್ರೂರವರು ನ ೧೫ ರಂದು ಘೋಷಣೆಯೊಂದನ್ನು ಪ್ರಕಟಿಸುವ ನಿರೀಕ್ಷೆ ಇದೆಯೆಂದು ಸ್ವಾಮಿ ಸೀತಾರಾಮರು ತಿಳಿಸಿದ್ದಾರೆ ಆಚಾರ್ಯ ವಿನೋಬಾ ಭಾವೆ ರವರು ಆ ವೇಳೆಗೆ ಪಂ॥ ನೆಹ್ರೂರವರನ್ನು ಭೇಟಿ ಮಾಡಿ ಆಂಧ್ರಪ್ರಾಂತ ರಚನೆ ಬಗ್ಗೆ ಮಾತುಕತೆ ನಡೆಸುವರೆಂದು ಆವರು ತಿಳಿಸಿದರು

ಶೇ॥ ೭೦ ಭಾಗ ಒಟುದಾರರು ಅನಕ್ಷರಸ್ಥರು

ಭಾರತದಲ್ಲಿ ಒಟುಹಕ್ಕುವ ಹಕ್ಕಿರುವ ಒಟ್ಟು ಸಂಖ್ಯೆಯಲ್ಲಿ ಶೇ॥ ೭೦ ಭಾಗದಷ್ಟು ಮಂದಿ ಅನಕ್ಷರಸ್ಥರಾಗಿರುವುದರಿಂದ ಅವರುಗಳಿಗೆ ವಯಸ್ಕರ ಮತದಾನ ಪದ್ಧತಿ ಪ್ರಕಾರ ಒಟು ಚಲಾಯಿಸುವ ರೀತಿಯನ್ನು ತಿಳಿಸಲು ಸರ್ಕಾರ ಚಲನಚಿತ್ರ ಹಸ್ತಪ್ರತಿ ಮತ್ತಿತರ ಸಾಧನಗಳಿಗಾಗಿ ಹೆಚ್ಚು ವೆಚ್ಚಮಾಡಬೇಕಾಗಿದೆಯೆಂಬ ಬಗ್ಗೆ ತಯಾರಿಸಿರುವ ಹಾಸ್ಯಮೆಂಟರಿ ಚಿತ್ರವನ್ನು ೧೫ ಸಾವಿರ ಥಿಯೇಟರ್‌ಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆಗಳನ್ನು ಮಾಡಲಾಗಿದೆ

ಸ್ಪೀಟ್‌ನಿಂದ ಎಂಟು ಜನರ ಸಾವು

ಇಂದೊರಿನ ನೋರೆ ಎಂಬ ಹಳ್ಳಿಯಲ್ಲಿ ಕಳೆದ ಎರೆಡು ಮಧ್ಯಾಹ್ನ ನಡೆದ ಸ್ಪೀಟಿನದ ಫಲವಾಗಿ ಎಂಟು ಸತ್ತರು, ಏಳು ಮಂದಿ ಗಾಯಗೊಂಡರು ಸ್ಪೀಟು ನಡೆದಾಗ ಮೇಲೆ ವಿಮಾನವೊಂದು ಹಾರುತ್ತಿದ್ದು ಕಾಣಬಂತು ಅದು ಬಾಂಬೊಂದನ್ನು ಹಾಕಿರಬೇಕೆಂದೂ ಅದು ಸಿಡಿದು ಈ ಅನರ್ಥ ಸಂಭವಿಸಿರಬೇಕೆಂದೂ ಊಹಿಸಲಾಗಿದೆ ಪೋಲೀಸ್ ಮುಖ್ಯಾಧಿಕಾರಿಗಳು ಅಲ್ಲಿಗೆ ತೆರಳಿದ್ದಾರೆ ಆ ಗ್ರಾಮ ಮೌಶೌ ನಿಂದ ಮಿಲಿಟರಿ ಕೇಂದ್ರಕ್ಕೆ ಹತ್ತಿರದಲ್ಲಿದೆ. ಸುತ್ತಮುತ್ತಲ ಹಳ್ಳಿಗಳಲ್ಲಿ ಇಂತಹುದೇ ಘಟನೆಗಳು ಜರಿದಿವೆ

ಪಾಕಿಸ್ತಾನದಲ್ಲಿ ಜಮಖಾನದ ಕಾರ್ಖಾನೆ

ಫ್ರೀಡ್ಮ್ ಮಾರ್ಕೆಟ್ ಅಡ್ವರ್ಟೈಸರ್‌ರವರು ಪಾಕಿಸ್ತಾನದ ಮಿರ್ಯಾನ್‌ವಾಲಿ ಜಿಲ್ಲೆಯಲ್ಲಿ ಒಂದು ಜಮಖಾನದ ಕಾರ್ಖಾನೆಯನ್ನು ೫೯೫ ಡಲ್ಲಿಯೇ ಸ್ಥಾಪಿಸಲಿದ್ದಾರೆಂದು ತಿಳಿದುಬಂದಿದೆ ಇದಕ್ಕೆ ಒಟ್ಟು ೧೫೫ ಲಕ್ಷ ರೂ ಬಂಡವಾಳ ಹಾಕಲಾಗುವುದೆಂದು ಗೊತ್ತಾಗಿದೆ ಇದರ ಮೂರನೇ ಒಂದು ಭಾಗ ಬಂಡವಾಳವನ್ನು ಈ ಕೈಗಾರಿಕೆಯಲ್ಲಿ ಆಸಕ್ತರಾಗಿರುವ ಬ್ರಿಟಿಷರು ಹಾಕುವರೆಂದು ತಿಳಿದುಬಂದಿದೆ

೧ ಸೇರು ಉಪ್ಪಿಗೆ ೨೦೮ ರೂಪಾಯಿ!

ಪೂರ್ವ ಪಾಕಿಸ್ತಾನದ ಮುಸ್ಲಿಂಗಂಜ್ ಎಂಬಲ್ಲಿ ಉಪ್ಪಿನ ಅಭಾವ ತೀವ್ರವಾಗಿದೆ ಅಂಗಡಿಗಳಲ್ಲಿ ಉಪ್ಪನ್ನು ಸೇರಿಗೆ ೫ ರೂ ಗಳಂತೆ ಮಾರುತ್ತಿದ್ದಾರೆ. ಹಲವು ಮೇಲೆ ೨೦ ರೂಪಾಯಿ ಕೊಟ್ಟರೂ ಉಪ್ಪು ದೊರಕುವುದು ಕಷ್ಟವಾಗಿದೆ ಎಂದು ವರದಿಯಾಗಿದೆ ಕಾಳಸಂತೆಯಲ್ಲಿ ಉಪ್ಪನ್ನು ಸೇರಿಗೆ ೧೨ ರೂ. ಗಳಂತೆ ಮಾರುತ್ತಿದ್ದಾರೆಂತೆ ಕಾಳಸಂತೆಯನ್ನು ತಪ್ಪಿಸಲು ಸರ್ಕಾರ ರಕ್ಷಣಾ ಕಾನೂನನ್ನು ಜಾರಿಗೆ ತರಲಿದೆ ಎಂದು ವರದಿಯಾಗಿದೆ

ಬ್ರಿಟನ್ನಿನ ಮೇಲೆ ಪ್ರಪಂಚ ಮುಸ್ಲಿಂ ಜನರ ಬಹಿಷ್ಕಾರ

ಸೂಯೆಜ್ ಕಡಲ್ಕಾಲುವೆಯ ಮಂಡಲದಲ್ಲಿ ಬ್ರಿಟಿಷರು ಮಾಡುತ್ತಿರುವ ಅಮಾನುಷ ಕೃತ್ಯಗಳ ಪರಿಣಾಮವಾಗಿ ಪ್ರಪಂಚವ್ಯಾಪಿ ಮುಸ್ಲಿಂ ಜನಾಂಗಗಳು ಬ್ರಿಟಿಷರನ್ನು ಬಹಿಷ್ಕರಿಸುವ ಸಂಭವವಿದೆ.

ಈ ಬಹಿಷ್ಕಾರದ ವಿಷಯವನ್ನು ಕುರಿತು ಚರ್ಚಿಸಲು ಕೈರೊ ಅಲ್ ಅಜಾರ್ ವಿಶ್ವವಿದ್ಯಾನಿಲಯದ ಲೆಕ್ಚರರ್ ಷೇಕ್ ಇಬ್ರಾಹಿಂ ಹಮೂದ್‌ರವರು ವಿಷಯ ಮುಖಂಡರ ಸಭೆಯೊಂದನ್ನು ಏರ್ಪಡಿಸಲಿದ್ದಾರೆ

ಈ ವ್ಯಾಪಾರದ ಬಗ್ಗೆ ಈಜಿಪ್ಟಿನ ನೀತಿಯಲ್ಲಿ ಬದಲಾವಣೆಯಾಗಿದೆ ಎಂಬುದಾಗಿ ವದಂತಿ ಹಬ್ಬಿದೆ ರಹಸ್ಯ ಮಾತುಕತೆಗಳಿಗಾಗಿ ಈಜಿಪ್ಟ್ ಸರಕಾರದ ಪ್ರಮುಖ ಅಧಿಕಾರಿಯೊಬ್ಬರು ರಷ್ಯಾಕ್ಕೆ ತೆರಳುವರೆಂದು ಪತ್ರಿಕೆಯೊಂದರಲ್ಲಿ ವರದಿಯಾಗಿದೆ

೫೦ ಸಹಸ್ರ ಬ್ರಿಟಿಷ್ ಸೇನೆ

ಸೂಯೆಜ್ ಕ್ಷೇತ್ರಕ್ಕೆ ತೆರಳಲು ಸಿದ್ಧವಿದೆ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಒದಗಿರುವಾದ ಯುದ್ಧ ಸದೃಶ ಸ್ಥಿತಿಯನ್ನೆದುರಿಸಲು ಸನ್ನದ್ಧವಾಗಿರುವಂತೆ ಒದಗಿ ೦೦೦ ಸೈನಿಕರಿಗೆ ಮೊದಲನೆಯೇ ತೆರಳಲು ಬ್ರಿಟಿಷ್ ವಿಮಾನ ಪಡೆಯು ಸಿದ್ಧವಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ

ಈಜಿಪ್ಟ್, ಭಾರತದ ಮಾದರಿಯನ್ನು ಅನುಸರಿಸುವುದು

ಈಜಿಪ್ಟಿನಿಂದ ಬ್ರಿಟಿಷ್ ಆಕ್ರಮಣ ಸೇನೆಗಳನ್ನು ಹೊರಡಿಸುವಂತೆ ಮಾಡಿಸುವ ಸಮಸ್ಯೆಯಲ್ಲಿ ಈಜಿಪ್ಟ್ ಭಾರತದ ಮಾದರಿಯನ್ನು ಅನುಸರಿಸುವುದು—ಎಂಬುದಾಗಿ ಈಜಿಪ್ಟಿನ ಸೋಷಿಯಲಿಸ್ಟ್ ನಾಯಕರಾದ ಅಹ್ಮದ್ ಹುಸ್ಸೇನ್‌ರವರು ಹೇಳಿದರು

ನಿರಾಯುಧರಾದ ಪ್ರಜೆಗಳು ಸಾಯುಧ ರಾಷ್ಟ್ರವನ್ನು ಹೇಗೆ ಸೋಲಿಸಬಲ್ಲದೆಂಬುದನ್ನು ಭಾರತ ಬ್ರಿಟನ್‌ಗೆ ತೋರಿಸಿಕೊಟ್ಟಿದೆ. ಆ ಗುಣಾತಿಶಯವನ್ನೇ ನಾವು ಈಗ ಬ್ರಿಟನ್ನಿಗೆ ಎತ್ತಿ ತೋರಿಸುತ್ತೇವೆ ನಮಗೆ ಆಯುಧಗಳಿಲ್ಲ. ನಾವು ಧರ್ಮಸಂಸ್ಥಾಪನೆಯನ್ನು ಮಾಡುತ್ತಿದ್ದೇವೆ. ನಮಗೆ ಈಜಿಪ್ಟ್ ಭದ್ರಗಳ ಜೊಲುವಿದೆ. ಪ್ರಪಂಚದ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳ ಸಹಾನುಭೂತಿಯೂ ನಮಗಿದೆ ಎಂದು ಅವರು ನಿವೇದಿಸಿದರು.

ಅಮೆರಿಕಾ ಕಾರುಗಳ ಮೇಲೆ ಹೆಚ್ಚು ಸುಂಕ

ಅಮೆರಿಕಾದ ಹೊಸ ಕಾರುಗಳ ಮೇಲೆ ಸುಂಕವನ್ನು ಪರ್ಷಿಯಾ ಸರ್ಕಾರ ಶೇಕಡಾ ೫೦ ರಷ್ಟು ಹೆಚ್ಚಿಸಿದೆ. ಈ ಬಗ್ಗೆ ಅಮೆರಿಕಾ ಸರ್ಕಾರದ ಪ್ರತಿಭಟನೆಯನ್ನು ಪರ್ಷಿಯಾ ಸರ್ಕಾರ ತಿರಸ್ಕರಿಸಿದೆ

ಡಾ॥ ಎಂ. ಸಿ. ಮೋದಿಯವರು

ನೇತ್ರ ಚಿಕಿತ್ಸೆ ಪ್ರವೀಣರಾದ ಡಾ॥ ಎಂ ಸಿ ಮೋದಿಯವರು ಶಾ॥ ೧೩-೧೧-೫೧ ನೇ ಸೋಮವಾರ ಬೆಳಗಾಮ್ಮನಿಂದ ದಿ॥ ಹೊಳಲೊಪ್ಪಲ್ಲಿ ಹೊರಟು ಅಲ್ಲಿ ಉಚಿತ ನೇತ್ರಚಿಕಿತ್ಸೆಯನ್ನು ಪ್ರಾರಂಭಿಸುವರು

ಸ್ವೀಕಾರ

ಧಾರವಾಡ ದಿ॥ ಗದಗ ಗ್ರಾಮವಾಸಿಗಳಾದ ಶ್ರೀ ಬಳೆಗಾರ ವೀರಪ್ಪನವರು ದೀಪಾವಳಿಯ ಪೂಜಾ ಮಹೋತ್ಸವದಲ್ಲಿ ಪ್ರಭಾಪೋಷಣಾರ್ಥವಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಧಾರವಾಡ ಶಹರವಾಸಿಗಳಾದ ವೇ॥ ಪಂ॥ ಗುರು ಲಿಂಗಶಾಸ್ತ್ರಿಗಳವರು ದೀಪಾವಳಿ ಹಬ್ಬದ ಪೂಜೆಯಲ್ಲಿ ಪ್ರಭಾಪೋಷಣಾರ್ಥವಾಗಿ ಅರ್ಪಿಸಿದ 2 ರೂ ಗಳೂ ಶ್ರೀ ಕೋಟೂರು ಬಸವಲಿಂಗಪ್ಪನವರು ತಮ್ಮ ಬೆಂಗಳೂ ಕಾಯಿ ಅಂಗಡಿಯ ದೀಪಾವಳಿ ಲಕ್ಷ್ಮೀಪೂಜೆಯಲ್ಲಿ ಅರ್ಪಿಸಿದ 2 ರೂ ಗಳೂ ಚಳ್ಳಕೆರೆಯ ಶ್ರೀಗಳವರ ದ್ವಾರಾ ತಲ್ಪಿರುತ್ತವೆ

ಗದಗ ಶಹರ ಶಮೀಪೂಜಾ ಮಹೋತ್ಸವದಲ್ಲಿ ಪ್ರಭಾಪೋಷಣಾರ್ಥವಾಗಿ ಅರ್ಪಿಸಿದ 1 ರೂಪಾಯಿ ಶ್ರೀ ಬಿ ಆರ್ ಕೊಂಡಿಹಾಳ ಪಂಚಾಚಾರ್ಯ ಸೇವಾಸಂಘ ಸೆಕ್ರೆಟರಿ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೀವೆ

++++++++++++++++++++++++++

ಪಂಚಲೋಹದ ಲಿಂಗೋದ್ಭವ ಮೂರ್ತಿಗಳು

ರುದ್ರಾಭಿಷೇಕಾದಿಗಳನ್ನು ಮಾಡುವ ದಕ್ಕೆ ಅನುಕೂಲವಾಗುವಂತೆ ಪಂಚಲೋಹದಲ್ಲಿ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗಳನ್ನು ತಯಾರಿಸಬೇಕೆಂದು ಬಹುಜನ ಗುರುಭಕ್ತರು ಅಪೇಕ್ಷಿಸುತ್ತಿದ್ದರು. ಅವರ ಅಪೇಕ್ಷಾನುಸಾರವಾಗಿ ಈಗ ಮೂರ್ತಿಗಳು ತಯಾರಾಗಿವೆ ಬೇಕಾದವರು ಬರೆದು ತರಿಸಿಕೊಳ್ಳಬೇಕು

ಒಂದು ಮೂರ್ತಿಯ ಬೆಲೆ ೧೬ ರೂ.

ಮ್ಯಾನೇಜರ—
ಶ್ರೀ ಜಗದ್ಗುರು ಪಂಚಾಚಾರ್ಯ ಎಜೆನ್ಸಿಸ್ ಪ್ರೆಸ್,
ಮೈಸೂರು.

ಸಿದ್ಧಾಂತಶಿಖಾಮಣಿ

ನೀರಶೈವಮತವನ್ನು ಜಗತ್ಪ್ರಸಿದ್ಧವಾಗಿಸಿದ ಪ್ರತಿಯೊಬ್ಬ ವೀರಶೈವನೂ ಸಿದ್ಧಾಂತಶಿಖಾಮಣಿಯನ್ನು ಪ್ರಾಮಾಣಿಕವಾಗಿ ಅಭ್ಯಾಸಮಾಡಿ ಅದರಲ್ಲಿ ಹೇಳಿರುವ ಪ್ರತಿಯೊಂದು ವಿಷಯವನ್ನೂ ಅನುಷ್ಠಾನಕ್ಕೆ ತರಬೇಕೆಂಬ ಶ್ರದ್ಧೆಯಿಂದ ಆಚರಿಸಿದರೆ ಅವನು ಸಾಕ್ಷಾತ್ ಶಿವನೇ ಆಗುವನೆಂಬುದರಲ್ಲಿ ಸಂದೇಹವಿಲ್ಲ. ಈ ಮಹಾಗ್ರಂಥವನ್ನು ಶ್ರೀಮದ್ಜಗದ್ಗುರು ರೇಣುಕಾಚಾರ್ಯರು ಜಗತ್ತಿನ ಸಮಸ್ತ ವೀರಶೈವರ ಕ್ಷೇಮಾಭಿವೃದ್ಧಿಗಾಗಿ ಅನುಗ್ರಹಿಸಿರುವರು. ಇಂಥ ಮಹಾಗ್ರಂಥವನ್ನು ಅಚ್ಚುಹಾಕಿಸಿ ಪ್ರಕಟಿಸಿ ಎಲ್ಲರಿಗೂ ಉಚಿತವಾಗಿ ಹಂಚಬೇಕೆಂಬ ಇಚ್ಛೆಯು ಅನೇಕ ಸಜ್ಜನರಿಗಿದ್ದರೂ ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ. ಈಗ ಅದು ಸಾಧ್ಯವಾಗಿರುವುದಕ್ಕೆ ಕಾರಣರಾದವರು ಶ್ರೀಮಾನ್ ಸಿ. ಬಸವಲಿಂಗಪ್ಪನವರು. ಇವರು ಈ ಗ್ರಂಥವನ್ನು ಅಚ್ಚುಹಾಕಿಸಿ ಪ್ರಕಟಿಸಲು ಸಂಪೂರ್ಣ ಖರ್ಚನ್ನು ಕೊಟ್ಟಿರುವರು. ಇವರಿಗೆ ಸಮಸ್ತ ವೀರಶೈವರ ಪರವಾಗಿ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ಈ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರುವ ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುವರು. ಈ ಗ್ರಂಥವನ್ನು ಓದಿಸಿ ತಿಳಿದುಕೊಳ್ಳುವುದು ಪ್ರತಿಯೊಬ್ಬ ವೀರಶೈವನ ಮುಖ್ಯ ಕರ್ತವ್ಯವಾಗಿರುವುದು. ಸಾರಕ ಅಕ್ಷರಗಳಲ್ಲಿ ಒಪ್ಪ ಕಾಗದದಲ್ಲಿ ಸುಂದರವಾಗಿ ಅಚ್ಚುಹಾಕಿಸಿದೆ. ಪ್ರತಿಯೊಂದು ಪುಟವೂ ಶುದ್ಧವಾಗಿರುವಂತೆ ಪ್ರೂಫುಗಳನ್ನು ಸರಿಯಾಗಿ ನೋಡಿ ತಿದ್ದಿಸಲಾಗಿದೆ. ಶಾಸ್ತ್ರಿಗಳವರ ಸಂಪಾದಕತ್ವದಲ್ಲಿ ಈ ಗ್ರಂಥವನ್ನು ಒಬ್ಬ ಪಂಡಿತರು ಸರಿಯಾಗಿ ಪರಿಶೀಲಿಸಿರುವರು. ಹೀಗೆ ಎಲ್ಲ ರೀತಿಯಿಂದಲೂ ಸಂಪೂರ್ಣವಾಗಿ ಸುಧಾರಿಸಿರುವ ಈ ಗ್ರಂಥವನ್ನು ಕಾರಣಾಂತರದಿಂದ ಶ್ರೀಮದ್ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವದ ಪುಣ್ಯಕಾಲದಲ್ಲಿ ಪ್ರಕಟಿಸಲಾಗಲಿಲ್ಲ. ಮುಂದಿನ ಶ್ರೀಮದ್ಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವದ ಪುಣ್ಯಕಾಲದಲ್ಲಿ ಪ್ರಕಟಿಸಲಾಗುವುದು. ಕೈಪಳ್ಳಕ್ಕೆ ಕಳುಹಿಸಲಾಗುವುದು. ಕೈಪಳ್ಳಕ್ಕೆ ಕಳುಹಿಸಲಾಗುವುದು ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಕೊಂಡುಕೊಳ್ಳಬೇಕು.

ಬೆಲೆ ೩ ರೂಪಾಯಿ.

ಮುದ್ರಿಸಲ್ಪಡಬಹುದಾದ ಪ್ರಕಟಣೆಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಬಂಗಾರ್ಯ ಅಷ್ಟಕಲೇಖನಗಳಿಂದ ಕೂಡಿದ ಫೋಟೋ ನೈಜ ಬಣ್ಣದ ಬೆಲೆ ೧೫ಕ್ಕೆ ೦—೬—೦

ಶ್ರೀರೇಣುಕಾಚಾರ್ಯರ ಅಂಗಾವತಾರದ ಫೋಟೋ (ಸಾಮಾನ್ಯವಿದ್ಯಾರ್ಥಿಗಳಿಗಾಗಿ ಮುದ್ರಿಸಲಾಗುವುದು) ನೈಜ ೧೪×೧೨ ಬೆಲೆ ೦—೩—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹಸ್ಥಿಗಳಿಗೆ ಶಿವಮಂತ್ರೋಪದೇಶ ಉಂಟುಮಾಡಿಸುವ ಫೋಟೋ ೦—೪—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ನೈಜ ೧೪×೧೦ ಬೆಲೆ ೧೫ಕ್ಕೆ ... ೦—೪—೦

" " " ಚಿಕ್ಕ ನೈಜ ಬೆಲೆ ... ೦—೦—೬

ಶ್ರೀ ಜಗದ್ಗುರು ಸಮಸ್ತವೀರಶೈವ ಶಿವಾಚಾರ್ಯರಿಗೆ ಮಾಡಿದ ಉಪದೇಶದ ಫೋಟೋ ... ೦—೦—೬

ಶ್ರೀ ರೇಣುಕಾಚಾರ್ಯರು ಮಹಾಸಮುದ್ರದ ಶಿವಾಚಾರ್ಯರಿಗೆ ಲಿಂಗದೀಕ್ಷೆ ಮಾಡಿಸುವ ಫೋಟೋ ... ೦—೦—೬

ಶ್ರೀರೇಣುಕಾಚಾರ್ಯರು ಶ್ರೀಕಂಠಾಚಾರ್ಯರಿಗೆ ಪಂಚಾಚಾರ್ಯಪದವಿಯನ್ನು ಅನುಗ್ರಹಿಸುವ ಫೋಟೋ ೦—೦—೬

ಶ್ರೀರೇಣುಕಾಚಾರ್ಯರು ವಿಜೃಂಭಣೆಯಿಂದ ಪ್ರಾಣದಾನವನ್ನು ಕೊಟ್ಟ ಶಿವಭಕ್ತರಿಗೆಲ್ಲ ಸ್ವಾತ್ಮಸುಖವನ್ನು ಕೊಡುವ ಫೋಟೋ ೦—೦—೬

ಶ್ರೀ ಜಗದ್ಗುರು ವೀರಶೈವಶಿಖಾಮಣ್ಯಾಚಾರ್ಯಮಹಾಸ್ವಾಮಿಗಳವರ ಫೋಟೋ (ಸಾಮಾನ್ಯವಿದ್ಯಾರ್ಥಿ) ೦—೪—೦

ಶ್ರೀ ಕಾಶೀಜಗದ್ಗುರುಗಳಿಗೆ ಶ್ರೀಪಂಚಾಚಾರ್ಯರು ಜಗದ್ಗುರು ಪಟ್ಟಾಭಿಷೇಕಮಾಡಿಸಿದ ಫೋಟೋ ... ೦—೦—೬

ಸಮಸ್ತ ವೀರಾಗಮೋದ್ಧಾರಕರಾದ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೪—೦

ಶ್ರೀಮದ್ಭದ್ರಗುರು ಸಿದ್ಧಾಸನಾರೂಢರಾದ ಶ್ರೀ ಜಗದ್ಗುರು ವಿಶ್ವಲಿಂಗಶಿವಾಚಾರ್ಯರ ಫೋಟೋ .. ೦—೦—೬

ಶ್ರೀಮದ್ಭದ್ರಗುರು ವೀರಾಸನಾರೂಢರಾದ ಶ್ರೀ ಜಗದ್ಗುರು ವಿಶ್ವಲಿಂಗಶಿವಾಚಾರ್ಯರ ಫೋಟೋ .. ೦—೦—೬

ಶ್ರೀಮದ್ಭದ್ರಗುರು ಪಟ್ಟಾಭಿಷೇಕರ ಶ್ರೀಜಗದ್ಗುರು ವಿಶ್ವಲಿಂಗಶಿವಾಚಾರ್ಯರ ಪಟ್ಟಾಭಿಷೇಕದಲ್ಲಿ ಸಮಸ್ತಾಸ್ಥಾನಗಳ ಫೋಟೋ .. ೦—೦—೬

ಶ್ರೀಮದ್ಭದ್ರಗುರು ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀಜಗದ್ಗುರುಗಳು ಕಾಣಿಕೆಯಿಂದಿರುವ ಫೋಟೋ ೦—೦—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸಾಮಾನ್ಯವಿದ್ಯಾರ್ಥಿಗಳಿಗಾಗಿ ಮುದ್ರಿಸಲಾಗುವುದು) ಚಿಕ್ಕನೈಜ ಬೆಲೆ ೦—೨—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸಾಮಾನ್ಯವಿದ್ಯಾರ್ಥಿಗಳಿಗಾಗಿ ಸಮಗ್ರಮುದ್ರಿಸಲಾಗುವುದು) ದೊಡ್ಡನೈಜ ಬೆಲೆ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಸ್ವಾಮಿಗಳ ಅತ್ಯಂತ ಸುಂದರವಾದ ಫೋಟೋ ಬೆಲೆ ... ೦—೦—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಅಪ್ಪಟವಾದ ಸುಂದರ ಫೋಟೋ ಬೆಲೆ ೦—೦—೬

ಶ್ರೀ ಜಗದ್ಗುರು ಕೇದಾರಪೀಠದ ಅತ್ಯಂತ ಸುಂದರವಾದ ಗೊಂಬೆಯಾರ ಫೋಟೋ ... ೦—೦—೬

ಶ್ರೀ ಜಗದ್ಗುರು ಕಾಶಿಪೀಠದ ಸಿಂಹಾಸನಾರೂಢ ಶ್ರೀಮನ್ಮಹಾಕಾಶೀಜಗದ್ಗುರುಗಳವರು ಪಟ್ಟಾಭಿಷೇಕಮಾಡಿಸಿದ ಫೋಟೋ .... ೦—೦—೬

ಪೆ ಗಂಡಿಯ ಕಂಬಿಯಲ್ಲಿರುವ ನವರೀತಿಯ ರಂಭಾಸ್ತಂಭ ಜಗದ್ಗುರುಗಳ ಅಷ್ಟಸ್ಥಾನಕ್ಕೆ ಮಹೋಪಕಾರ ಫೋಟೋ ೦—೦—೬

ಶ್ರೀಜಗದ್ಗುರುಸಂಸ್ಥಾಪಕರು ಪೀಠದಲ್ಲಿ ಸ್ಥಾಪಿಸಿಬಿಟ್ಟಿರುವ ಶಿವಾಕಾರಗಳು ... ೦—೨—೬

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಪಟ (೩ನೆಯ ಆವೃತ್ತಿ)	....	....	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	...	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	...	....	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	....	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	....	....	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	....	....	೨ ಆಣೆ
ಜಪವಾದಿನಿಷತತ್ವದರ್ಶನ (೪ನೆಯ ಆವೃತ್ತಿ)	....	....	೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	....	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	....	....	೨ ಆಣೆ
ಶಿವಶಕ್ತಿವಿಲಾಸ	....	....	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	....	....	೨ ಆಣೆ
ಭಲ್ವನಾಶಾತ್ಯ (೩ನೆಯ ಆವೃತ್ತಿ)	....	....	೩ ಆಣೆ
ಪಂಚಾಚಾರ್ಯಪ್ರಕಾಶ	....	....	೩ ಆಣೆ
ಪಂಚಾಚಾರ ಪ್ರಕಾಶಿಕಾ	....	....	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	....	....	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	....	....	೪ ಆಣೆ
ಲಿಂಗಧಾರಣವಿಧಿ	....	....	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	....	....	೪ ಆಣೆ
ಶ್ರೀಪಟಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	....	....	೪ ಆಣೆ
ವೈದಿಕವಾಙ್ಮಯರಹಸ್ಯ	....	....	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	....	....	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) (೩ನೆಯ ಆವೃತ್ತಿ)	....	....	೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೀಕರಣ (೩ನೆಯ ಆವೃತ್ತಿ)	....	....	೬ ಆಣೆ
ವೀರಶೈವಾನ್ಹಿಕೈಷ್ಟಿ-ಶ್ರಾದ್ಧವಿಧಿ	....	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಜಾತ್ರೆ, ಚಿಕ್ಕನೈಜ)	....	....	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	....	....	೮ ಆಣೆ
ವೀರಶೈವಮಹಾತ್ಮರು	....	....	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	....	....	೮ ಆಣೆ
ಆಗಮಪರಿಜ್ಞಾನ	....	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಬಾಷ್ಪಾಂಜಲಿ (ತೆಲುಗು)			೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	....	....	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನವಕ್ಷತ್ರಮಾಲಿಕಾ	....	....	೮ ಆಣೆ
ಕನ್ನಡ ನ್ಯಾಯಶತಕಮ್	....	....	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	....	....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	....	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	....	....	೧ ರೂ.
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	....	....	೧ ರೂ.
ವಿವೇಕಮುಕ್ತಾವಳಿ	....	....	೧ ರೂ.
ವಿಚಾರಸಾರಾವಳಿ	....	....	೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೩ನೆಯ ಆವೃತ್ತಿ)			೧೫ ರೂ.
ಶ್ರೀಕರಭಾಷ್ಯಂ (ಚಿಕ್ಕಸೈಜ್)	....	....	೨ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	....	....	೨ ರೂ.
ಶಿವಾಗಮಸಂಗ್ರಹಃ (ಪಂಚಪ್ರಶ್ನಾಗಮಾಂತರ್ಗತವಾಗಿರುವ ಆಗಮಗಳೆಲ್ಲವೂ ಸಮಗ್ರವಾಗಿ ಒಂದೇ ಸಂಗ್ರಹವಾಗಿ ಕೂಡಿಸಿರುವುದು)			೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	....	೩॥ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	....	೩ ರೂ.
ವೀರಶೈವಮತ್ತ (೩ನೆಯ ಆವೃತ್ತಿ, ೪೦ ಪುಟಗಳ ಪೋಟೋಗಳುಳ್ಳದ್ದು)			೩ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	....	....	೧೨ ರೂ.
A brief life-sketch of Pandit Sri Kashinatha Shastriji (*English*)			4 As.
The Philosophical Aspect of Virasaivism (*English*)	...		8 As.
Speeches by Pandit Shri Kashinatha Shastriji (*English*)			12 As.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	..	...	೩ ಕ.
ವೀರಶೈವರತ್ನ (ಮರಾಠಿ)	....	..	೫ ಕ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	..	..	೫ ಕ.
ನಂದಿಕೇಶ್ವರಕಾರಿಕಾ (ಸಂಸ್ಕೃತ)	....		೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು

Edited, Printed and Published by Brahmmath Mahadevaiah at Shri Panchacharya Electric Press, Savaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ. ಸಂಪಾದಕರು— ನಾಗನೂರು ಬೃ॥ ಮಹಾದೇವಯ್ಯನವರು ಏ ಪಿ. ಖರ್ಚು ಸೇರಿ ॥ ರೂ ೬ ಆಣೆ.

ಸಂಪುಟ ೨೫] ಸೋಮವಾರ ತಾ॥ ೧೯ ನೇ ನವೆಂಬರ್ ೧೯೫೧ [ಸಂಚಿಕೆ ೨೮

ಪೆಂಚಿಲೋಹದ ಲಿಂಗೋದ್ಭವ ಮೂರ್ತಿಗಳು

ರುದ್ರಾಭಿಷೇಕಾದಿಗಳನ್ನು ಮಾಡುವ ದಕ್ಕೆ ಅನುಕೂಲವಾಗುವಂತೆ ಪಂಚಲೋಹದಲ್ಲಿ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗಳನ್ನು ತಯಾರಿಸಬೇಕೆಂದು ಬಹುಜನ ಗುರುಭಕ್ತರು ಅಪೇಕ್ಷಿಸುತ್ತಿದ್ದರು. ಅವರ ಅಪೇಕ್ಷಾನುಸಾರವಾಗಿ ಈಗ ಮೂರ್ತಿಗಳು ತಯಾರಾಗಿವೆ. ಬೇಕಾದವರು ಬರೆದು ತರಿಸಿಕೊಳ್ಳಬೇಕು.

ಒಂದು ಮೂರ್ತಿಯ ಬೆಲೆ ೧೬ ರೂ.

ಮ್ಯಾನೇಜರ್—
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

++++++++++++++++++++++++

ಪತ್ರವ್ಯವಹಾರ

[ಚಾಮ್ಕೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. —ಸಂ]

ಶ್ರೀ ೧೦೦೮ ಜಗದ್ಗುರು ಉಜ್ಜಯಿನೀ ಮಹದಲ್ಲಿ ಸೇವಾಕಾರ್ಯ

ತುಮಕೂರು ಆರ್ಯನ್ ಕೈಗಾರಿಕೆಗೂ ಮತ್ತು ಇಂಜನಿಯರಿಂಗ್ ಕಾರ್ಖಾನೆಗೂ ಮಾಲೀಕರಾದ ಶೀತಕಲ್ಲು ಹಿರೇಮಠದ ಎಸ್. ರೇವಣಾರಾಧ್ಯರು ತಮ್ಮ ಮಕ್ಕಳು ಮೊಮ್ಮಕ್ಕಳಾದಿಯಾಗಿ ಇನೇ ಕಾರ್ತಿಕ ಶುದ್ಧ ತದಿಗೆ ಶುಕ್ರವಾರ ಶ್ರೀ ಉಜ್ಜಯಿನಿ ಮಹಕ್ಕೆ ಬಂದು ಶ್ರೀ ಮರುಳಸಿದ್ಧೇಶ್ವರಮೂರ್ತಿಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನಪೂಜಾದಿಗಳನ್ನು ಮಾಡಿಸಿದ್ದಲ್ಲದೆ ಶ್ರೀ ಕ್ರೀಯಾಮೂರ್ತಿಗಳ ಪಾದಪೂಜೆಗಳನ್ನು ಮಾಡಿ ತೀರ್ಥಪ್ರಸಾದ ಸ್ವೀಕರಿಸಿದರು.

ರಾತ್ರಿ ಶ್ರೀಸ್ವಾಮಿಗೆ ದೊಡ್ಡ ಪಲ್ಲಕ್ಕಿ ಉತ್ಸವವನ್ನು ಆತ ವಿಜೃಂಭಣೆಯಿಂದ ನಡೆಯಿಸಲು ಏರ್ಪಾಟು ಮಾಡಿದ್ದರು. ಸಾವಿರಾರು ಜನ ಭಕ್ತಾದಿಗಳು ರಾತ್ರಿ ೧ ಗಂಟೆಯ ವರೆಗೂ ಹಾಜರಿದ್ದು ಬಹಳ ಆನಂದ ಪಟ್ಟರು. ಪೀಠದ ಶ್ರೀಯಾಮೂರ್ತಿಗಳಾದ ಪಟ್ಟದ ಸ್ವಾಮಿಗಳು ಈ ಎಲ್ಲಾ ಏರ್ಪಾಟುಗಳನ್ನು ಸಮರ್ಪಕವಾಗಿ ನಡೆಯಿಸಿ ಭಕ್ತಾದಿಗಳನ್ನು ಸಂತೋಷಗೊಳಿಸಿದರು ಒಬ್ಬ ಭಕ್ತ

ಸಂತೋಷವಾರ್ತೆ

ರೌಡಕುಂದಿ ಹಿರಿಯಮಠದ ಪಂ॥ ಸಿದ್ಧದಾನಶಿವಾಚಾರ್ಯರಿಗೆ ಭಾರತೀಯ ವ್ಯಾಪಿಣಿ ಪುಸ್ತಕಾಲಯ ವೊಂದರಲ್ಲಿ " ಘಂಟಾಕರ್ಣಕಲ್ಪವಿಧಿ " ಎಂಬ ತಾಂತ್ರಿಕ ವಾದ ಚಿಕ್ಕ ಪೊತ್ತಿಗೆಯೊಂದು ದೊರತಿರುವುದೆಂದು ತಿಳಿದುಬಂದಿದೆ. ಆ ಪುಸ್ತಕವು ಸಂಸ್ಕೃತದಿಂದ ರಾಜಸ್ಥಾನೀಭಾಷೆಗೆ ಅನುವಾದಿಸಲ್ಪಟ್ಟಿದ್ದು ಕೇದಾರದ ಆದಿ ಜಗದ್ಗುರು ಶ್ರೀ ಘಂಟಾಕರ್ಣಶಿವಾಚಾರ್ಯರಿಗೆ ಸಂಬಂಧಿಸಿದ್ದಾಗಿದೆಯೆಂದೂ ಗುಜರಾತ, ರಾಜಸ್ಥಾನಪ್ರದೇಶಗಳಲ್ಲಿ ಶಿವಗಣಶ್ರೇಷ್ಠ ಜಗದ್ಗುರು ಘಂಟಾಕರ್ಣನನ್ನು ಪೂಜಿಸುವ ಭಕ್ತರು ಅನೇಕರಿದ್ದಾರೆಂದೂ ಈ ಬಗ್ಗೆ ಶ್ರೀಗಳು ಸಪ್ರಮಾಣವಾಗಿ ಬರೆಯಲಿರುವರೆಂದೂ ಅಧಿಕೃತವಾಗಿ ತಿಳಿದುಬಂದಿದೆ.

ದೀಪಾವಳಿ ಮಹೋತ್ಸವ ಧಾರವಾಡ

ಧಾರವಾಡದ ಕಾವೇರಿ ಪೇಟೆಯಲ್ಲಿರುವ ಗುರುಭಕ್ತಿ ಧುರೀಣರಾದ ಶ್ರೀಮಾನ್ ಬಸವಲಿಂಗಪ್ಪನವರು ಕೋಟೂರು ಇವರು ಬೆಂಗಿನಕಾಯಿ ದೊಡ್ಡ ವ್ಯಾಪಾರಸ್ಥರಿದ್ದು ತಮ್ಮ ಅಂಗಡಿ ದೀಪಾವಳಿ ಮಹಾಪೂಜೆಯನ್ನು ಗುರುಗಳ ಸಾನ್ನಿಧ್ಯೀಭೂತವಾಗಿ ಮಾಡಬೇಕೆಂದು ಗದಗಿನಿಂದ ಶ್ರೀ॥ ಷ॥ ಬ್ರ॥ ಚಿಕ್ಕಮಣ್ಣೂರ ಸ್ವಾಮಿಗಳನ್ನು ಬರಮಾಡಿಸಿಕೊಂಡು ಮಹಾಲಕ್ಷ್ಮೀಪೂಜೆಯನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು. ಇವರ ತಮ್ಮನವರಾದ ಶ್ರೀಮಾನ್ ಶಿವಮೂರ್ತಿಪ್ಪನವರು ಇವರಾದರೂ ಗುರುಭಕ್ತಿತಿವಾಂಕಿತರು ಈ ಬಂಧುಗಳ ಪತ್ನೀಪುತ್ರಾದಿಗಳು ಧರ್ಮವಂತರಿದ್ದು ಒಳ್ಳೇ ಸದಾಚಾರಿಗಳದ್ದಾರೆ ಶ್ರೀಮಾನ್ ಬಸವಲಿಂಗಪ್ಪನವರು ಗುರುಲಿಂಗಜಂಗಮರ ಮೇಲೆ ತುಂಬಾ ಪ್ರೇಮಿಗಳದ್ದು ಶಿವಪೂಜೆ ನಿಷ್ಠೆಯುಳ್ಳವರಾದ್ದರಿಂದ ಹಾವೇರಿಪೇಟೆ ಧಾರವಾಡ ಯಾನತ್ತೂ ಜನರು ಇವರಿಗೆ ಶರಣರೆಂದು ಕರೆಯುತ್ತಿರುವರು. ಬಂದ ಪೂಜ್ಯರಿಗೆ ಮಹಾಪ್ರಸಾದ ಕೊಡುವ ಸ್ವಭಾವವುಳ್ಳವರು ಶ್ರೀ ಜಗದ್ಗುರು ಪಂಚಾಚಾರ್ಯರು ಇವರಿಗೆಲ್ಲ ಸುಖ ಸಂಪತ್ತು ಕೊಡಲೆಂದು ಕೋರುವ.

ಶ್ರೀ ವೇ॥ ರುದ್ರಮುನಿಸ್ವಾಮಿ ಹಾಳ್ಕರ
ಚಿಕ್ಕಮಣ್ಣೂರು

ದುಃಖವಾರ್ತೆ

ಧಾರವಾಡ ಜಿಲ್ಲಾ ಕುಂದಗೋಳ ಮಹಾಲ ಪೈಕಿ ನೆಲಗುಡ್ಡ ತಲಕಳ್ಳಿ ಗ್ರಾಮದ ಗಣ್ಯವ್ಯಕ್ತಿಗಳಾದ ಕಜ್ಜಿ ಸಂಗನಬಸಪ್ಪನವರು ತಮ್ಮ ೬೫ ನೇ ವಯಸ್ಸಿನಲ್ಲಿ ತಾ॥ ೬-೧೧-೫೧ ಬುಧವಾರ ಮುಂಜಾನೆ ೧೧ ಘಂಟೆ ಸಮಯದಲ್ಲಿ ಶಿವೈಕ್ಯರಾದರು. ಸದರಿಯವರು ಸಪ್ಪಜ್ಞಸದಾಚಾರಸಂಪನ್ನರೂ ಒಳ್ಳೇ ಭಕ್ತಿವಂತರೂ ಗುರುಲಿಂಗಜಂಗಮಸೇವಾಧುರೀಣರೂ ಆಗಿದ್ದರಲ್ಲದೆ ಬೆಲವಂತರ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳವರ ಸೇವೆಯನ್ನು ಅಂತ್ಯಕಾಲದವರೆಗೂ ತ್ರಿಕರಣಪೂರ್ವಕ ಮಾಡಿ ಅವರ ಗದ್ದುಗೆಯ ಮುಂದೆ ಸದಾ ನಂದಾದೀವಿಗೆ ತಮ್ಮನಂತರವೂ ನಡೆಯುವಂತೆ ಮಾಡಿ ಉತ್ಕಟವಾದ ಗುರುಭಕ್ತಿಯನ್ನು ಸಲ್ಲಿಸಿದ್ದರು ಇವರ ವಿಯೋಗದಿಂದ ಅವರ ಬಂಧು-ಮಕ್ಕಳು-ಆಪ್ತರಿಗಲ್ಲದೆ ಇಡೀ ಗ್ರಾಮಕ್ಕೆ ಅಪಾರ ದುಃಖವಾಗಿದೆ ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಗ್ರಾಮನಿವಾಸಿ.

ಸ್ವೀಕಾರ

ಬಳ್ಳಾರಿ ತಾ॥ ಹೊಸಪೇಟೆ ಗ್ರಾಮವಾಸಿಗಳಾದ ಶ್ರೀ ಎಂ ಜಂಬಣ್ಣ ಮ್ಯಾದಾರ ಓಂಕಾರೇಶ್ವರ ಮಂದಿರದ ಅಧ್ಯಕ್ಷ ಇವರು ಸದರಿ ಗ್ರಾಮದಲ್ಲಿ ಓಂಕಾರೇಶ್ವರಲಿಂಗ ಸ್ಥಾಪನೆಯು ನಡೆದ ಜ್ಞಾಪಕಾರ್ಥವಾಗಿ ಪ್ರಧಾ ಪೋಷಣೆಗೆಂದು **5** ರೂ ಗಳನ್ನು ಸಮರ್ಪಿಸಿದ್ದು ಚಿಕ್ಕಮಣ್ಣೂರು ಶ್ರೀಗಳವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ತಾ॥ ಹಾರ್ನಹಳ್ಳಿಯಲ್ಲಿರುವ ಗುಬ್ಬಿ ಶಿವಳಧಾಪಂಡಿತ ವೇ॥ ಶಿವರುದ್ರಶಾಸ್ತ್ರಿಗಳವರು ತಮ್ಮ ಪಹ್ಯುಬ್ಧಕಾಂತಿ ಕರ್ಮಾಚರಣೆಯನ್ನು ನೆರವೇರಿಸಿದ ಜ್ಞಾಪಕಾರ್ಥವಾಗಿ ಪಂಡಿತಶಿರೋಮಣಿ ಲೋಕಮಾನ್ಯ ಶಿವೈಕ್ಯ ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರ ಸ್ಮಾರಕ ನಿಧಿಗಾಗಿ **5** ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಗದಗ ಶಹರ ವಾಸಿಗಳಾದ ಶ್ರೀ ಹೊನ್ನಪ್ಪನವರು ಮಲಸಮುದ್ರ ಇವರ ಸುಪುತ್ರಿ ಕುಂ॥ ಸೌ॥ ಬಸವಣ್ಣೆವ್ವ ನನ್ನು ಹಂಪಸಾಗರದ ಶ್ರೀ ತೋಟಪ್ಪನವರು ಮಸಿಗಿ ಇವರ ಜೇ॥ ಸುಪುತ್ರ ಗುರುಬಸಪ್ಪನಿಗೆ ಕೊಟ್ಟು ಮಂಗಳೂರ ಆರಳೆಲೆಮಠದ ಪಟ್ಟಾಧ್ಯಕ್ಷರ ಸಮ್ಮುಖದಲ್ಲಿ ನೆರವೇರಿದ ನಿಶ್ಚಯಕಾರಣದ ಸವಿನೆನಪಿನಾಗಿ ಪ್ರಧಾಪೋಷಣಾರ್ಥವಾಗಿ ತೆಗೆಯಿಸಲ್ಪಟ್ಟ ವಧುವಿನ ಕಡೆಯಿಂದ **2** ರೂ. ಗಳೂ ಮತ್ತು ವರನ ಕಡೆಯಿಂದ **2** ರೂ ಗಳೂ ಒಟ್ಟು **4** ರೂ ಗಳು ಆರಳೆಲೆ ಮಠದ ಶ್ರೀಗಳವರ ದ್ವಾರಾ ತಲುಪಿರುತ್ತವೆ.

ಧಾರವಾಡ ತಾ॥ ತಲಕಳ್ಳಿ ಗ್ರಾಮದ ಗಣ್ಯವ್ಯಕ್ತಿಗಳಾದ ಸಂಗನಬಸಪ್ಪನವರು ತಿವೈಕ್ಯರಾದ ಸಮಯದಲ್ಲಿ ಪ್ರಧಾಪೋಷಣಾರ್ಥವಾಗಿ ಸಮರ್ಪಿಸಿದ **2** ರೂ. ಗಳು ಶ್ರೀ ಬಸವಲಿಂಗಪ್ಪ ಕಜ್ಜಿ ತಲಕಳ್ಳಿ ಇವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಕಾರ್ಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಕೇದಾರಪೀಠದ ವಿಜಯದ ಬಗ್ಗೆ ಕಾಶೀಪೀಠದಲ್ಲಿ ಸಂತೋಷಕಾರಂಭ

ಶ್ರೀ ಜಗದ್ಗುರು ಕೇದಾರಪೀಠದ ಉತ್ತರಾಧಿಕಾರದ ಬಗ್ಗೆ ಬಾದರಾಯಣಪುರ ಮಠಾಧಿಪತಿಗಳಾಗಿದ್ದ ದಕ್ಷಿಣದೇಶದ ನಕ್ಕಲೀನ ವೀರಶೈವ ಜಂಗಮ ಬ್ರಹ್ಮಚಾರಿಗಳೇ ಕೇದಾರನಾದ ರಾವಲರಹಗಲೆಂಕು ಚಿತ್ತ ಮಹತ್ತ್ವದ ನಿರ್ಣಯವು ಯು ಪಿ ಸರಕಾರದಿಂದ ಮಾಡಲ್ಪಟ್ಟು ಆದಕ್ಕೆಯನುಸಾರವಾಗಿ ತಾವೇ ನಮ್ಮವಿನ ಮಠದ ಪೀಠಾಧಿಪತಿಗಳಾಗಿ ಶ್ರೀ ವಿಶ್ವನಾಥಲಿಂಗಶಿವಾಚಾರ್ಯ ಸ್ವಾಮಿಗಳೇ ಉತ್ತರಾಧಿಕಾರಿಗಳಾದ ರಾವಲಲೆಂಬ ಗವರ್ನರಿಂದ ಮಾನ್ಯತೆ ಪೊರೆತ ಸಂತೋಷಸಿಮಿತ್ತವಾಗಿ ಜಗದ್ಗುರು ಶ್ರೀ ಗುರುಸಿದ್ಧಸ್ವಾಮಿಗಳವರ ೩೦ ದಿನ ಕಾಶೀ ವೀರಶೈವ ಪಿಠದ ಸಂಸ್ಥಾನದಲ್ಲಿ ಸಂತೋಷಕೂಟವು ಸೇರಿತು. ಶ್ರೀ ಕಾಶೀ ವಿದ್ಯಾನಿಧಿ ಸಂಸ್ಕೃತಪಾಠಶಾಲಾಧ್ಯಕ್ಷರಾದ ಶ್ರೀ ಎಂ.ಎಂ. ಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರು ಸಂತೋಷಕೂಟದ ಆದ್ಯಕ್ಷಸ್ಥಾನವನ್ನಲಂಕರಿಸಿದ್ದರು.

ಪ್ರಥಮದಲ್ಲಿ ವೇದಪೌರಾಣವಾದ ಬಳಿಕ ಸಭಾ ಕಾರ್ಯಾರಂಭವಾಯಿತು. ಮೊದಲನೆಯದಾಗಿ ಹಿರೇಮಠದ ಶ್ರೀ ಗುರುಸಿದ್ಧಸ್ವಾಮಿಗಳು "ಕೇದಾರಪೀಠದ ಇತಿಹಾಸದಲ್ಲಿ ಈ ೨೦ ವರ್ಷಗಳಿಂದ ನಡೆದ ಸಂಘರ್ಷಣೆ ಮತ್ತು ಕೊನೆಗೆ ವೀರಶೈವ ಸನಾತನಶಾಸ್ತ್ರದ ವಿಜಯ" ಇವುಗಳ ಒಗ್ಗೆ ಮಾತನಾಡಿ ಕೇದಾರಪೀಠದ ವಿಜಯ ಪ್ರಯತ್ನಕ್ಕಾಗಿ ಕಾಶೀ ವೀರಶೈವ ವಿದ್ವತ್ಸಭಾ ವದವರು ಸಂತೋಷಕೂಟವನ್ನೇರ್ಪಡಿಸಿದುದಂತೆ ವೀರಶೈವ ಸಮಾಜವಿರುವ ಸ್ಥಿತಿಯೊಂದು, ನಗರ ಗ್ರಾಮಗಳ ವ್ಯಾಪ್ತಿಯಲ್ಲಿ ಸಂತೋಷಕೂಟಗಳು ಸರ್ವಸಾಧಾರಣವೆಂದು, ಕಳಕಳಿಯಿಂದ ಬಿನ್ನಪಿಸಿಕೊಂಡರು. ಕೇದಾರಪೀಠದ ಜಗದ್ಗುರು ಪಟ್ಟಾಭಿಷೇಕವು ಅತ್ಯಂತ ವೈಭವದಿಂದ ನೆರವೇರಿ ಆ ಪೀಠದ ಸಂಬಂಧವಾದ ಎಲ್ಲ ಕಾರ್ಯಗಳು ಮಂಗಲಮಯವಾಗಿ ರೂಪಗೊಳ್ಳುವ ಸಂಯೋಗವು ಶ್ರೀ ಜಗದಾಚಾರ್ಯರ ಅನುಗ್ರಹದಿಂದ ಶೀಘ್ರವಲ್ಲಿಯೇ ಬರಲಿದೆ ಎಂದು ನುಡಿದು ತಮ್ಮ ಭಾಷಣವನ್ನು ಮುಗಿಸಿದರು

ಕೇದಾರಪೀಠದ ಮಹಾಯಶಾರ್ಕರಯನ್ನು ಕೇಳಿ ಆನಂದಪುಲಕಿತರಾಗಿ ಅನೇಕ ವೀರಶೈವ ಪ್ರಮುಖರು ಕಳುಹಿಸಿದ ಆನಂದಸೂಚಕ ತಾರು ಮತ್ತು ಲಕಾವು ಪತ್ರಗಳನ್ನು ಶ್ರೀ ಗುರುಸಿದ್ಧಸ್ವಾಮಿಗಳು ಸಭೆಯಲ್ಲಿ ಓದಿ ಹೇಳಿದರು. ಸಂತೋಷಕೂಟವು ಪ್ರಾರಂಭವಾಗುವ ಸಮಯಕ್ಕೆ ಸರಿಯಾಗಿ "ಅಖಿಲ ಭಾರತ ಸನಾತನ ವೀರಶೈವ ಜಂಗಮ ಸಂಘ"ದ ಸೆಕ್ರೆಟರಿಗಳಿಗೆ "ಶ್ರೀ ಕೇದಾರನಾಥದಿಂದ ಕಮಿಟಿ"ಯ ಸೆಕ್ರೆಟರಿಗಳೆಂದ ಬಂದ ರಾವಲ್ ತಿಲಕೋತ್ಸವ ಸಂಬಂಧವಾದ ಪ್ರತ್ರವನ್ನೂ ಸಭೆಯ ಮುಂದೆ ಓದಿ ಹೇಳಲಾಯಿತು. ಶ್ರೀ ಟಿಹರೀ ಮಹಾರಾಜರು ನಾಳೆ ಬರುವ ತಾ|| ೩೧-೧೧-೧೯೩೨ ನೇ ವಸಂತ ಪಂಚಮಿಯ ಶುಭದಿವಸದಲ್ಲಿ ಪಂ|| ಶ್ರೀ ವಿಶ್ವನಾಥಲಿಂಗಶಿವಾಚಾರ್ಯ ಸ್ವಾಮಿಗಳಿಗೆ ತಿಲಕವನ್ನು (ವಿಧ್ಯುಕ್ತವಾಗಿ ಮಹಾ ಪಾದಪೂಜೋತ್ಸವದೊಂದಿಗೆ ಗುರುಕಾಣಿಕೆಯನ್ನು) ಕೊಡಲಿರುವರೆಂದು ಕೇಳಿ ಸಭೆಯೆಲ್ಲ ಹರ್ಷಭರಿತ ವಾಯಿತು.

ಆಮೇಲೆ ಪಂ|| ಶ್ರೀ ಎಸ್. ಆರ್. ಸೋಮಶೇಖರ ಶಾಸ್ತ್ರಿಗಳು ರಾಯಚೂರು ಅವರು "ಕೇದಾರಪೀಠದ ಮಹಿಮೆ ಮತ್ತು ಆ ಪೀಠದ ಮೇಲೆ ಬಂದ ವಿಪತ್ತುಗಳು ನಿವಾರಣೆಯಾದ ಬಗೆ" ಇವುಗಳ ಬಗ್ಗೆ ತಮ್ಮ ಅನುಭವದ ಮಾತುಗಳನ್ನು ಮಾರ್ಮಿಕವಾಗಿ ಹೇಳಿದರು. ಕೇದಾರಪೀಠದ ವಿಜಯ ಒಂದು ಪೀಠದ ವಿಜಯ ವಲ್ಲತ್ವವಲ್ಲವೆಂತಲೂ ಆದು ವೀರಶೈವ ಸನಾತನ ಸಿದ್ಧಾಂತದ ವಿಜಯವೆಂತಲೂ ಇದರಿಂದಾಗಿ ಪಂಚ ಪೀಠಗಳ ಉನ್ನತ್ಯನ್ನು ಜಗದುದ್ಧಾರಕವಾಗಿ ಉಳಿಯುವುದೆಂ ತಾಯಿತೆಂತಲೂ ಸುಂದರವಾಗಿ ವಿವರಿಸಿದರು. ತದನಂತರ ಶ್ರೀ ಸ ಬ್ರ| ಕೂಡಲಿಯ ಹಿರೇಮಠದ ಸದ್ಗುರುಸಾರ್ವಭೌಮಾಚಾರ್ಯರು, ನೀಲಗುಂದ ಹಿರೇ ಮಠದ ಶ್ರೀ ಸ ಬ್ರ| ಯಜ್ಞೇಶ್ವರಶಿವಾಚಾರ್ಯರು, ಹೊನ್ನಾಳಿಯ ಶ್ರೀ ಸ ಬ್ರ| ಮಹೇಶ್ವರಶಿವಾಚಾರ್ಯರು, ಮೊಳಕಾಲ್ಮೂರು ಶ್ರೀಮಠದ ಸದ್ಗುರುಸಿದ್ಧಾಚಾರ್ಯರು, ಮೊದಲಾದವರು ಮಾತನಾಡಿದರು. ಅಮೇರಿಕ ಪಂ|| ಶ್ರೀ ಗಂಗಾಧರಶರ್ಮರವರು "ಪಂಚಪೀಠಗಳೂ ವೀರಶೈವ ಸಂಸ್ಕೃತಿಯಿಂದ" ಎಂಬ ವಿಷಯದ ಮೇಲೆ ಸಂಭಾಷಣೆಯನ್ನು ಮಾಡುತ್ತ ಕೇದಾರಪೀಠದ ವಿಜಯದ ಬಗ್ಗೆ ತಮ್ಮ ಆನಂದವನ್ನು ವ್ಯಕ್ತಪಡಿಸಿ ಕೇದಾರ ಮಹಾಪೀಠಕ್ಕಾಗಿ ಹಗಲಿರುಳು ದುಡಿದ ಮಹಾಪೀಠಾಧಿಪತಿಗಳಿಗೂ ಕಾಶೀ ವೀರಶೈವ ವಿದ್ವತ್ಸಂಘದ ಪರವಾಗಿ ಹಾರ್ದಿಕ ಧನ್ಯವಾದಗಳನ್ನರ್ಪಿಸಿದರು.

ಕೊನೆಗೆ ಕಾಶೀ ಜಗದ್ಗುರು ಮಹಾಸ್ವಾಮಿಗಳವರು "ಕೇದಾರಪೀಠದ ಅತ್ಯಂತ ಪಟುಸೆಗಳೂ ಅವಿ ಗಳಲ್ಲಿಟ್ಟಿ ವೀರಶೈವ ಸನಾತನಶಾಸ್ತ್ರದ ವಿಜಯವೂ" ಎಂಬ ಪದವಾದ ವಿಷಯವನ್ನೆತ್ತಿಕೊಂಡು ಅನ್ಯತಮಾಡಿ ಯೆಂದ ಆಶೀರ್ವದಿಸಿದರು. ಶ್ರೀ ಜಗದ್ಗುರು ವಿಶ್ವಾರಾಧ್ಯ ಪೀಠದ ಸಮಾಜದ ಗಣ್ಯವ್ಯಕ್ತಿಗಳು, ಶ್ರೀಜಗದ್ಗುರು ವಿಶ್ವಾರಾಧ್ಯರು ಕೊನೆಯ ತರುಣದಲ್ಲಿ ಅತ್ಯಂತ ಉತ್ಸಾಹದಿಂದ ಕೇದಾರ ಪೀಠಾಭಿಮಾನಿಗಳನ್ನೂ, ಕಾಶೀ ವೀರಶೈವ ಸಮಾಜದ ಸ್ಥಿತಿಗತಿಗಳನ್ನೂ ಕುರಿತು ಮಾತನಾಡಿದರು. ಕೊನೆಗೆ ಕಾಶೀ ಜಗದ್ಗುರು ವಿಶ್ವಾರಾಧ್ಯ ಮಹಾಪೀಠಕ್ಕೆ ಆರ್ಥಿಕ ಸಹಾಯ ಮಾಡಲು ಸಭಿಕರಿಗೆ ಸೂಚಿಸಿದರು. ಸಭೆಯು ಸಮಾಪ್ತಿಯಾಗುವ ಸಮಯಕ್ಕೆ ಸರಿಯಾಗಿ ಸಭಿಕರಿಂದ ಸುಮಾರು ೩೦೦ ರೂಪಾಯಿಗಳು ವಸೂಲಾಯಿತು. ಆ ಪ್ರಕಾರ ಬದರೀನಾಥ ಟೆಂಪಲ್ ಕಮಿಟಿಯವರು ಶ್ರೀ ವಿಶ್ವನಾಥಲಿಂಗಶಿವಾಚಾರ್ಯಸ್ವಾಮಿಗಳನ್ನು ಕೇದಾರಪೀಠದ ರಾವಲ್‌ರನ್ನಾಗಿ ನೇಮಿಸಿದ ರೆಂಬ ಸಂತೋಷಕರ ವಾರ್ತೆಯನ್ನು ಕೇಳಿ ಪಂಡಿತರು "ಪಂಚಾಚಾರ್ಯ ಪ್ರಭಾ" ಪತ್ರಕೆಯಲ್ಲಿ "ಕೇದಾರ ಪೀಠದ ವಿಜಯ" ಎಂಬ ಶಿರ್ಷಿಕೆಯನ್ನು ಸ್ವತಃ ಬರೆದು ಪ್ರಕಟಮಾಡಿ ತಮ್ಮ ಆನಂದವನ್ನು ವ್ಯಕ್ತ ಗೊಳಿಸಿದರು. ಪಂಚಪೀಠಗಳ ಶ್ರೇಯೋಭಿವೃದ್ಧಿಗಾಗಿ ಇವರು ಆಯೋಜಿಸುತ್ತಿದ್ದ ಕಾರ್ಯಗಳು ಕೀರ್ತಿಯ ಪತ್ರಿಯೇ ಜಯ ವಮೆದು ಇವರ ಆತ್ಮಕ್ಕೆ ಸುಖ-ಸಮಾ ಧಾನವನ್ನುಂಟುಮಾಡಿದ್ದಿತ್ತು ಕೇದಾರಪೀಠದ ವಿಜ ಯಕ್ಕೆ ಅಡಚಣೆಗಳು ಬಂದಮಾತ್ರದಲ್ಲಿ ಕೊಂಚಕಾಲ ವಿಷಾದವಾಯಿತು. ಆಕ್ಷಣದಲ್ಲಿ ಸಂಡಿತರು ವಿಶ್ವೈಕ್ಯ ರಾದರು ಕೊನೆಗೆ ಇವರ ಇಚ್ಛೆಯೇ ಪರಿಪೂರ್ಣ ವಾಯಿತು ವೀರಾಚಾರ್ಯರ ಸೇವೆಯಲ್ಲಿ ಸ್ವಲ್ಪಮು ಮಾಡ ಅಗ್ರಸ್ಥಾನವನ್ನು ಆ ಮಹಾನುಭಾವರ ಅಂತ ರಾತ್ಮನು ಸಜಿಸಿ ಆನಂದಮುಮಾಡಿ ಲೋಲಾಡಲಿ.

"ಪಂಚಾಚಾರ್ಯ ಮಹಾಸಭೆ"ಯ ಕಾರ್ಯಕಾರಿ ಮೊಂಡಳಿ ಜೀರ್ ಮಸ್ಟರಾದ ಪಿ. ಆರ್. ಹಿರೇಮಠ ವಕೀಲರು ಹುಬ್ಬಳ್ಳಿ ಇವರು ನಮ್ಮಯದಲ್ಲಿ ತಮ್ಮ ಕಾರ್ಯ ಗಳನ್ನೆಲ್ಲ ಬದಿಗಿಟ್ಟು ಹಿನಾಲಯದವರಿಗೊ ಪ್ರಯಾಣ ಬೆಳೆಸಿ ಕೇದಾರನಾಥ ಕಮಿಟಿಯು ನಡಸುವ ಮನಸ್ಸಿನಲ್ಲಿ ವೀರಶೈವ ಸಮಾಜದ ಮತ್ತು ಇವರ ಜೀವಾಳಗಳಾದ ಪಂಚಮಪಾಠೀಠಗಳ ಬಗ್ಗೆ ಪ್ರತಿಬಿಂಬಿಸುವಂತೆ ಸಾರ್ವ ವನೆಯನ್ನುಂಟುಮಾಡಿ ಕೇದಾರಪೀಠದ ವಿಜಯಕ್ಕೆ ಫಲವಾದ ಸೇವೆಯನ್ನು ಸಲ್ಲಿಸಿರುವುದು ಅತಿಶಯವೂ ಅನುಸರಣೀಯವೂ ಆಗಿದೆ.

ತಂಗಿನ "ಧಜೋಚ ಜಿಲ್ಲಾ" ಪ್ರಧಾನ ನ್ಯಾಯಾ ಧೀಶರಾದ ಶ್ರೀ ಎಸ್. ಎಸ್. ಮೇಳೇಮಠ ಸಾಹೇಬರ ನೇತೃತ್ವದಲ್ಲಿ ದಿವಾನ್ ಬಹದ್ದೂರ್ ಶ್ರೀ ಆರ್. ಎಸ್. ಹಿರೇಮಠ ರಜಿಸ್ಟ್ರಾರ್ ಕರ್ನಿಕ್ಟರ್ ಧಾರವಾಡ, ಶ್ರೀ ಎಸ್. ಎಸ್. ನಾಲೀಮಠ ರಜಿಸ್ಟ್ರಾರ್ ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಪೂನಾ, ಶ್ರೀ ಪಿ. ಆರ್. ಹಿರೇಮಠ ರೈಲ್ವೇ ಸ್ಟೇಷನ್ ಮಾಸ್ಟರ್, ಮುನಿಸಿಪಲ್ ಕೌನ್ಸಿಲರ್ ಹುಬ್ಬಳ್ಳಿ, ಶ್ರೀ ಜಿ ಬಿ ಹಿರೇಮಠ ಬಿ ಎ., ಮುಡೇನೂರು ಇವರೇ ಮೊದಲಾದ ವೀರಶೈವಪ್ರಮುಖರ ಪ್ರತಿನಿಧಿಮಂಡಲವು ವೀರಶೈವ ಪಂಚಮಪಾಠೀಠಗಳಲ್ಲೊಂದಾದ ಕೇದಾರ ಮಹಾಪೀಠದ ಜಕ್ಕಾದಾಪ್ರತಿಷ್ಠೆಗಳ ಸಂರಕ್ಷಣೆಯ ಬಗ್ಗೆ ಉತ್ತರಪ್ರದೇಶದ ಗವರ್ನರ್ ಸಾಹೇಬರನ್ನೂ, ಮುಖ್ಯ ಮಂತ್ರಿ, ವಿದ್ಯಾಮಂತ್ರಿ ಮೊದಲಾದವರನ್ನೂ ಕಂಡು ಮೇಲಿಕೆಯನ್ನಿತ್ತುದು, ಈ ಇಪ್ಪತ್ತನೇ ಶತಮಾನದ ಪೂರ್ವಾರ್ಧವನ್ನು ಅನುಭವಿಸಿ ಉತ್ತರಾರ್ಧದಲ್ಲಿ ಹೆಜ್ಜೆ ಯಾನ್ನಿಟ್ಟಿರುವ ಈ ವೀರಸಮಾಜಕ್ಕೆ ಅತ್ಯಂತ ಮಹತ್ತ್ವ ಭರಿತ ವಿಷಯವಾಗಿದೆ. ಇಲ್ಲವೆ ವೀರಶೈವಮತದ ಇತಿ ಹಾಸದಲ್ಲೇ ಸುವರ್ಣಾಕ್ಷರಗಳಿಂದ ಉಲ್ಲೇಖಿಸುವೆಂತಹ ಮಹತ್ತರವಾದ ಆಡ್ಡರು ಯು ಪಿ. ಗವರ್ನರ್ ಸಾಹೇ ಬರಿಂದ ಹೊರಡಲಿಕ್ಕೆ ಕಾರಣೀಭೂತವಾಗಿದೆ ಈ ಸಮಸ್ತ ಪ್ರತಿನಿಧಿಮಂಡಲದವರಿಗೆಲ್ಲ ಉತ್ತರೋತ್ತರವಾಗಿ ಜಯಾರಾಧನೋನ್ಮುಖಾಗ್ಯಾದಿಗಳನ್ನು ಶ್ರೀ ಕೇದಾರನಾಥನು ಅನುಗ್ರಹಿಸಲೆಂದು ಪ್ರಾರ್ಥಿಸುವುದು ಮುಖ್ಯ ಕರ್ತವ್ಯ ವಾಗಿದೆ.

ಈ ಸಂದರ್ಭದಲ್ಲಿ ಜಗದ್ಗುರು ಕೇದಾರಪೀಠೋದ್ಧಾರ ಕ್ಕಾಗಿ ಅನೇಕ ವಿಧವಾದ ಧನಸಹಾಯವನ್ನು ಮಾಡಿದ ಕರ್ಣಾಟಕಾಂಧ್ರ ಮಹಾರಾಷ್ಟ್ರಾದಿಪ್ರಾಂತದ ಸ್ವಮತ-ಪರಮತೀಯ ಭಕ್ತಾಗ್ರಣಿಗಳಿಗೆಲ್ಲ ಶ್ರೀ ಕೇದಾರನಾಥನು ಮಂಗಲಪರಂಪರೆಯನ್ನಿತ್ತಿಯಾಲೆಂದು ಅಶಿಸುತ್ತೇವೆ.

ಈ ಸಂತೋಷಸಮಯದಲ್ಲಿ ವಿವಿಧರೀತಿಯಿಂದ ಸಾಮಾಜಿಕ ಸಲಹೆ ಸಹಾಯಗಳನ್ನು ಪಡೆಯುತ್ತ ಹಗ ಲಿರುಳೆನ್ನದೆ ಪರಿಶ್ರಮಿಸಿದ ಪೂ|| ಬ್ರ|| ಶ್ರೀ ಕೈಲಾಸಲಿಂಗ ಶಿವಾಚಾರ್ಯರ ಬಗ್ಗೆ ಸರ್ವರಿಗೂ ವ್ಯಸನವಿಸುತ್ತಿರು ವುದು ಸಹಜವಾಗಿದೆ. ದೈವಯೋಗವೇ ಬೇರೆಯಾಗಿರು ವಾಗ ಮಾನವಪ್ರಯತ್ನ ನೇನುಮಾಡಬಲ್ಲುದು? ತಾಗಿನ ಗಣತಂತ್ರಯುಗದಲ್ಲಿ ಅನುಗುಣವಾದ ಮಾರ್ಗವನ್ನು ಅನುಸರಿಸಿದರೆ ಮಾತ್ರ ಕಾರ್ಯಸಿದ್ಧಿಯಾಗುತ್ತಲಿರೆ ಎಂದು ಬೇರೆ ಅಪ್ಪಣೆಕೊಡಿಸಬೇಕಾಗಿಲ್ಲ.

ಪೂ|| ಬ್ರ|| ಶ್ರೀ ಕಾಂತಲಿಂಗಶಿವಾಚಾರ್ಯರು ಮುಖ್ಯ ಕಾಳ ಇವರಾದರೂ ಕೇದಾರನಾಥ ಕಮಿಟಿಯ ಸ್ಥಿತಿ

ಯೊಬ್ಬ ಸದಸ್ಯರ ಸ್ಥಾನಮಾನೋನ್ನತಿಗಳನ್ನು ತಿಳಿದು ತಿಳಿಯಪಡಿಸಿ ಸದ್ಭಾವನೆಯನ್ನುಂಟುಮಾಡಿದ ಪ್ರಥಮ ಶ್ರೇಯಸ್ಸು ಇವಂಗೇ ಸಲ್ಲತಕ್ಕದ್ದಾಗಿದೆ. ಸರಳರೂ ಸುಸ್ವಭಾವದವರೂ ಆದ ಇವರು ಹಲವ್ಯಾರದ ನೀಟೊಂಗಿನ ಅನಂತರ ಸನ್ನಿಧಿಯ ಆಜ್ಞೆಯನ್ನು ಪರಿಪಾಲಿಸಿ ಕೇದಾರಪೀಠದ ಸೇವೆಯಸ್ಸು ಮಾಡಿದ್ದೂ ಮಾಡುತ್ತ ಲಿರುವುದೂ ಭೂಷಣಾಸ್ಪದವಾಗಿದೆ.

ಅತಿ ಪುರಾತನ ಪವಿತ್ರಪರಂಪರೆಯಿಂದ ಬಂದ ಶ್ರೀ ಪಂ.ಪೀಠಗಳ ಬಗ್ಗೆ ಕುಟಿಲಕಾರ್ಯಾನಗಳಿಂದ ಗುಪ್ತ ಚಟುವಟಿಕೆಗಳನ್ನು ನಡೆಯಿಸಿ, ಸಮುಪದೇಶವನ್ನು ತಿರಸ್ಕರಿಸಿ, ಕುಮಾರ್ಗದಲ್ಲಿ ಬದ್ಧಪ್ರತಿಜ್ಞರೂ, ಸಮಾಜ ವಿಧ್ವಂಸಕಮನೋವೃತ್ತಿಯನ್ನು ತಾಳಿದವರೂ ಧರ್ಮ-ಗುರು-ಪೀಠ-ಸಮಾಜದ್ರೋಹಿಗಳೂ ಆದ ಸುಂದರಲಿಂಗ ಮತ್ತು ಜಯಲಿಂಗರು ತಮ್ಮ ಘೋರ ಕುಕರ್ಮದ ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾಯಿತು ಇಂತಹ ಸಮಾಜಘಾತಕ, ಕಪಟಮನೋವೃತ್ತಿ-ವ್ಯಕ್ತಿಗಳು ಸರ್ವತ್ರ ಹರಡಿವೆ. ಆದ್ದರಿಂದ "ತಸ್ಮಾಜ್ಜಾಗ್ರತ! ಜಾಗ್ರತ!!" ಎನ್ನುವಂತೆ ಇಂತಹ ಮಾಯಾವಿಗಳಿಂದ ಪ್ರತಿಯೊಂದು ಸಮಾಜವೇ ಅಲ್ಲದೆ ಪ್ರತಿಯೊಬ್ಬರೂ ಸಾವಧಾನರಾಗಿರಬೇಕೆಂಬುದನ್ನು ಬೇರೆ ಅಪ್ಪಣೆಕೊಡಿಸ ಬೇಕಾಗಿಲ್ಲ.

ಸಾಮಾಜಿಕಜ್ಞಾನ-ವಿಜ್ಞಾನ-ಧರ್ಮ-ಸಂಸ್ಕೃತಿಗಳಿಗೆ ಮುಖ್ಯ ಕೇಂದ್ರಗಳೂ, ಧಾರ್ಮಿಕತಪೋಭೂಮಿಗಳೂ ಆದ ಪವಿತ್ರ ಧರ್ಮಪೀಠಗಳ ಬಗ್ಗೆ ಸದ್ಭಾವನೆಯನ್ನು ವ್ಯಕ್ತಪಡಿಸುವಷ್ಟು ಅಸಮರ್ಥನಾಗಿದ್ದಪಕ್ಷದಲ್ಲಿ ಅಸೂಯೆಯನ್ನಾ ದರೂ ಪ್ರಕಟಿಸದಿರುವುದು ಪ್ರತಿಯೊಬ್ಬನಿಗೂ ಭೂಷಣಾಸ್ಪದವಾಗಿದೆ.

ಕೇದಾರಪೀಠದ ಜಗದ್ಗುರು ಪಟ್ಟಾಭಿಷೇಕಮಹೋತ್ಸವವು ಈವರೆಗೂ ಕಾಶೀಪೀಠದಲ್ಲೇ ನಡೆಯುತ್ತ ಬಂದಿದೆ. ಈ ಕಾಲಕ್ಕೆ ಶ್ರೀಕೇದಾರಪೀಠದಲ್ಲೇ ನೆರವೇರ ಬೇಕೆನ್ನುವುದು ಬಹುಸಂಖ್ಯಾಕರ ಅಭಿಪ್ರಾಯವಾಗಿದೆ ಇನ್ನೂ ಕೆಲವರು ಅಲ್ಲಿ ಜನತೆಯು ಹೆಚ್ಚಾಗಿ ಕೂಡದಿರುವುದರಿಂದ ಕೇದಾರಪೀಠದಲ್ಲಿ ವಿಧ್ಯುಕ್ತರೀತಿಯಾಗಿ ಜರುಗಿದ ಮೇಲೆ ಕಾಶೀಪೀಠದಲ್ಲಿ ವಿಶೇಷನೈಭವದೊಂದಿಗೆ ನಾನಾದೇಶದಿಗ್ಭಾಗಗಳಿಂದ ಬರುತ್ತಿರುವ ಪ್ರತಿಷ್ಠಿತ ಜನ ಸ್ತೋಮದ ಮಧ್ಯದಲ್ಲಿ ಲೋಕಪರಿಚಿತವಾಗುವಂತೆ (ಮಹಾಧಿವೇಶದಂತೆ) ನೆರವೇರಿಸಬೇಕೆನ್ನುತ್ತಾ ಈ ಸಾರೆಯಂತೂ ಅತ್ಯಾವಶ್ಯಕವೆಂದು ಔಚಿತ್ಯವನ್ನು ತೋರಿಸುತ್ತಿವ್ವಾರೆ. ಇದರ ಬಗ್ಗೆ ಉಳಿದ ಪೀಠಾಚಾರ್ಯರೊಂದಿಗೆ ಮತ್ತು ವೀರಶೈವಸಮಾಜದ ಪ್ರಮುಖಮುಖಂಡರೊಂದಿಗೆ ವಿಚಾರವಿನಿಮಯಗಳಾದ ಮೇಲೆ ಸರ್ವರಿಗೆ ವಿದಿತವಾಗುವಂತೆ ಅಪ್ಪಣೆಕೊಡಿಸಲಾಗುವುದು.

ಶ್ರೀ ಕೇದಾರಪೀಠಕ್ಕೆ ಯೋಗ್ಯರಾದ ರಾವಲ್ಲರ ನಿಯುಕ್ತಿಯಾದ ಕೂಡಲೇ ಆ ಗುರುಸ್ವಾಮಿಗಳನ್ನು ಸಾಕ್ಷಾತ್ ಶುಲಶೇವನಾದ ಶ್ರೀಕೇದಾರನಾಥನ ಆಸ ರಾಪತಾರಿಗಳೊಂದೂ, ಭಕ್ತರಾದ ನಮ್ಮೆಲ್ಲರ ಉದ್ಧಾರ ಕ್ಕಾಗಿ ಮಾತನಾಡುತ್ತ ಪ್ರಕಟನಾಗಿರುವ ಪ್ರತ್ಯಕ್ಷ ಕೇದಾರನಾಥನೆಂದೂ ಕಂಡು ಕೊಂಡಾಡುತ್ತ ಟೆಕರಿ ಮಹಾರಾಜರು ತಮ್ಮ ರಾಜಧಾನಿಗೆ ಮಹಾವೈಭವ ದೊಂದಿಗೆ ದಯಮಾಡಿಸಿಕೊಂಡು ಅರಮನೆಯಲ್ಲಿ ಶಾಸ್ತ್ರೋಕ್ತವಾಗಿ ಮಹಾಪಾದಪೂಜೋತ್ಸವವನ್ನು ನೆರವೇರಿಸಿ, ಭಕ್ತಭಾವಭರಿತರಾಗಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ, ಪಟ್ಟಪೀತಾಂಬರಾದಿ ವಿವಿಧ ಪಿಲ್ಲಿತ್ತುಗಳೊಂ ದಿಗೆ ಗುರುಕಾಣಿಕೆಯನ್ನು ಸಮರ್ಪಿಸುವ ಪದ್ಧತಿಯು ಅತಿ ಪ್ರಾಚೀನಕಾಲದಿಂದ ನಡೆದುಬಂದುದಾಗಿದೆ. ಈ ಮಹಾಕಾರ್ಯಕ್ಕೆ ಈ ಪ್ರಾಂತದಲ್ಲಿ "ತಿಲಕೋತ್ಸವ" ಎಂದು ಕರೆಯುವುದು ರೂಢಿಕೆಯಾಗಿದೆ

ಶ್ರೀ ಟಿಹರೀಮಹಾರಾಜರು ಬರುವ ಶಾ. ಶ. ೧೮೭೭ ನಾಫೆ ಶು॥ ಪಂಚಮಿಯ ಶುಭದಿನ(ತಾ॥೩೧-೧೦-೫೫) ದಲ್ಲಿ ಕೇದಾರನಾಥ ರಾವಲ್ ಪಂ॥ ಶ್ರೀ ವಿಶ್ವನಾಥ ಲಿಂಗ ತಿವಾಚಾರ್ಯರಿಗೆ ಆ ಭವ್ಯವಾದ "ತಿಲಕ ಮಹೋತ್ಸವ"ವನ್ನು ನೆರವೇರಿಸಲು ನಿಶ್ಚಯಿಸಿರುವ ರೆಂಬ ಸಂತೋಷಸಮಾಚಾರವು ಘನ್ಮೆಲ್ಲರಿಗೆ ಆನಂದ ವನ್ನುಂಟುಮಾಡುವಂತಹದಾಗಿದೆ. ತಿಲಕೋತ್ಸವವು ನೆರವೇರುತ್ತಲೇ ತಿವಾಗಮಪದ್ಧತಿಗನುಸಾರವಾಗಿ ಜಗದ್ಗುರು ಪಟ್ಟಾಭಿಷೇಕಮಹೋತ್ಸವವು ನೆರವೇರಬೇಕಾದುದು ಸಮುಜಸವಾಗಿದೆ. ಈ ಮಹಾಕಾರ್ಯದಲ್ಲಿ ಶ್ರೀಮದ್ರಂಭಾಪುರೀ ಉಜ್ಜಯಿನೀ-ಶ್ರೀಶೈಲಪೀಠಗಳ ಮಹಾಚಾರ್ಯಭಗವತ್ಪಾದರೂ, ನಮ್ಮ ಸಮಾಜ ಪ್ರಮುಖರೂ ಮುಂದಾಗಬೇಕಾಗಿದೆ ಈ ಮಹಾ ಕಾರ್ಯಕ್ಕೆ ಕಾಶೀಪೀಠವೇ ಮುಂದುವರಿಯಬೇಕೆಂಬ ನಿಮ್ಮೆಲ್ಲರ ಪ್ರಾರ್ಥನೆಯು ಸಹಜವಾಗಿದೆಯಾದರೂ ಈ ಅವಶ್ಯಾಲದಲ್ಲಿ ಅದು ಅಸಾಧ್ಯವಾದ ವಿಷಯವಾಗಿದೆ ಏಕೆಂದರೆ ಜಮೀನುದಾರಿ ಉನ್ಮೂಲನಾದಿ ಅನೇಕ ಘೋರ ಟೋಸಗಳಿಂದ ಶ್ರೀಮಹಾಪೀಠದ ಬಹುಭಾಗದ ಆದಾಯದ ಮೇಲೆ ಆಘಾತವುಂಟಾಗಿ ಸಂಕಟಸಾಗರದಲ್ಲಿ ಸಿಲುಕಿರುವುದರಿಂದ ಈ ಪೀಠವು ಮುಂದುವರೆಯುವುದು ಬಹು ಕಠಿಣವಾದ ಸಮಸ್ಯೆಯಾಗಿದೆ.

ಈ ಸ್ವತಂತ್ರಸುಪ್ರಭಾತವಲ್ಲಿ ಇಂದು ವೀರಶೈವ ಪಂಚಮಹಾಪೀಠಗಳಲ್ಲೊಂದಾದ ಶ್ರೀಕೇದಾರಮಹಾ ಪೀಠದ ವಿಜಯದುಂದುಭಿಯನ್ನು ಕೇಳಿ ಸಮಸ್ತ ವೀರ ಶೈವಸಮಾಜವು ಆನಂದವನ್ನು ಅನುಭವಿಸುತ್ತಿರುವುದು ಸೌಭಾಗ್ಯಸೂಚಕವಾಗಿದೆ.

ಶ್ರೀಕೇದಾರಪೀಠ ವಿಜಯದಂತಹ ಮಹಾಯಜ್ಞ ದಲ್ಲಿ ತನುಮನಧನಗಳಿಂದ ಶ್ರದ್ಧಾವಹಿಸಿ ಸೇನೆಪಲ್ಲಿಸಿದ ಕರ್ನಾಟಕಾಂಧ್ರಮಹಾರಾಷ್ಟಾದಿ ಪ್ರಾಂತದ ಶ್ರೀ ಚರಪಟ್ಟಾಧಿಕಾರಿಗಳಿಗೂ, ಸ್ವಮತ ಪರಮತೀಯರಾದ ಸಮಸ್ತ ಸದ್ಭಕ್ತಶಿಖಾಮಣಿಗಳಿಗೂ ಶ್ರೀ ಕೇದಾರನಾಥ ವಿಶ್ವನಾಥರು ಸದಾ ಸನ್ಮಂಗಲೈಶ್ವರ್ಯಗಳನ್ನುಂಟು ಮಾಡಲೆಂದು ಹಾರೈಸುತ್ತೇವೆ. ಅಲ್ಲದೆ ಇನ್ನೂ ಕೆಲ ವರು ಗುಪ್ತವಾಗಿಯೇ ಕೇದಾರಪೀಠದ ವಿಜಯಕ್ಕಾಗಿ ಸೇನೆಪಲ್ಲಿಸಿದ್ದೂ ಉಂಟು ಹೀಗೆ ಕೇದಾರಪೀಠದ ವಿಜಯ ಕೇವಲ ಒಬ್ಬಿಬ್ಬ ವ್ಯಕ್ತಿಗಳಿಂದಾಗಿರದೆ ಎಲ್ಲಾರ ಸಾಮೂಹಿಕ ಚಟುವಟಿಕೆಯ ಫಲ ಮಾತ್ರವಾಗಿದೆ. ಈ ಸಂದರ್ಭದಲ್ಲಿ ಕಾಶೀ ವೀರಶೈವ ವಿದ್ವತ್ಸಂಘವು ಕೇದಾರಪೀಠಕ್ಕಾಗಿ ಸೇನೆ ಮಾಡಿದವರಿಗೆ "ಸಂತೋಷ ಕೂಟ"ವನ್ನೇರ್ಪಡಿಸಿ ಧನ್ಯವಾದಗಳನ್ನ ರ್ಪಿಸುತ್ತಿರು ವುದು ಔಚಿತ್ಯವನ್ನೂ, ಸ್ವಕರ್ತವ್ಯದಕ್ಷತೆಯನ್ನೂ ವ್ಯಕ್ತ ಮಾಡುವಂತಹದಾಗಿದೆ. ಇತ್ಯಾದ್ಯನಂತ ವಿಷಯಗಳನ್ನು ಗಂಭೀರವಾಗಿ ಅಪ್ಪಣೆಕೊಡಿಸುತ್ತ ಕಡೆಗೆ ಎಲ್ಲ ಭಕ್ತ ಮಂಡಳಿಗೂ ಆಶೀರ್ವದಿಸುತ್ತಲೇ ಶಾಂತಿವಾಕನಾಗಿ ಆಚಾರ್ಯ ಜಯಘೋಷಗಳೊಂದಿಗೆ ಸಭಾ ಕಾರ್ಯ ಕ್ರಮ ವಿಸರ್ಜಿಸಲ್ಪಟ್ಟಿತು.

ವಿಸಂಚೀ ಪತ್ರಿಕೆಯ ದ್ವಿತೀಯ ಲಹರಿಯ ಪ್ರಕ ಟನೆಯು ಸಹ ಇದೇ ಸಂದರ್ಭದಲ್ಲಿ ನೆರವೇರಿತು.

ಕಾರ್ಯದರ್ಶಿ
ಕಾಶೀ ವೀರಶೈವ ವಿದ್ವತ್ಸಂಘ.

ವರ್ತಮಾನಸಂಗ್ರಹ

ಕೈರೋದಲ್ಲಿ ಬ್ರಿಟನ್ ವಿರುದ್ಧ ೫ ಲಕ್ಷ ಜನರ ಪ್ರದರ್ಶನ

ಬ್ರಿಟಿಷ್ ಆಕ್ರಮಣದ ವಿರುದ್ಧ ಕೈರೋದಲ್ಲಿ ಐದು ಲಕ್ಷ ಜನರು ಪ್ರದರ್ಶನ ನಡೆಸಿದರು. ಪ್ರದರ್ಶನಕ್ಕೆ ಈಜಿಪ್ಟ್ ಪ್ರಧಾನ ಸಚಿವರಾದ ನಸ್ಸಾರ್‌ಸಾಷಾರವರು ನಾಯಕತ್ವ ವಹಿಸಿದ್ದರು. ಈ ಪ್ರದರ್ಶನವನ್ನು ಹೋರಾಟ ದಿನಾಚರಣೆಯ ಅಂಗವಾಗಿ ಏರ್ಪಡಿಸ ಲಾಗಿತ್ತು.

ಪ್ರದರ್ಶನದಲ್ಲಿ ಈಜಿಪ್ಟಿನ ಎಲ್ಲಾ ವರ್ಗಗಳ ಪ್ರಜೆ ಗಳೂ ಭಾಗವಹಿಸಿದ್ದರು. ಇವರಲ್ಲದೆ ಪಾಕಿಸ್ತಾನಿಗಳು, ಇಂಡೋನೇಷ್ಯನ್ನರು, ಇರಾಕಿಗಳೂ, ಸಿರಿಯನ್ನರೂ, ಗ್ರೀಕರೂ, ಸೂಡಾನಿಗಳೂ, ಟ್ಯೂನೀಷಿಯನ್ನರೂ ಮತ್ತು ವೊರಾಕೋರವರೂ ಅಲ್ಪಸಂಖ್ಯೆಯಲ್ಲಿ ಭಾಗ ವಹಿಸಿದ್ದರು. ಅರಬ್ ರಾಷ್ಟ್ರಗಳ ರಾಜತಾಂತ್ರಿಕ ಪ್ರತಿನಿಧಿಗಳೆಲ್ಲರೂ ವಿಜಯ ಬಯಸಿ ಈಜಿಪ್ಟಿಗೆ ಸಂದೇಶ ಗಳನ್ನು ಕಳುಹಿಸಿದ್ದರು. ಪ್ರದರ್ಶನದ ವೇದಿಕೆಗೆ ೩ ಮೈಲಿ ಉದ್ದವಿತ್ತು. ಸುಮಾರು ೩೦೦೦೦ ಘೋಷ್ಟರು ಗಳಿದ್ದರು. "ಮೂರ್ಖ ಬ್ರಿಟಿಷರೇ ಹೊರಟುಹೋಗಿ" ಮೊದಲಾದ ಬ್ರಿಟಿಷ್ ವಿರುದ್ಧ ಘೋಷಣೆಗಳನ್ನು ಅತ್ತಿಗಳಮೇಲೆ ಬರೆಯಲಾಗಿತ್ತು.

ಬ್ರಿಟನ್ನಿನೊಡನೆ ರಾಜಿಯಾಗುವುದಿಲ್ಲ

ಈಜಿಪ್ಟ್ ಪ್ರಧಾನಿಯ ನಿವರಣೆ

ಈಜಿಪ್ಟಿನಿಂದ ಬ್ರಿಟಿಷರನ್ನು ಕಳುಹಿಸುವ ವಿಷಯ ದಲ್ಲಿ ಈಜಿಪ್ಟ್ ಸರ್ಕಾರ ರಾಜೀ ನೀತಿಯನ್ನು ಸುಸರಿಸುವು ದಿಲ್ಲ ಎಂಬುದಾಗಿ ಈಜಿಪ್ಟ್ ಪ್ರಧಾನ ಸಚಿವರಾದ ನಸ್ಸಾರ್ ಪಾಷಾರವರು ಭಾರಿ ಬಹುಸಂಗಸಭೆಯಲ್ಲಿ ವಿವರಿಸಿದರು. ಮಧ್ಯಪ್ರಾಚ್ಯ ರಕ್ಷಣೆಯ ಬಗ್ಗೆ ಸಾಶ್ಚಾತ್ಯ ರಾಷ್ಟ್ರಗಳ ಸಲಹೆಗಳನ್ನು ಟೀಕಿಸುತ್ತಾ, ಅವು ವಸಾಹತು ನೀತಿಯ ಪ್ರತಿಬಿಂಬವೆಂದರು.

ಸೂಯೆಜ್ ಕ್ಷೇತ್ರಕ್ಕೆ ಹೆಚ್ಚಿನ ಬ್ರಿಟಿಷ್ ಸೇನೆ

"ಟಯಂಫ್" ಎಂಬ ಬ್ರಿಟಿಷ್ ಹಡಗು ೧೫೦೦ ಮಂದಿ ಬ್ರಿಟಿಷರನ್ನು ಹೊತ್ತು ಸೂಯೆಜ್ ಕಾಲುವೆ ಕ್ಷೇತ್ರಕ್ಕೆ ತೆರಳಿತೆಂದೂ ಅವರು ಬ್ರಿಟನ್ನಿನ ೩ ನೇ ಕಾಲಾಳು ಪಡೆಗೆ ಸೇರಿದವರೆಂದೂ ತಿಳಿದುಬಂದಿತೆ.

ಸೂಯೆಜ್ ಕಡಲ್ಗಾಲುವೆ ಪ್ರದೇಶದ ವಿಭಜನಾ ಯೋಜನೆ

ಸೂಯೆಜ್ ಕಡಲ್ಗಾಲುವೆ ಬಗ್ಗೆ ಈಜಿಪ್ಟ್-ಬ್ರಿಟನ್ ಗಳಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸುವ ಮಧ್ಯ ಸ್ಥಿಕೆಯೋಜನೆಯೊಂದನ್ನು ಇರಾಕ್ ಪ್ರಧಾನಿ ಮಿ॥ ಸೈಯದ್ ಪಾಷಾರವರು ಎರಡು ಸರ್ಕಾರಗಳಿಗೂ ಸೂಚಿಸಿದ್ದಾರೆಂದು ಲೆಬನಿಸ್ ವೃತ್ತಪತ್ರಿಕೆ ಅಲ್ ಹಯಾತ್ ವರದಿಮಾಡಿದೆ.

ಮಿ॥ ಪಾಷಾರವರ ಯೋಜನೆಯ ಪ್ರಕಾರ ಸೂಯೆಜ್ ಕಡಲ್ಗಾಲುವೆಯ ಪಶ್ಚಿಮ ತೀರಪ್ರದೇಶವನ್ನು ಈಜಿ ಪ್ಟಿಗೂ, ಪೂರ್ವತೀರ ಮತ್ತು ಅದಕ್ಕೆ ಸೇರಿದ ಹಾಗಿರುವ ಮರುಳುಗಾಡನ್ನು ಬ್ರಿಟನ್ನಿಗೂ ಹಂಚುವುದಾಗಿದೆ ಯೆಂದು ಪತ್ರಿಕೆ ತಿಳಿಸಿದೆ.

ಚಂಡಮಾರುತ ಮತ್ತು ಪ್ರವಾಹಗಳಿಂದ ಭಾರಿ ನಷ್ಟ

ಇಟಲಿಯ ಇತಿಹಾಸದಲ್ಲೇ ಹಿಂದೆಂದೂ ಇಲ್ಲದಂತಹ ಅತ್ಯಂತ ಭಾರಿ ಚಂಡಮಾರುತ ಪ್ರವಾಹಗಳು ಇತೀ ಇಟಲಿಯನ್ನೇ ಅಲ್ಲೋಲಕಲ್ಲೋಲಗೊಳಿಸಿ ಸುಮಾರು ೧೪೪ ಮಂದಿಯನ್ನು ಆಹುತಿ ತೆಗೆದುಕೊಂಡ ನೆಂದು ವರದಿಯಾಗಿದೆ.

ಕೈಗಾರಿಕಾ ಕ್ಷೇತ್ರವಾದ ಉತ್ತರ ಇಟಲಿಯ ಜಲ ಪ್ರಳಯದಲ್ಲಿ ಸಿಕ್ಕಿದೆ. ಪೋ ನದಿಯಲ್ಲಿ ಉಂಟಾದ ಭಾರಿ ಪ್ರವಾಹದಿಂದ ಭಾರಿ ಭಾರಿ ಕೈಗಾರಿಕಾ ನಗರಗಳು ನೀರಿ ನಲ್ಲಿ ಮುಳುಗಿಹೋಗಿವೆ: ಮಿಲಾನ್‌ನಿಗೆ ಆಗ್ನೇಯದಲ್ಲಿ ಒಂದು ಸಹಸ್ರ ಎಕರೆ ಪ್ರದೇಶ ನೀರಿನಲ್ಲಿ ಮುಳುಗಿ ಹೋಗಿದೆ. ಒಟ್ಟು ೩೭೫ ಮೈಲಿ ಆವರಣವು ನೀರಿನಲ್ಲಿ ಮುಳುಗಿಹೋಗಿದೆಯೆಂದು ವರದಿಯಾಗಿದೆ.

ಆರು ದಿನಗಳಿಂದ ಎಡಬಿಡದ ಮಳೆ

ಕಳೆದ ಆರು ದಿನಗಳಿಂದ ಮಳೆ ಮತ್ತು ಚಂಡ ಮಾರುತಗಳು ಎಡಬಿಡದೆ ಹಾವಳಿಯನ್ನುಂಟುಮಾಡು ತ್ತಿವೆ. ಒಂದೆಡೆ ಮನೆಯೊಂದು ಉರುಳಿ ೬ ಮಂದಿ ಮೃತಿಡರೆಂದು ವರದಿಯಾಗಿದೆ. ರೈಲು ಹಾವಿಗಳೆಲ್ಲಾ ಬಂದ್ ಆಗಿವೆಯೆಂದು ವರದಿಯಾಗಿದೆ.

ಪ್ರಪಂಚದಲ್ಲಿ ಅತಿ ದೊಡ್ಡನಗರ

೧೯೬೦ ರ ನೇಳೆಗೆ ಟೋಕಿಯೋನಗರ ಪ್ರಪಂಚದ ಅತಿ ದೊಡ್ಡ ನಗರವಾಗುವುದೆಂದು ಸರ್ಕಾರ ಭಾವಿಸು ತ್ತಿದೆ. ಆ ವೇಳೆಗೆ ನಗರದ ಜನಸಂಖ್ಯೆ ಒಂದುಕೋಟಿ ಯಾಗುವುದೆಂದು ಹೇಳಲಾಗಿದೆ. ೧೯೫೫ ರಲ್ಲಿದ್ದ ಜನ ಸಂಖ್ಯೆ ಈಗ ಎರಡರಷ್ಟಾಗಿದೆ. ಈಗಿನ ಅಳ್ಳೆಬರ್ ತಿಂಗಳ ಲೆಕ್ಕಗಳ ಪ್ರಕಾರ ಟೋಕಿಯೋ ಜನಸಂಖ್ಯೆ ೬೭, ೪೮, ೯೭೦.

ವಿವಾಹಮಹೋತ್ಸವ

ತಾ|| ೧೪ ೧೧.೧೯೫೧ ರಲ್ಲಿ ಮೈಸೂರು ಹಳ್ಳಿ ವ್ಯವಸಾಯ ಕೇಂದ್ರದ ಮಾಲೀಕರಾದ ಶ್ರೀ ಎಂ ಆರ್ ಸಿ ಬಸಪ್ಪನವರು ತಮ್ಮ ದ್ವಿತೀಯಪುತ್ರಿ ಚಿ|| ಸೌ|| ನಿರ್ಮಲಮ್ಮನವನ್ನು ತ್ಯಾಮಗೊಂಡ್ಲು ಶ್ರೀ ಟಿ ಕೆ ನಂಜುಂಡಪ್ಪನವರ ದ್ವಿತೀಯಪುತ್ರ ಚಿ|| ಟಿ ಎನ್ ಸಿದ್ಧಪ್ಪನಿಗೆ ಕೊಟ್ಟು ಮೈಸೂರಿನಲ್ಲಿರುವ ಶ್ರೀ ಕಿಮ್ಮಯ್ಯಾ ಚಾರ್ಯರ ಕಲ್ಯಾಣಮಂಟಪದಲ್ಲಿ ವಿವಾಹಮಹೋತ್ಸವ ವನ್ನು ವೈಭವದಿಂದ ನೆರವೇರಿಸಿದರು ಈ ಸಂದರ್ಭದಲ್ಲಿ ಸಾವಿರಾರು ಜನ ಗಣ್ಯಮಹನೀಯರುಗಳು ಆಗಮಿಸಿದ್ದು ನೂತನ ವಧೂವರರಿಗೆ ಮಂಗಲವನ್ನು ಕೋರಿದರು ಶ್ರೀಜಗದ್ಗುರು ಪಂಚಾಚಾರ್ಯರು ದಂಪತಿಗಳಿಗೆ ಆಯುರಾರೋಗ್ಯಾದಿಸಕಲಸಂಪತ್ಸಮೃದ್ಧಿಯ ಪ್ರೀಯಲೆಂದು ಆಶಿಸುತ್ತೇವೆ

ಮೈ|| ಸಂ|| ಶಾಸನಸಭೆಯಲ್ಲಿ ಕರ್ನಾಟಕಪ್ರಾಂತರಚನೆ ಬಗ್ಗೆ ಪ್ರಶ್ನೋತ್ತರಗಳು

ತಾ|| ೧೭ ರಲ್ಲಿ ಬೆಂಗಳೂರಿನಲ್ಲಿ ನಡೆದ ಮೈ|| ಸಂ|| ಶಾಸನಸಭೆಯಲ್ಲಿ ಕರ್ನಾಟಕಪ್ರಾಂತ್ಯರಚನೆಯ ವಿಷಯ ವನ್ನು ಕ ರಿತು ಶ್ರೀ ಕೆ ಸಂಪಂಗಿ ರಾಮಯ್ಯನವರೂ, ಜನಾಬ್ ಇಮಾಂರವರೂ ಪ್ರಶ್ನೆಗಳನ್ನು ಹಾಕಿ ಕರ್ನಾಟಕ ಪ್ರಾಂತವಾಗಬೇಕೆಂದು ಸಾರ್ವಜನಿಕ ಅಭಿಪ್ರಾಯ ಹೆಚ್ಚುತ್ತಿಲ್ಲನೆ, ಸಂಸ್ಥಾನದ ಗಡಿಗಳಿಂದಾಚೆ ಇರುವ ಜನಗಳು ಮೈಸೂರಿನ ಶ್ರೀಮನ್ ಮಹಾರಾಜರವರ ಕರ್ನಾಟಕ ಸ್ವಾಂತ್ಯದ ಮುಖ್ಯಸ್ಥರಾಗಿ ಆಗಮ ಅಪ್ಪಣೆ ಹೊಂದಿರುವುದು ಸರ್ಕಾರಕ್ಕೆ ಗೊತ್ತಿಲ್ಲವೇ ಇತ್ಯಾದಿ ಯಾಗಿ ಕೇಳಲು ವಿಷಯ ರಂಜಕೀಯ ಪ್ರಶ್ನೆ ಯಾಸಿಯನ್ ಸರ್ಕಾರದ ಅಧಿಕಾರವ್ಯಾಪ್ತಿಗೆ ಸೇರಿದ್ದು ಎಂದು ಮುಖ್ಯಮಂತ್ರಿಗಳು ಜವಾಬು ಕೊಟ್ಟು ಮುಂದುವರಿದು ಹೋಬಾಯಿ ವತ್ತಿ ವ ದರಾಸು ಸಂಸ್ಥಾನಗಳ ಕೆಲವು ಭಾಗಗಳು ಮೈಸೂರಿನಲ್ಲಿ ಮಿಲನವಾಗಿ ಕರ್ನಾಟಕ ಪ್ರಾಂತ್ಯವಾಗಬೇಕೆಂಬ ವಿಷಯದಲ್ಲಿ ಶ್ರೀ ರೆಡ್ಡಿಯ ವರು ಈಚೆಗೆ ಶ್ರೀಮನ್ಮಹಾರಾಜರವರು ಉತ್ತರಕರ್ನಾಟಕದಲ್ಲಿ ಪ್ರವಾಸವನಾಡಿದಾಗ ಪ್ರಭುಗಳು ಜನರಿಗೆ ಕೆರ್ಪಿಸಲಾದ ನಾನಾ ಬಿನ್ನವತ್ತಳೆಗಳಿಗೆ ಪ್ರತ್ಯುತ್ತರವಾಗಿ ಮಾಡಿದ ಭಾಷಣ ಗಳನ್ನು ಸದರ್ಹ ಅವಗಾಹನೆಗೆ ತಂದರು

ಸಕಾಲದಲ್ಲಿ ಸರ್ಕಾರ ಪರಿಶೀಲಿಸುವುದು

ಶ್ರೀ ರೆಡ್ಡಿಯವರ ಮೇಲ್ಕಂಡ ಜವಾಬಿನ ಮೇಲೆ ಶ್ರೀ ಸಂಪಂಗಿರಾಮಯ್ಯನವರು ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯ ಹೆಚ್ಚುತ್ತಿರುವುದರಿ ದ ಮೈಸೂರು ಸರ್ಕಾರ ವಿಷಯವನ್ನು ಪರಾಲೋಚಿಸಿ ಒಂದು ಅಭಿಪ್ರಾಯಕ್ಕೆ ಒರುವುದು ಸೂಕ್ತವೆಂದು ಸೂಚಿಸುವ ಉದ್ದೇಶದಿಂದ ಕೆಲವು ಉಪ ಪ್ರಶ್ನೆಗಳನ್ನು ಹಾಕಲು ಸರ್ಕಾರ ವಿಷಯವನ್ನಿನ್ನೂ ಪರಿಶೀಲಿಸಿಲ್ಲ ಸರಿಯಾದ ಕಾಲ ಸನ್ನಿಹಿತವಾದಾಗ ಪರಿಶೀಲಿಸುವದು ಸಧ್ಯಕ್ಕೆ ಆದಕ್ಕೆ ಕೈಹಾಕುವ ಎಂಬಿಲ್ಲ ಮೊದಲು ಕೇಂದ್ರ ಸರ್ಕಾರ ವಿಷಯವನ್ನ ತೆಗೆದುಕೊಳ್ಳಬೇಕ ಭಾಷಾವಾರು ಪ್ರಾಂತದ ರಚನಾ ಪ್ರಶ್ನೆಯನ್ನು ರಾಜ್ಯಾಂಗದ ೩ನೆಯ ವಿಧಿಯ ಪ್ರಕಾರ ಆಯಾಯ ಶಾಸನಸಭೆಗಳು ಚರ್ಚಿಸಬಹುದು ನಮ್ಮ ಶಾಸನ ಸಭೆಯಲ್ಲು ಹಿಂದೆ ಅನೇಕಾವರ್ತಿ ವಿಷಯ ಚರ್ಚಿಸಲ್ಪಟ್ಟಿದೆ ಸರ್ಕಾರ ಈ ವಿಷಯದಲ್ಲಿರುವ ವಿಧವಿಧವಾದ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿದ ಎಂಬುದಾಗಿ ಮುಖ್ಯಮಂತ್ರಿಗಳಿಂದ ಜವಾಬುಬಂತು

ಉಪಪ್ರಶ್ನೆ (ಗಾಜಿವೀರಪ್ಪ) ಕರ್ನಾಟಕ ಪ್ರಾಂತ ರಚನೆಗೆ ಆಕ್ಷೇಪಣೆಯಿಲ್ಲವೆಂದು ಮೈಸೂರು ಸರ್ಕಾರ ಹಿಂದೆ ಒಂದಾವರ್ತಿ ತೀರ್ಮಾನಕ್ಕೆ ಒಂದಿದ್ದುದು ನಿಜವೇ ?

ಉ (ಮುಖ್ಯಮಂತ್ರಿಗಳು) ನನಗೆ ತಿಳಿದಮಟ್ಟಿಗೆ ಹಾಗೆ ನಿರ್ಧಾರಕ್ಕೆ ಬರಲಿಲ್ಲ

ಪ್ರ (ಶ್ರೀ ಭೀಮಪ್ಪನಾಯಕ್)ಭಾಷಾವಾರು ಪ್ರಾಂತ ರಚನೆಗಿಂತ ಆಡಳಿತದ ಆಡುಕಲದ ದೃಷ್ಟಿಯಿಂದ ಒಗಗಳನ್ನು (ಯೂನಿಟ್ ಗಳು) ಮಾಡುವುದೊಳ್ಳೆಯ ದೆಂದು ಶ್ರೀ ಸಿ ರಾಜಗೋಪಾಲಾಚಾರಿಯವರು ಖಾರ್ಲಿ ಮೆಂಟನಲ್ಲಿ ಹೇಳಲ್ಲವೆ ?

ಉ ಆಗ್ಗೆ ಅವರೇನು ಪದಗಳನ್ನು ಪಯೋಗಿಸಿದರೋ ನನಗೆ ಜ್ಞಾಪಕವಿಲ್ಲ ಆದರೆ ಆ ರೀತಿ ಅರ್ಥಬರುವಂತೆ ಅವರು ಅಭಿಪ್ರಾಯ ಸೂಚಿಸಿದ ಜ್ಞಾಪಕವಿದೆ

ಪ್ರ (ಜ ಇಮಾಂ) ಕರ್ನಾಟಕಪ್ರಾಂತ್ಯವಾಗಬೇಕು ಎಂದು ಸಾರ್ವಜನಿಕ ಅಭಿಪ್ರಾಯ ಹೆಚ್ಚುತ್ತಿರುವಾಗ ಮೈಸೂರು ಸರ್ಕಾರ ವಿಷಯದಲ್ಲಿ ಒಂದು ತೀರ್ಮಾನಕ್ಕೆ ಒರುವುದು ಕರ್ತವ್ಯವಲ್ಲವೆ ?

ಉ ಸಕಾಲ ಬಂದಾಗ ತೀರ್ಮಾನವನ್ನು ತೆಗೆದು ಕೊಳ್ಳುತ್ತೇವೆ

ಶ್ರೀ ವಿ ಗೋವಿಂದರೆಡ್ಡಿ—ಒಂದು ಸರ್ಕಾರ ಈ ವಿಷಯದಲ್ಲಿ ಅಭಿಪ್ರಾಯ ಕೊಡಬಹುದೆ ?

ಉ ಶಾಸನಸಭೆ ಕೊಡಬಹುದೆಂದು ರಾಜ್ಯಾಂಗದಲ್ಲಿ ೩ನೇ ಕಾಲಮಿನಲ್ಲಿ ಹೇಳಿದೆ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟ (೬ನೆಯ ಆವೃತ್ತಿ)	೧ ಆಣೆ	ವೀರಶೈವಮಹಾತ್ಮರು	೮ ಆಣೆ
ಸಜ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ಬಸವತ್ಯಾಂತವಿವಾಕರ (೨ನೆಯ ಆವೃತ್ತಿ)	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ	ಆಗಮಪರಿಜ್ಞಾನ	೮ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಶ್ರೀಶಿವಂಜಾಚಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ವಿಶ್ವಕರ್ಣಾಜಯ ನಕ್ಷತ್ರಮಾಲಿಕಾ	೮ ಆಣೆ
ಋಸವಾದಿನಾಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ	ಕನ್ನಡ ನ್ಯಾಯಚಿತಕಮ್	೮ ಆಣೆ
ಶ್ರೀರೇಣುಕಾಚಾರ್ಯರತಕ (೨ನೆಯ ಆವೃತ್ತಿ)	೨ ಆಣೆ	ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀರುದ್ರಮುಖವಿವಾಜಾಯ ರ್ಶತಕ ..	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯ ಸ್ತುತ್ಯಕ್ಷರತ್ನಾಕರ	೧೨ ಆಣೆ
ಶಿವಕಥ್ಯವಿಲಾಸ ...	೨ ಆಣೆ	ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ವಿಜಯನಗರ ಸಾಮ್ರಾಜ್ಯವು ಶ್ರೀರೇಣುಕಾಚಾರ್ಯರೂ ...	೨ ಆಣೆ	ಶ್ರೀಜಗದ್ಗುರು ಪಂಜಾಚಾರ್ಯರ ಪ್ರಾಚೀನತ್ವ	೧ ರೂ
ಬಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ	ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ಪಂಚಾಚಾರ್ಯಪ್ರಕಾಶ ...	೩ ಆಣೆ	ವಿನೇಕಮುಕ್ತಾವಳಿ	೧ ರೂ
ಪಂಚಾಚಾರ ಪ್ರಕಾಶಿಕಾ ...	೩ ಆಣೆ	ವಿಚಾರಸಾರಾವಳಿ	೧ ರೂ
ಶ್ರೀಗುರುತತ್ವಪದಗಳು (೩ನೆಯ ಆವೃತ್ತಿ)	೩ ಆಣೆ	ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೩ನೆಯ ಆವೃತ್ತಿ)	೧೫ ರೂ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) ...	೪ ಆಣೆ	ಶ್ರೀಕರಭಾಷ್ಯಂ (ಪಂಚಾಸ್ಪ್ರಿಂಗ್)	೩ ರೂ
ಲಿಂಗಧಾರಣವಿಧಿ	೪ ಆಣೆ	ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) ...	೩ ರೂ
ವಿವಾಹವಿಧಿ (೪ನೆಯ ಆವೃತ್ತಿ) ...	೪ ಆಣೆ	ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಪಿಸ್ಕುಟಿತಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ಶ್ರೀಪಟಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ	ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಪದ್ಯರೂಪ)	೩॥ ರೂ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ	ಸಿದ್ಧಾಂತಶಿಖಾಮಣಿ (ಕನ್ನಡ ವೀಕಾಸಹಿತ)	೩ ರೂ
ವೈದಿಕವಾಜ್ಯುಯರಣ್ಯ ...	೪ ಆಣೆ	ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ಕಥಾ ಪೋಟೋಗಳಿಂದಲಂಕೃತ)	೩ ರೂ
ಶ್ರೀಲಿಂಗದ್ಗುರು ಪಂಜಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೪ ಆಣೆ	ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೧೨ ರೂ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ) (೩ನೆಯ ಆವೃತ್ತಿ)	೬ ಆಣೆ	A brief life-sketch of Pandit Sri Kashinatha Shastriji (English)	4 As
ಸನ್ಯಾಸಾಶ್ರಮವಿಮರ್ಶತತ್ವಸ್ಫೋರೀಕರಣ (೩ನೆಯ ಆವೃತ್ತಿ)	೬ ಆಣೆ	The Philosophical Aspect of Virasaivism (English)	8 As
ವೀರಶೈವಾಂಶ್ಯೆಕ್ಯ-ಕ್ರಾಂತ್ಯವಿಧಿ ...	೬ ಆಣೆ	Speeches by Pandit Shri Kashinatha Shastriji (English)	12 As
ಸಿದ್ಧಾಂತ ಶಿಖಾಮಣಿ (ಸಂಸ್ಕೃತ ಚತುರ್ಥಭಾಗ)	೮ ಆಣೆ	ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಕ
ಶಿವಾದ್ವೈತಪರಿಭಾಷಾ (ಸಂಸ್ಕೃತ) ...	೮ ಆಣೆ	ವೀರಶೈವರತ್ನ (ಮರಾಠಿ) ..	೧ ರೂ.
		ಸಹಾನಾರಾಯಣೋಪನಿಷತ್ (ವೀರಶೈವಾಭ್ಯ-ಸಂಸ್ಕೃತ)	೧ ಕ
		ಸಂಧಿಕೌಮುದೀಕಾರಿಕಾ (ಸಂಸ್ಕೃತ)	೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Bhubanesh Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 (ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು) REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಹೀರಾಧಿಪರ್ । ಪಂಚಶ್ಲೋಕವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪ ವೀರೇಶನಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಠಾಧ್ಯಕ್ಷರಾದ ನೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು— ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೨೫ | ಸೋಮವಾರ ತಾ॥ ೨೬ ನೇ ನವೆಂಬರ್ ೧೯೩೧ | ಸಂಚಿಕೆ ೨೯

ಪತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡೆವ ಲೇಖನಗಳಿಗೆ ಪತ್ರಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಓಂಕಾರೇಶ್ವರ ಲಿಂಗಸ್ಥಾಪನೆ ಹೊಸಪೇಟೆ

ಮಹಶಯರೇ, ಬಳ್ಳಾರಿ ಜಿಲ್ಲಾ ಹೊಸಪೇಟೆ ಸ್ಥಾಮದ ಶ್ರೀ ಎಂ ಜಂಬಣ್ಣನವರು ಬಳ್ಳೇ ಗುರುಭಕ್ತಿ ಶಿವಾಂತಿಕರಿದ್ದು ೩೦ ಮಳಿ ಮೇದರ ಕೇತಯ್ಯನವರ ಒಂದು ಸಂಘ ಮಾಡಿ ೨೫ ಸಾವಿರ ರೂಪಾಯಿ ಒರ್ಚಿನಿಂದ ಮಂದಿರ ಕಟ್ಟಿಸಿ ಅದರಲ್ಲಿ ಓಂಕಾರೇಶ್ವರಮೂರ್ತಿ ಸ್ಥಾಪನಮಾಡುವದಕ್ಕಾಗಿ ಗದಗ ಶ್ರೀಜಗದ್ಗುರು ರೇಣುಕಾಚಾರ್ಯ ಮಂದಿರ ಸಂಸ್ಥಾಪಕರಾದ ಪಂಡಿತ ಶ್ರೀ ರೇವಣಸಿದ್ಧಶಿವಾಚಾರ್ಯ ಮಹಾಸ್ವಾಮಿಗಳು ಗುರುಸಂಸ್ಥಾನ ಬೃಹಹ್ಮಠ ಚಿಕ್ಕ ಮಣ್ಣೂರು ಪೂಜ್ಯ ಶಿವಯೋಗಿಗಳವರನ್ನು ಆಮಂತ್ರಣ ಮಾಡಿಕೊಂಡ ಪ್ರಕಾರ ತಾ॥ ೯ ೧೧ ೩೧ ಕ್ಕೆ ಗದಗಿನಿಂದ ಹೊಸಪೇಟೆಗೆ ದಯಮಾಡಿಸಿದರು ಪಾಕಶಾಲಾ ಧ್ಯಾಯಕರಾದ ಶ್ರೀ ವೇ॥ ಕಲ್ಯಾಣಶಾಸ್ತ್ರಿಗಳು, ಶ್ರೀ ವೇ॥ ಶರಣಪ್ಪಶಾಸ್ತ್ರಿಗಳು ಕೆಂಭಾವಿಮಠ ಕೊಟ್ಟೂರು, ಶ್ರೀ ವೇ॥ ಯಂ ಸಿದ್ಧಯ್ಯನವರು ಟೀಚರು, ವೇ॥ ಶಂಕರ ಶಾಸ್ತ್ರಿಗಳು ಕನ್ನಡ ಹೈಸ್ಕೂಲ ಪಂಡಿತರು. ಒಳ್ಳಾರಿ ತುಪ್ಪಗಲ್ಲ ಅಯ್ಯಪ್ಪನವರ ಪಾಕಶಾಲಾ ವಿದ್ಯಾರ್ಥಿಗಳು ಇವರೆಲ್ಲರನ್ನು ವೇದಾಧ್ಯಯನದಿಂದ ಶಾಸ್ತ್ರೋಕ್ತರೀತ್ಯಾ ವೈದಿಕ ಕರ್ಮಾದಿಗಳನ್ನು ಮಾಡಿಸುವದಕ್ಕೆ ಕರು ಕೊಂಡು ಶ್ರೀ ಚಿಕ್ಕಮಣ್ಣೂರು ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಾ॥ ೯ ೧೧ ೩೧ ರಂದು ಆರಂಭಿಸಿ ತಾ॥ ೧೧ ೧೧ ೩೧ ರ ವರೆಗೆ ಪೂಜಾವೈಭವಗಳು ನಡೆದು ಓಂಕಾರೇಶ್ವರಮೂರ್ತಿ ಸ್ಥಾಪಿಸಲ್ಪಟ್ಟಿತು ಹುಬ್ಬಳ್ಳಿಯಿಂದ ಕೇತಯ್ಯನವರ ಗುರುಗಳು ಆಗಮಿಸಿದ್ದರು ಹೋಮ, ಜಲಾಧಿವಾಸ, ಶುಂಭಪೂಜಾ, ವಿಶ್ವೇಶ್ವರಪೂಜಾ, ಮಂದಿರದ ಗೋಪುರಕ್ಕೆ ಪಂಚಕಲಶ ಸ್ಥಾಪನೆ ಬಹು ವಿಜೃಂಭಣೆಯಿಂದ ಕಾರ್ಯ ನಡಿಯಿತು ಬ್ಯಾಂಡೆ ಭಜಂತ್ರಿ ತಿಸ್ತಾಗಿ ಮೇದರ ಭಜನಾಸಂಘದವರು ಹುಬ್ಬಳ್ಳಿ, ಗದಗ, ಬಳ್ಳಾರಿ, ಸೊಂಡೂರು ಭಜ್ಞಾವತಿ ಮುಂಬಯಿ ಇನ್ನೂ ಅನೇಕ ಭಾಗಗಳಿಂದ ಮೇದರ ಕೇತಯ್ಯನವರ ಭಕ್ತರು ಬಹು ದೂರದಿಂದ ಈ ಕಾರ್ಯಕ್ಕೆ ಆಗಮಿಸಿದ್ದರು ೩-೪ ದಿವಸದ ವರೆಗೆ ಅನ್ನ ಸಂತರ್ಪಣೆ ನಡಿಯಿತು ೩ ದಿವಸಗಳ ವರೆಗೆ ಹಂಪೆನಾಳ, ರಾಮಸಾಗರದಿಂದ ಕೇರ್ತನಪಮಾಡಲಿಕ್ಕೆ ಗವಾಯಿಗಳು ಬಂದಿದ್ದರು ಕೇರ್ತನದಲ್ಲಿ ಸಂದರ್ಭ ಕ್ಕನುಸಾರವಾಗಿ ಶ್ರೀ ಚಿಕ್ಕಮಣ್ಣೂರು ಮಹಾಸ್ವಾಮಿಗಳವರು ಸಂಗೀತ ರಹಸ್ಯದೊಡನೆ ವ್ಯಾಖ್ಯಾನಮಾಡುತ್ತ ಜನಜಾಗ್ರತಿಮಾಡುತ್ತಿದ್ದರು ಪಾನಾಭಾಗಗಳಿಂದ ಮಾಜೇಶ್ವರರು ವೀರಶೈವ ಭಕ್ತರು ಸಾವಿರಾರು ಜನರು ಬಂದಿದ್ದರು ಶ್ರೀ ಎಂ ಜಂಬಣ್ಣನವರು ಶ್ರೀಮಾನ್ ಬಸನಗೌಡರು ಬಾದನಟ್ಟಿ, ಶ್ರೀಮಾನ್ ಮಲ್ಲೇಶ ಗೌಡರು ಬಾದನಟ್ಟಿ ರಾ॥ ಬೂದಪ್ಪನವರು, ರಾ॥ ದಾನಪ್ಪನವರು ಇವರೆಲ್ಲ ಬಂದ ಜನಗಳ ಸೇವೆಗೆ ನಡುಕಟ್ಟಿ ನಿಂತುಬಿಟ್ಟಿದ್ದರು ಹೊಸಪೇಟೆ ಮೇದರ ವೀಣೆ ಕೈಲಾಸದಂತೆ ಕಾಣಿಸುತ್ತ ಒಂದ ಭಕ್ತರು ಓಂಕಾರೇಶ್ವರನ ದರ್ಶನ ಮಾಡಿಕೊಂಡು ಸಲ ಕರ್ಪೂರಾರತಿ ಬೆಳಗುತ್ತ ಮಂಗಲ ಆಶೀರ್ವಾದ ಪಡೆಯುತ್ತಲಿದ್ದರು ಈ ಯಾವತ್ತೂ ವೈಭವವು ಒಂದು ಶಾಂತಿಯಿಂದ ನಡೆದು ಆಗಮಿಸಿದ ಪಂಡಿತರಿಗೆ ಸಾವಿರಾರು ರೂಪಾಯಿ ಸಂಭಾವನೆ ಕೊಡಲ್ಪಟ್ಟಿತು ಶ್ರೀ ಚಿಕ್ಕಮಣ್ಣೂರು ಮಹಾಸ್ವಾಮಿಗಳವರ ಅಪ್ಪಣೆ ಮೇರೆಗೆ ಲೋಕಮಾನ್ಯವಾದ ಮೈಸೂರಲ್ಲಿ ಹೊರಡುವ ಪಂಚಾಚಾರ್ಯಪ್ರಭಾ ಪತ್ರಿಕೆಗೆ ೫ ರೂ ಕಾಣಿಕೆ ಅರ್ಪಿಸಿದರು ಯಾವದಕ್ಕೂ ಕೊರತೆ ಬಾರದಂತೆ ಕಾರ್ಯವನ್ನು ಪೂರೈಸಿ ತಮ್ಮ ಜೀವಮಾನದಲ್ಲಿ ಸೂರ್ಯನಂತೆ ಬೆಳಗುವ ಗೋಪರದಿಂದ ಕೂಡಿದ ಮಂದಿರ ಕಟ್ಟಿಸಿ ಬಹು ವಿಜೃಂಭಣೆ ಮಾಡಿ ಧರ್ಮಕೀರ್ತಿಲತೆಯನ್ನು ಪಡೆದ ಮ್ಯಾದಾರ ಭಕ್ತಮಂಡಳಿಯವರಿಗೆ ಓಂಕಾರೇಶ್ವರನು ಸಂಪತ್ತು, ಕರೀರ ಆರೋಗ್ಯತೆ ಕೊಟ್ಟು ಇನ್ನೂ ಇವರಿಂದ ಸಮಾಜ ಕಾರ್ಯಗಳು, ಧರ್ಮಕಾರ್ಯಗಳು ನಡಿಯು ವಂತೆ ಬುದ್ಧಿಯನ್ನು ದಯಪಾಲಿಸಬೇಕೆಂದು ತಿಳಿಸುವ,

ಶ್ರೀಮಾನ್ ಮಲ್ಲೇಶಗೌಡರು ಬಾದನಟ್ಟಿ

ವರ್ಧಂತ್ಯೋತ್ಸವಸಮಾರಂಭ, ಹೋಟಿಗಿ

ಪರಮಪೂಜ್ಯ ಬಾಲಶಪ್ಪ ಶ್ರೀ ಚನ್ನವೀರಶಿವಾಚಾರ್ಯ ಮಹಾಸ್ವಾಮಿಗಳವರ ೩೮ ನೆಯ ವರ್ಧಂತ್ಯೋತ್ಸವನ್ನು ತಾ॥ ೫-೧೧-೩೧ ಸೋಮವಾರ ಅತಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಅಂದು ಮುಂಜಾನೆ ಗುರು ಗದ್ದಿಗೆಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆ ಹಾಗು ಶ್ರೀಗಳ ಪಲ್ಲಕ್ಕಿಕ್ಕುತ್ಸವನಾಯಿತು ಸಂಜೆ ೫ ಘಂಟೆಗೆ ಅಲ್ಲಿಯ ಗ್ರಾಮೋನ್ನತಿ ಸಂಘದವತಿಯಿಂದ ಸಭೆ ಕೂಡಿತು ವಿದ್ಯಾವಂತರೂ, ಅಧಿಕಾರಿಗಳೂ, ಆಚಾರ್ಯಪ್ರೇಮಿಗಳೂ ಆದ ಅನೇಕ ಮಹತ್ಪುರುಷರು ಆಗಮಿಸಿದ್ದರು ಅವರೆಲ್ಲರ ಭೂಷಣಗಳಾದಮೇಲೆ ಶ್ರೀಗಳವರು ತಮ್ಮ ಅಮೃತವಾಣಿಯಿಂದ ಜನಾಂಗಕ್ಕೆ ಧರ್ಮ ಬೋಧೆ ಇತ್ತರು ಅನಂತರ ಸಭೆಯಲ್ಲಿ ಆರ್ ಕೆ ಮುಲಿಂಗೆ ವಕೀಲರು ಮಂಡಿಸಿದ ವೀರಶೈವರ ಪಂಚಪೀಠಗಳಲ್ಲೊಂದಾದ ಕೇದಾರ ಪೀಠಕ್ಕೆ ಶ್ರೀ ವಿಶ್ವನಾಥಲಿಂಗ ಶಿವಾಚಾರ್ಯರನ್ನು ಜಗದ್ಗುರುಗಳನ್ನಾಗಿ ನೇಮಿಸಿದ ಬಗ್ಗೆ ಟ್ರಸ್ಟಿಯು ಹಾಗೂ ಬೆಹರೀ ಮಹಾರಾಜರ ಅಭಿನಂದನೆಯ ಕರಾವು ಸರ್ವಾನುಮತಿಯಿಂದ ಪಾಸು ಮಾಡಲ್ಪಟ್ಟಿತು ಅಧ್ಯಕ್ಷರ ಆಭಾರವನ್ನ ಹೇಯಿಂದಿಗೆ ಸಭೆಯು ಮುಕ್ತಾಯವಾಯಿತು

ಓರ್ವ ಉತ್ಸವಭಾಗಿ

ಚಿ॥ ಸೌ॥ ನಿರ್ಮಲ ಮತ್ತು ಚಿ॥ ಟಿ. ಎಸ್. ಸಿದ್ದಪ್ಪ ಇವರ ವಿವಾಹಮಹೋತ್ಸವ

ಇದೇ ನವೆಂಬರ್ ೧೪ ನೇ ತಾ॥ ಭಾನುವಾರ ರಾಜಧಾನಿಯ ಇರ್ವಿನ್ ರಸ್ತೆಯಲ್ಲಿರುವ ಶ್ರೀ ತಿಮ್ಮಯ್ಯ ಚಾರ್ಯರ ಭಕ್ತದಲ್ಲಿ ಶ್ರೀ ಎಂ ಆರ್ ಸಿ ಬಸಪ್ಪನವರ ದ್ವಿತೀಯ ಪುತ್ರಿ ಚಿ॥ ಸೌ॥ ನಿರ್ಮಲ ಮತ್ತು ತ್ಯಾಮು ಗೊಂಡ್ಲು ಶ್ರೀ ಟಿ ಕೆ ನಂಜುಂಡಸ್ವಪನವರ ಪುತ್ರ ಚಿ॥ ಶ್ರೀ ಟಿ ಎಸ್ ಸಿದ್ದಪ್ಪ ಇವರ ವಿವಾಹ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು ಈ ಸಂದರ್ಭದಲ್ಲಿ ವಧೂವರರ ಶ್ರೇಯೋಭಿವೃದ್ಧಿಯನ್ನು ಕೋರಿ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಶ್ರೀ ಜಗದ್ಗುರು ಪಂಚಾಚಾರ್ಯ ಪರಂಪರಾಗತ ಪೀಠಾಧಿಪತಿಗಳೂ, ಶ್ರೀ ಕೃಂಗೇರಿ ಜಗದ್ಗುರುಗಳೂ, ಶ್ರೀ ಕೂಡ್ಲಿ ಶೃಂಗೇರಿ ಜಗದ್ಗುರುಗಳೂ, ಶ್ರೀ ಚಿತ್ರದುರ್ಗ ನಿರಂಜನ ಜಗದ್ಗುರುಗಳೂ, ಶ್ರೀ ಸುತ್ತೂರು ಮಠಾಧೀಶ್ವರರೇ ಮೊದಲಾದ ಮಠಾಧಿಪತಿಗಳೂ ಆಶೀರ್ವಾದ ಪತ್ರಿಕೆಗಳನ್ನು ನಿರೂಪಿಸಿಲ್ಪಟ್ಟಿವೆ ಇತರ ಬಂಧು ಮಿತ್ರರಿಂದ ನೂರಾರು ಮಂಗಳಳೋರಿಕೆಯ ಪತ್ರಿಕೆಗಳು ಬಂದಿದ್ದವು ಮಹೋತ್ಸಾಹಕಾಲಕ್ಕೆ ಅನೇಕ ಮಠಾಧಿಪತಿಗಳು, ವೈದಿಕರು ಮತ್ತು ಸಹಸ್ರಾರು ಜನ ಇಷ್ಟಮಿತ್ರ ಬಂಧುಬಾಂಧವರು ಮತ್ತು ಆಪ್ತಾಸಿತರು ಆಗಮಿಸಿ ನೂತನ ದಂಪತಿಗಳಿಗೆ ಸಮಸ್ತ ಸಚ್ಮಂಗಲ ಗಳನ್ನು ಕೋರಿ ಆಶೀರ್ವದಿಸಿದರು ಆ ದಿನ ಸಾಯಂ ಕಾಲದಿ ಆರತ್ಯಕ್ಷತೆಯ ಅಂಗವಾಗಿ ಸಂಗೀತರತ್ನ ಆಸ್ಥಾನ ವಿದ್ವಾನ್ ಶ್ರೀ ಟಿ ಚೌಡಯ್ಯನವರ ಸಂಗೀತ ಕಛೇರಿಯನ್ನೆ ಏರ್ಪಡಿಸಲಾಗಿತ್ತು ಈ ಸಮಾರಂಭಕ್ಕೆ ಸಂಸ್ಥಾನದ ಸಚಿವರುಗಳಾದ ಶ್ರೀ ಹೆಚ್. ಸಿ ದಾಸಪ್ಪನವರು, ಶ್ರೀ ಕೆ ಟಿ ಭಾಷ್ಯಂ ಅಯ್ಯಂಗಾರ್ಯರು, ಶ್ರೀ ಹೆಚ್ ಸಿದ್ದಯ್ಯನವರು, ಶ್ರೀ ಟಿ ಮರಿಯಪ್ಪನವರು, ಹೈಕೋರ್ಟ್ ಜಡ್ಜರಾದ ಶ್ರೀ ಟಿ ಎಸ್ ಮಲ್ಲಪ್ಪನವರು, ಐ ಜಿ ಪಿ ಶ್ರೀ ಜಿ ಎಸ್. ನಾಗರಾಜರಾಯರೇ ಮೊದಲಾದ ಉನ್ನತ ಅಧಿಕಾರಿಗಳು, ಹುಜೂರ್ ಸೆಕ್ರೆಟರಿ ಶ್ರೀ ಹೆಚ್ ಎಸ್. ಪಾಳೇಗಾರ್‌ರವರು, ದರಬಾರ್‌ಬಕ್ಷಿ ಸರದಾರ್ ಶ್ರೀ ಹೆಚ್ ಎಲ್ ದೇವರಾಜೇಅರಸುನವರೇ ಮೊದಲಾದ ರಾಜಾನುನೆತವರೂ, ಸಾಮುಖರ್ ಶ್ರೀ ಎಸ್ ಚನ್ನಯ್ಯನವರೇ ಮೊದಲಾದ ಸಾವಿರಾರು ಜನ ಪುರ ಪ್ರಮುಖರೂ, ವರ್ತಕರೂ, ಪತ್ರಿಕಾಸಂಪಾದಕರೂ, ಪತ್ರಿಕಾಪ್ರತಿನಿಧಿಗಳು ಮತ್ತಿತರ ಮಹನೀಯರು ಆಗಮಿಸಿ ನೂತನ ದಂಪತಿಗಳ ಶ್ರೇಯೋಭಿವೃದ್ಧಿಯಷ್ಟು ಕೋರಿದರು ಶ್ರೀಮತಿ ಸಿದ್ಧಲಿಂಗಮ್ಮ ಮತ್ತು ಶ್ರೀ ಎಂ ಆರ್ ಸಿ ಬಸಪ್ಪನವರು ಎಲ್ಲರನ್ನೂ ಆತ್ಮಾದರ ದಿಂದ ಸ್ವಾಗತಿಸಿ ಸತ್ಕರಿಸಿದರು

ಓರ್ವ ಉತ್ಸವಭಾಗಿ

ಶಿವಶಕ್ತಿವಿಮರ್ಶ

ಲೇ—ಶ್ರೀ|| ಷ|| ಬ್ರ|| ಚರಮ್ಮಾಳ್ಳಿಕ್ಷೇತ್ರ ಶಿವಯೋಗಿಶಿವಾಚಾರ್ಯ ಸ್ವಾಮಿಗಳು ಶಿವಾದ್ವೈತಶಾಸ್ತ್ರಂ, ರೌಡಳುಂ ಹಿರೇಮಠ

ಪೂಜ್ಯವಾದಂಥಾ ಭಾರತೀಯ ಪ್ರಾಚೀನ ಮಹರ್ಷಿಗಳು ಲೋಕಕಲ್ಯಾಣಕ್ಕಾಗಿ ಆನೇಕಶಾಸ್ತ್ರಗಳನ್ನು ರಚಿಸಿರುತ್ತಾರೆ ಅವುಗಳಲ್ಲಿ ಕಣಾದ, ಗೌತಮ, ಜೈಮಿನಿ, ಕಪಿಲ, ವ್ಯಾಸ, ಪತಂಜಲಿ ಈ ಮಹರ್ಷಿಗಳಿಂದ ರಚಿತವಾದ ಶಾಸ್ತ್ರಗಳು ಕ್ರಮವಾಗಿ ವೈಶೇಷಿಕ, ನ್ಯಾಯ, ಪೂರ್ವಮೀಮಾಂಸ, ಸಾಂಖ್ಯ, ವೇದಾಂತ ಯೋಗ ಎಂಬದಾಗಿ ಪ್ರಸಿದ್ಧವಾಗಿರುತ್ತವೆ ಇವುಗಳಿಗೆ ಷಡ್ದರ್ಶನ ಗಳೆಂದು ಹೆಸರು ೬ ನೆಯದಾದ ವೈದರ್ಶನವು ಸರ್ವ ವೇದಾರ್ಥಮಯವಾಗಿರುವದರಿಂದ ಸಮಸ್ತಶಾಸ್ತ್ರಶಿರೋಮಣಿಯಾಗಿ ಸಿದ್ಧಾಂತಶಾಸ್ತ್ರನೆಂತಲೂ, ದೃಷಮಿಮಾಂಸಾ ಸಾದರ್ಶನವೆಂತಲೂ, ಶಾಸ್ತ್ರಜ್ಞರಿಂದ ಪೂಜಿಯಿಸಲ್ಪಟ್ಟಿದೆ ಈ ದರ್ಶನದಲ್ಲಿ ಜಗತ್ಕಾರಣವಾದ ಪರಾತ್ಪರಗಳಾದ ಶಿವ ಮತ್ತು ಶಕ್ತಿಯು ಮುಪ್ಪತ್ತಾರು ವಿಶ್ವಲಯನಾಗಿ ವಿಮರ್ಶ ಮಾಡಲ್ಪಟ್ಟಿರುವುದ ಈ ದರ್ಶನಾಸ್ತಾಪ್ತ ದ ಆಧಾರದ ಮೇಲೆ ಶ್ರೀಯುವನವಂದ್ಯರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಪವಿತ್ರ ವೀರಶೈವಮತವನ್ನು ಸ್ಥಾಪಿಸಿರುತ್ತಾರೆ ಶ್ರೀಮದಾಚಾರ್ಯರು ಶಕ್ತಿವಿಶಿಷ್ಟ ಶಿವನಿಗೂ, ಶಕ್ತಿವಿಶಿಷ್ಟ, ಜೀವನಿಗೂ ಸಾಮರಸ್ಯವನ್ನು ಸುಗಮವಾಗಿಯೂ, ಯುಕ್ತಿಯುಕ್ತವಾಗಿಯೂ ಬೋಧಿಸಿರುವದರಿಂದ ಈ ಮತಕ್ಕೆ ರಕ್ತವಿಶಿಷ್ಟಾದ್ವೈತವೆಂತಲೂ ಹೆಸರು ಪಚ್ಚಿದಾನಂದಸ್ವರೂಪವೂ ನಗಣವೈದಾಂತಾದಿ ಸಮಸ್ತ ಶಾಸ್ತ್ರಪ್ರತಿಪಾದ್ಯವೂ ಆದ ಪರಶಿವಪ್ರಮೇಯವು ಈ ಸಿದ್ಧಾಂತದಲ್ಲಿ ಶಕ್ತಿವಿಶಿಷ್ಟವಾಗಿ ವಿಂಬಜಿಸುತ್ತದೆ

ಶ್ವೇತಾತ್ಪೇತರ, ಕೈತ್ತಿರೀಯ, ಬೃಹದಾರಣ್ಯಕ ಯಜುರ್ವೇದ, ಋಗ್ವೇದ, ಈರೋಪನಿಷತ್ತು, ಹಂಸೋಪನಿಷತ್ತು, ಸಿದ್ಧಾಗಮ, ಮೃಗೇಂದ್ರಾಗಮ ಶಿವಸೂತ್ರ, ಬ್ರಹ್ಮಸೂತ್ರ, ಶಕ್ತಿಸೂತ್ರ, ಶಾಂಕರಭಾಷ್ಯ. ಕೇನೋಪನಿಷತ್ ಮೊದಲಾದ ಆರ್ಷ ಶ್ರುತಿವಾಕ್ಯಗಳು ಪರ ಶಿವನು ಶಕ್ತಿವಿಶಿಷ್ಟನೆಂದು ಘಂಟಾಘೋಷವಾಗಿ ಸಾರುತ್ತವೆ ಪರಶಿವನ ಜಗತ್ಕೃಷ್ಟಿಸ್ಥಿತಿಕಾರ್ಯದಲ್ಲಿ ಉಮಾಶಕ್ತಿಯಾಚ್ಛಿಳಾದ ಈ ಶಕ್ತಿಯು ಪರಶಿವನಲ್ಲಿ ಸಮವಾಯಸಂಬಂಧದಿಂದಿರುವ ಸಮವಾಯಿಭೂತಳಾಗಿದ್ದಾಳೆ ಎನ್ನುವದು " ಉಮಾಸಹಿತಾಯಾಂ ಪರಮೇಶ್ವರಾಯ ಪ್ರಭುಂ ' ಎಂಬ ಕೈವಲ್ಯೋಪನಿಷತ್ತಿನಿಂದ ತಿಳಿದು ಬರುತ್ತದೆ ಮಾಯಾವಾದಿಗಳು ಹೇಳುವಂತೆ ಪಡಿತ ಬ್ರಹ್ಮವೆ ನಿರ್ವಿಶೇಷವಾಗಿಲ್ಲ ಶಾಗೆ ನಿರ್ವಿಶೇಷ ಅಂದರೆ ಶಕ್ತಿರಹಿತವಾಗಿದ್ದಲ್ಲಿ ಬ್ರಹ್ಮಸೃಷ್ಟಿಸ್ಥಿರರ್ಣಕಾರ್ಯದಲ್ಲಿ ಅಸಮರ್ಥವಾಗಿ ಕೇವಲ ಜಡವಸ್ತುವಾಗಬೇಕಾಗಿದ್ದಿತು ಹಾಗಿರದ ಬ್ರಹ್ಮವು ಶಕ್ತಿಯುಕ್ತವಾಗುವದರಿಂದ ಚರಾಚರಪ್ರಪಂಚರಚನಾಸಾಮರ್ಥ್ಯವುಳ್ಳದಾಗಿದ ಹಾಲಿನಲ್ಲಿ ಬೆಣ್ಣೆಯೂ, ಎಳ್ಳಿನಲ್ಲಿ ಎಣ್ಣೆಯು ಕಬ್ಬಿನಲ್ಲಿ ಜೇಷವೂ, ಮಾದಲ್ಲಿ ಬೆಂಕಿಯೂ, ಪುನ್ನಲ್ಲಿ ಪರಿಮಳವೂ, ಬೀಜದಲ್ಲಿ ವೃಕ್ಷವೂ ಇರುವಂತೆ ಪರಶಿವಬ್ರಹ್ಮದಲ್ಲಿ ಶಕ್ತಿಯು ಅವಿನಾಭಾವಸಂಬಂಧದಿಂದ ಕೂಡಿರುವದು ಶಿವನನ್ನು ಬಿಟ್ಟು ಶಕ್ತಿಯೂ, ಶಕ್ತಿಯನ್ನು ಬಿಟ್ಟು ಶಿವನೂ ಇರುವದಿಲ್ಲ ಬೀಜವೃಕ್ಷನ್ಯಾಯದಂತೆ ಶಿವಶಕ್ತಿಯರು ಒಂದೇ ಆಗಿದ್ದರೂ ಸ್ವಮಾಯೆಯಿಂದ ಜಗದ್ರಚನಾ ಮತ್ತು ಉಪಾಸನಾಸೌಲಭ್ಯಕ್ಕಾಗಿ ದ್ವಿರೂಪವೈಭವನಧಾರಿಸ್ತಾರೆ. ಸೂಕ್ಷ್ಮದೃಷ್ಟಿಯಿಂದ ವಿಚಾರಿಸಿದಾದರೆ ಚೆರಾಚಾಡಾತ್ಮಕ ಜಗತ್ಕೃಷ್ಟಿಯು ಈ ಶಿವಶಕ್ತಿರೂಪವಾಗಿರುತ್ತದೆ. ಸೃಷ್ಟಿಯಲ್ಲಿರುವ ಸಮಸ್ತ ಪುಲ್ಲಿಂಗ ಪ್ರಾಣಿಗಳೆಲ್ಲವೂ ಶಿವಸ್ವರೂಪವಾಗಿರುತ್ತವೆ ಸ್ತ್ರೀಲಿಂಗ ಪ್ರಾಣಿಗಳೆಲ್ಲವೂ ಶಕ್ತಿಸ್ವರೂಪವಾಗಿರುತ್ತವೆ. ನೆನ್ನು ಕಣ್ಣಿಗೆ ಕಾಣುವ ಸ್ಥೂಲಪ್ರಪಂಚವೆಲ್ಲವೂ ಶಕ್ತಿಸ್ವರೂಪವಾಗಿದೆ. ಅನ್ನಕ್ಕ ಆಂದರೆ ಸೂಕ್ಷ್ಮ ಪ್ರಪಂಚತ್ವ ಶಿವಸ್ವರೂಪವಾಗಿದೆ ಚರಾಚರಪ್ರಪಂಚಕ್ಕೆ ಶಿವನು ಕಾರಣೀಭೂತನಾಗಿದ್ದರೆ ಶಕ್ತಿಯು ಕಾರ್ಯರೂಪವಾಗಿದೆ. ಶಕ್ತಿಯು ಧರ್ಮರೂಪವಾದರೆ ಶಿವನು ಧರ್ಮಿಯನಾಗಿದ್ದಾನೆ ಶಕ್ತಿಯು ಮಾಯೆಯೆಂದು ಹೇಳಿಸಿಕೊಂಡರೆ ಶಿವನು ಮಾಯೆಯೆಂದು ಹೇಳಿಸಿಕೊಳ್ಳುತ್ತಾನೆ ಶಿವನು ಪುರುಷರೂಪದಿಂದ ವಿರಾಜಿಸುತ್ತಿದ್ದರೆ ಶಕ್ತಿಯು ಸ್ತ್ರೀರೂಪದಿಂದ ವಿರಾಜಮಾನಳಾಗಿದ್ದಾಳೆ. ಶಿವನು ದಿವಾರೂಪವಾಗಿದ್ದರೆ ಶಕ್ತಿಯು ರಾತ್ರಿಯಾಗಿದ್ದಾಳೆ ಶಿವನು ಪುಷ್ಪವಾಗಿದ್ದಾನೆ. ಶಕ್ತಿಯು ಗಂಧವಾಗಿದ್ದಾಳೆ ಶಿವನು ನೇತ್ರರೂಪವಾಗಿದ್ದಾನೆ. ಶಕ್ತಿಯು ಶಾಸ್ತ್ರರೂಪವಾಗಿದ್ದಾಳೆ ಶಿವನು ವೈದ್ಯರೂಪವಾಗಿದ್ದರೆ ಶಕ್ತಿಯು ಲರಾಸ್ಥರೂಪವಾಗಿದ್ದಾಳೆ ಶಿವನು ಅರ್ಥವಾಗಿದ್ದರೆ ಶಕ್ತಿಯು ಅಕ್ಷರವಾಗಿದ್ದಾಳೆ ಶಿವನು ಉಕಾರಾಕಾರಗಾಗಿ ಲಿ ಗಸ್ವರೂಪವಾಗಿದ್ದರೆ ಶಕ್ತಿಯು ಲಿಂಗದ ಪಾಣಿಪೀರವಾಗಿದ್ದಾಳೆ ಶಿವನು ಆಕಾರರೂಪವಾಗಿದ್ದರೆ ಶಕ್ತಿಯು ಸೃಷ್ಟಿರೂಪವಾಗಿದ್ದಾಳೆ ಮಾನಸತರಂಗಾಂತರ್ಗತ ಜ್ಞಾನೇಂದ್ರಿಯಗಳು ಶಿವಸ್ವರೂಪವಾಗಿದ್ದರೆ ಶಕ್ತಿಯು ಕರ್ಮೇಂದ್ರಿಯಸ್ವರೂಪವಾಗಿದ್ದಾಳೆ ಶಿವನು ಆತ್ಮರೂಪನಾಗಿದ್ದರೆ ಶಕ್ತಿಯು ಬುದ್ಧಿಸ್ವರೂಪವಾಗಿದ್ದಾಳೆ ಶಿವನು ಜ್ಞಾನರೂಪದಿಂದ ಪ್ರಕಾಶಿಸಿದರೆ ಶಕ್ತಿಯು ವಿದ್ಯಾರೂಪದಿಂದ ಪ್ರಕಾಶಿಸುತ್ತಾಳೆ ಶಿವನು ಪಂಚಮಮುಖರ್ಭುಜಗಳಿಂದ ಕೂಡಿ ಲೀಲಾಪಾಂದರಾಕಾರರೂಪನಮನೆಸ್ಪರನಾಗಿ ವಿರಾಜಿಸಿದರೆ ಶಕ್ತಿಯು ತ್ರಿಭುವನ ಸುಂದರಿಯಾದ ಉಮಾದೇವಿಯಾಗಿ ವಿರಾಜಿಸುತ್ತಾಳೆ ಈ ರೀತಿ ಬ್ರಹ್ಮಾದಿ ಆಣು ಪರಿಯಂತರವಿರುವ ಚೇತನಾಚೇತನಪ್ರಪಂಚವೆಲ್ಲವು ಶಿವಶಕ್ತ್ಯಾತ್ಮಕವಾಗಿದೆ ಈ ಶಕ್ತಿಗೆ ಚಿದ್ರೂಪತಿಗಳು ಮಾಯೆಯೆಂದು ಹೇಳುತ್ತಾರೆ ಇದು ಸಂಗತಿವಲ್ಲ ಇವರು ಹೇಳುವಂತೆ ಶಿವಾಭಿನ್ನವಾದ ಈ ಶಕ್ತಿಯು ಮೂಲಾವಿದ್ಯರೂಪವಾಗುಯಾಗಿದರೆ ವಿಮರ್ಶರೂಪ ಮಾಯೆಯಾಗಿರುವದೆಂದು ತಿಳಿಯಬೇಕು ಈ ವಿಮರ್ಶ ಶಕ್ತಿಯೇ ಬ್ರಹ್ಮಸ್ಪಶ್ಚಿಂಗತ ಸಕಲ ವಸ್ತುಗಳ ಲಯಿಯಾ ವ್ಯಾಪಕವಾಗಿದೆ ಈ ಶಕ್ತಿಯೊಂದಿಲ್ಲದಿದ್ದರೆ ಸಮಸ್ತ ವಸ್ತುಗಳೂ ಅವಗಳಿಂತಾಗುವ ಶಿವನಿಗೂ ನೃರ್ಧಮಾಗುತ್ತಿದ್ದವು ಸಾಂಖ್ಯದರ್ಶನಕಾರ ಪ್ರಕೃತಿಯೆ ಸಮಸ್ತ ಸೂಲಸೂಕ್ಷ್ಮಪ್ರಪಂಚಸ್ವರೂಪವಾಗಿದ್ದರೂ ಈ ಪ್ರಕೃತಿಯು ವಿಮರ್ಶಶಕ್ತಿಯ ಸಹಸ್ರಾಂಶ ಗಳಲ್ಲಿ ಒಂದಂಶವಾಗಿದೆಯೆಂದು ತಿಳಿಯಬೇಕು

ಶಿವಶಕ್ತಿಯಿಂದುತ್ಪನ್ನವಾದ ಈ ಜಗತ್ತು ದ್ವಿವಿಧ ರೂಪವಾಗಿದೆ ಸಾಮಾನ್ಯವಾಗಿ ಹೇಳಬೇಕಾದರೆ ಈ ಶರೀರದಲ್ಲಿ ಕೈಗಳೆರಡು, ಕಾಲುಗಳೆರಡು, ಕಿವಿಗಳೆರಡು, ತುಟಿಗಳೆರಡು, ಮೂಗಿನ ಹೊರಳಿಗಳೆರಡು, ಜ್ಞಾನೇಂದ್ರಿಯಕರ್ಮೇಂದ್ರಿಯಗಳೆರಡು, ಮನೋಬುದ್ಧಿಗಳೆರಡು, ಚಿತ್ತ ಅಹಂಕಾರಗಳೆರಡು, ಜ್ಞಾನಶಕ್ತಿಜ್ಞಾನಗಳೆರಡು ಇದರಿಂದ ಸ್ಪಷ್ಟವಾಗಿ ಕೈಗಳೆರಡು, ಕಾಲುಗಳೆರಡು, ಕಿವಿಗಳೆರಡು, ತುಟಿಗಳೆರಡು, ಮೂಗಿನ ಹೊರಳಿಗಳೆರಡು, ಜ್ಞಾನೇಂದ್ರಿಯಕರ್ಮೇಂದ್ರಿಯಗಳೆರಡು, ಮನೋಬುದ್ಧಿಗಳೆರಡು, ಚಿತ್ತ ಅಹಂಕಾರಗಳೆರಡು, ಜ್ಞಾನಶಕ್ತಿಜ್ಞಾನಗಳೆರಡು ಇದರಿಂದ ಸ್ಪಷ್ಟವಾಗಿ ಕಂಡಿ ಸ್ಥೂಲಜಗತ್ತಿನಲ್ಲಿಯೂ ಸ್ತ್ರೀಪುರುಷ, ಸೂರ್ಯ ಚಂದ್ರ, ಹಗಲುರಾತ್ರಿ, ಇವು ಎರಡೆರಡು ಇರುತ್ತವಲ್ಲದೆ ವ್ಯವಹಾರದಲ್ಲಿಯೂ ಕೂಪಾ ಕೋರ್ಟಿನಲ್ಲಿ ಸಾಕ್ಷಿಗಳೆ ರಡು, ರದ್ದಕ್ಕೆ ಗಾಲಿಗಳೆರಡು ಎಲ್ಲಿನಲ್ಲಿ ವಿದ್ಯುತ್ ಪ್ರಕಾಶಪಡೆಕಾದರೆ ತಾರುಗಳೆರಡು, ದೀಪಕ್ಕೆ ಬತ್ತಿ ಗಳೆರಡು ಹೀಗೆ ಸರ್ವವಿಧದಲ್ಲಿಯೂ ಎರಡೆರಡು ಕಂಡು ಬರುತ್ತದ್ದಲ್ಲದೆ ಒಂದೆನ್ನುವದು ಎಲ್ಲಿಯೂ ಕಂಡುಬರುವದಿಲ್ಲ ಮತ್ತೊಂದು ವಿಪವಾಗಿ ಹೇಳಬೇಕಾದರೆ ಸ್ಥೂಲಪ್ರಪಂಚದ ಸರ್ವಾಂಗಗಳಲ್ಲಿಯೂ ದ್ವಿವಿಧವಾದ ಶಕ್ತಿಯು ಕಂಡುಬರುತ್ತದೆ ೧ ನೇದು ಆಕರ್ಷಣಶಕ್ತಿ, ೩ ನೇದು ವಿಕರ್ಷಣಶಕ್ತಿ, ಜಗತ್ಕೃಷ್ಟಿಸ್ಥಿತಿ ಮೂಲಭೂತವಾದ ಪರಮಾಣುವಿನಿಂದ ಹಿಡಿದು ಗ್ರಹ ಉಪಗ್ರಹ ಪರಿಯಂತರ ನೋಡಿದರೂ ಆಕರ್ಷಣ ಮತ್ತು ನಿಕರ್ಷಣ ಶಕ್ತಿಗಳ ಕಾರ್ಯವು ಕಂಡುಬರುತ್ತವೆ ಒಂದು ಪರಮಾಣು ತನ್ನ ಆಕರ್ಷಣಶಕ್ತಿಯಿಂದ ಸೃಷ್ಟಿಯ ಸಮಯದಲ್ಲಿ ಇನ್ನೊಂದು ಪರಮಾಣುವನ್ನು ತನ್ನ ಕಡೆಗೆ ಎಳೆದುಕೊಳ್ಳುತ್ತದೆ ಎರಡು ಕೂಡಿ ಒಂದು ವಸ್ತುವಿನ ರೂಪವನ್ನು ಹೊಂದುತ್ತಿದೆ ಇದಕ್ಕೆ ಆಕರ್ಷಣಶಕ್ತಿಯೆಂದು ಹೆಸರು ಜಗತ್ತು ಲಯವಾಗುವ ಪ್ರಸಂಗಬಂದಾಗ ಒಂದಕ್ಕೊಂದು ಕೂಡಿದ ವಸ್ತುವಿನ ರೂಪಾದ ಪರಮಾಣುಗಳು ಒಂದರಿಂದ ಒಂದು ದೂರ ಸಿಡಿದು ಬೇರೆ ಬೇರೆಯಾಗುವದೇ ವಿಕರ್ಷಣಶಕ್ತಿ ಯೆಂದು ಹೇಳಿಸಿಕೊಳ್ಳುತ್ತದೆ. ಆತಿ ಕಠಿಣವಿನಿಸುವ ಕಬ್ಬಿಣ, ಕಲ್ಲು, ವಜ್ರ ವೆಂದಲಾದವುಗಳು ಆನಂತಕೋಟಿ ಪರಮಾಣುಗಳ ಸಮೂಹದಿಂದ ಆದವುಗಳಿರುತ್ತವೆ. ಹೀಗೆ ಒಂದೊಂದು ಪರಮಾಣುಗಳು ಕ್ರಮವೀಣ ತಮ್ಮ ತಮ್ಮ ಆಕರ್ಷಣಶಕ್ತಿಯಿಂದ ಒಟ್ಟುಗೂಡಿ ಕಠಿಣ ಪದಾರ್ಥಗಳ ರೂಪವನ್ನು ಹೊಂದಿದಾಗ ಶಕ್ತಿಯು ರಾಜಸಾಮಸ್ಥಿಯನ್ನು ಹೊಂದಿರುತ್ತದೆ. ಯಾವ ಕಾಲಕ್ಕೆ ತಮ್ಮ ಆಕರ್ಷಣಶಕ್ತಿಯಿಂದ ಒಂದುಗೂಡಿ ರೂಪಾಂತರ ವನ್ನೈದಿ ಪರಮಾಣುಗಳು ವಿಕರ್ಷಣಶಕ್ತಿಯಾಧೀನ ವಾಗಿ ಒಂಡಕ್ಕೊಂದು ದೂರ ಸಿಡಿದು ಹೋಗಿ ಬೇರೆ ಬೇರೆ ಯಾಗಿ ತಾಮಸಾವಸ್ಥೆಯೆಂದು ಹೇಳಬಹುದು ಸಮಸ್ತ ಬ್ರಹ್ಮಾಂಡಗಳು ಆತ್ಯಂತಪ್ರಳಯ ಸೂರ್ಯ ಚಂದ್ರ, ಉಪಗ್ರಹ, ಉಪಗ್ರಹ, ನಕ್ಷತ್ರ, ಮೆಮುಷ್ಯ, ಪಶು, ಪಕ್ಷಿ, ದೇವ, ರಾಕ್ಷಸ, ಪರ್ವತ, ನಿಡ, ಮರ, ಔಷಧಿ ಮೊದಲಾದ ಚೇತನಾಚೇತನ ಪ್ರಾಣಿವರ್ಗವೆಲ್ಲವು ಶೇಷೋಮಯವಾದ ಆಪಂಚಕೋಟಿ ಪರಮಾಣುಗಳ ಆಕರ್ಷಣಶಕ್ತಿಯಿಂದುಂಟಾದವುಗಳಾಗಿರುತ್ತವೆ. ಪ್ರಳಯಕಾಲದಲ್ಲಿ ಪರಮಾಣುಸಮೂಹವು ವಿಕರ್ಷಣಶಕ್ತಿಯಾಧೀನವಾಗಿ ಪೃಥಕ್ ಪೃಥಕ್ಕಾಗಿ ಬಿಡುವದರಿಂದ ನಾಶವಾಗುತ್ತವೆ. ಆಂದರೆ ಆಕರ್ಷಣಶಕ್ತಿಯಿಂದುಂಟಾದ ರೂಪವನ್ನು ಕಳೆದುಕೊಂಡು ಪೂರ್ವವರ್ ಪರಮಾಣು ರೂಪವನ್ನು ಹೊಂದುತ್ತದೆ ಸರ್ವಜಗತ್ಕಿನ ಸೃಷ್ಟಿ, ಸ್ಥಿತಿ, ಸಂಹಾರ ಮೊದಲಾದ ಆಸಾಧಾರಣವಾದ ಮಾನವ ಬುದ್ಧಿಗೆ ಆಗೋಚರವಾದ ಕಾರ್ಯಶಕ್ತ್ಯತ್ಪತ್ತಿಯು ಮಹಾನ್ ಶಕ್ತಿಯು ಈ ಪರಮಾಣುಗಳಲ್ಲಿದೆ. ಈ ಆನಂತಕೋಟಿ ಪರಮಾಣುಸಮೂಹವೇಶಿತಾಂಂಡನೆಂದು ಹೇಳಿಸಿಕೊಳ್ಳುತ್ತದೆ ಇದೇ ವಿಷಯವನ್ನು " ಅಂಡೋ ನಾನಾವ್ಯಷ ದೇಶಾಶ್ ' " ಯಸ್ಮಿನ್ ಜೋತಿರ್ಗಣಾಃ ಸರ್ವೇ " ಎಂಬದಾಗಿ ಬ್ರಹ್ಮಸೂತ್ರ, ಸಿದ್ಧಾಗಮ ನೊದಲಾದ ಶೃತಿಗಳು ಮುಕ್ತಕಂಠದಿಂದ ಸಾರುತ್ತವೆ ಈ ವಿಷಯ ವಾಗಿ ಯುರೋಪಖಂಡದ ಪ್ರಾಚೀನ ವಾರ್ಶನಿಕರು ಆನೆಂತವಿಧವಾಗಿ ಚರ್ಚಿಸಿ ಕಡೆಗೆ ಬೇಸತ್ತು ನಾವು ನೇಲೆ ಹೇಳಿದ ಸಿದ್ಧಾಂತಕ್ಕೆ ಬಂದು ನಿಂತಿರುತ್ತಾರೆ ಇರಲಿ ನಾವು ಮೇಲೆ ವಿವರಿಸಿದ ದ್ವಿವಿಧರೂಪಗಳು ಜಗತ್ತಿನಲ್ಲಿ ಕಾರ್ಯ ರತ ಪ್ರಧಾನವಾಗಿರುವಂತೆ ಮಾನವನ ದೇಹದಲ್ಲಿಯೂ ಕೂಡಾ ಈ ಎರಡು ಶಕ್ತಿಗಳು ಜೀವನ ಕರ್ತವ್ಯನುಗುಣ್ಯವಾಗಿ ಆಕರ್ಷಣಶಕ್ತಿಯು ರಾಗ ನೆಂದೂ ವಿಕರ್ಷಣಶಕ್ತಿಯು ದ್ವೇಷವೆಂದೂ ಹೇಳಿಸಿಕೊಳ್ಳುತ್ತವೆ (ಮುಂದುವರಿಯುವುದು)

ರಾಷ್ಟ್ರಧ್ವಜ ಗೀತೆ

ಉತ್ಸಾಹ ರಗಳೆ

ಬಾವುಟವನು ಎರಿಸೇ । ಬಾವಿನಲ್ಲಿ ಹಾರಿಸೇ ॥೫॥ ಭೀತಿ ಭ್ರಾಂತಿಗಳನು ಬಿಟ್ಟು । ವೀರಮಲ್ಲಿ ಪೆಗಡವಿಟ್ಟು । ಪ್ರತಿಕವಚವನ್ನು ತೊಟ್ಟು । ಪ್ರಿಯತಿಗಾಗಿ ಹೆಮ್ಮೆಪಟ್ಟು ॥೧॥ ।ಸತ್ಯಶಾಂತಿದೇ ನೆಲೆಯು । ಸುಖವಿದರಿಪಾರೆ ಬೆಲೆಯು । ಶಕ್ತ್ಯವಿದರ ಪ್ರಾಣಲಲೆಯು । ಸಕ್ತ್ಯಸಾರ ಕಿವುಡೆ ಸೆಲೆಯು ॥೨॥ ಧೀರತನದಿ ಮುಂದೆ ಬಂದು । ವೀರಸೇನೆಯಲ್ಲಿ ನಿಂದು । ವೈರಿಕುಲವ ನಿಂದು ಕೊಂದು। ಭಾರತಕ್ಕೆ ಕೀರ್ತಿ ತಂದು ॥೩॥

ತಿಳಿವಿನೆ ತಿಳಿನೀರು

ಲಲಿತ ರಗಳೆ

ನಂಬಿಗೆಯ ಕೆಚ್ಚಿರಲಿ । ಮುಂಬರಿವ ಹುಚ್ಚಿರಲಿ ॥ ಮುಂದುವರಿವುದೆ ಬಾಳು । ಹಿಂದುವರಿವುದೆ ಬೀಳು ॥ ಹೋರುವನದೆ ಜೈತ್ರತ್ವ । ಕಾಯುವನಿರಲಾಯಾತ್ರ । ಕಾಯುವಲೆ ಕೈವಾಸ ॥೧॥ ಸಮಭಾವಿಯೇ ಯೋಗಿ । ವಿವಲ ಬುದ್ಧನು ತ್ಯಾಗಿ । ಆತ್ಮಶಕ್ತಿಯ ನೈದ್ದಿ । ಆತ್ಮಸುಖದ ಸನ್ಯಧ್ದಿ ॥ ಛಿನ್ನ ವಭ್ಯುದಿ ದೈವ್ಯತೆ । ತನ್ನೊಳಕುದೆವ್ಯತೆ ॥ ಜನಿಂತವೆ ನಿಜಧರ್ಮ । ಮಕ್ಕುಜಕ್ಕದಯದ ಧರ್ಮ ॥೩॥ ದೇವ ನೆನಿಬ್ಬನೆ ತಾನು । ಭಾವರೂಪವೊಳಕನು ॥ ಸುಚಿಯಗಳ ನಡೆಯಿರಲಿ । ನಡೆಯಗಳ ನುಡಿಯಿರಲಿ ॥ ಪೊಡವಿಯಲಿ ಮೇಲವನು । ಬಡು ಸಂಗಿಗವ ನೀನು॥೪॥ ಇಳೆಗೆ ದಯೆಗೈಯಭವ । ಛಲನಮಾತ್ಮವ ಬಲವ । ಕೊಳೆಯನಿಲ್ಲವ ತೊರೆದು । ಸಲಹು ನಿಖಿಲರ ಪಲಿದು ॥ ಮೂಢರೂಢಿಗಳಲ್ಲಿ । ಇಂದುಕಾಲುಗಳಾಗಿ ॥ ಮೂಡು ತಿದೆ ಪಾಡೊಳಗೆ । ಬಾಡದಿಹ ತಿಲಿವೆಳಗು ॥೫॥

ಶ್ರೀ ಬಾಲಬ್ರಹ್ಮಶ್ರೀ, ಮರಬ,
ಶ್ರೀಜಗದ್ಗುರು ವಿಶ್ವಾರಾಧ್ಯೇಣಾಶ್ರಮ,
ಬೈಲಹಲ್ಲಿರಿ

ವರ್ತಮಾನಸಂಗ್ರಹ

ಮಹಾಚುನಾವಣೆ

ಚುನಾವಣೆ ಸ್ಪೇಶ್ಯಗಳು ೨೨೯೩.
ಆರಿಸಲ್ಪಡಬೇಕಾದವರು ೪೪೧೩
ಓಟರುಗಳು ೧೭,೩೬,೦೦,೦೦೦
ಪೋಲಿಂಗ್ ಬೂತುಗಳು ೨೨,೪೦೦.

ಸಿಬ್ಬಂದಿ

ಅಧಿಕಾರಿಗಳು ೫೬,೦೦೦.
ಗುಮಾಸ್ತರು ೨,೪೦,೦೦೦.
ಪೋಲೀಸರು ೨,೨೪,೦೦೦.

ಚುನಾವಣೆ ಪ್ರಚಾರ

ಕಾಂಗ್ರೆಸ್ ಧ್ವಜವನ್ನು ಮಂತ್ರಿಗಳು ಬಳಸಬಾರದು

ಚುನಾವಣೆ ಪ್ರಚಾರಕ್ಕಾಗಿ ಕಾಂ॥ ಧ್ವಜವನ್ನು ಮಂತ್ರಿಗಳು ಉಪಯೋಗಿಸುವುದು ಅನೇಕ್ಷಣೀಯ ವಾದುದಲ್ಲ. ಅದನ್ನು ಪಡೆಗಟ್ಟುವೇಳ ಎಂಬುದಾಗಿ ಕಾಂಗ್ರೆಸ್ ಅಧ್ಯಕ್ಷರಾದ ಪಂ॥ ಜವಹರಲಾಲ್ ನೆಹ್ರೂ ರವರು ತಿಳಿಸಿದ್ದಾರೆ

ನಾಲ್ಕು ಮಂದಿ ಅರಸರು ಸ್ಪರ್ಧಿಸುವರು

ರಾಜಾಸ್ಥಾನದ ನಾಲ್ಕು ಮಂದಿ ಅರಸರು ಚುನಾವಣೆಗೆ ಸ್ಪರ್ಧಿಸುವರು. ಜೋಧ್‌ಪುರ ಅರಸರು, ಬಿಕಾನೇರ್ ಮಹಾರಾಜರು, ಧುಂಗಾಪುರ ಮತ್ತು ಕರೌಲಿ ಅರಸರು ಲೋಕಸಭೆಗೆ ನಿಲ್ಲಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

೪೫೦ ಸ್ಥಾನಕ್ಕೆ ೨॥ ಸಹಸ್ರ ಮಂದಿ ಅರ್ಜಿ

ಮದ್ರಾಸ್, ಪ್ರಾಂತದ ಶಾಸನ ಸಭೆಯ ೩೭೫ ಸ್ಥಾನಗಳು ಮತ್ತು ಕೇಂದ್ರ ಪಾರ್ಲಮೆಂಟಿನ ೭೫ ಸ್ಥಾನಗಳಿಗೂ ಒಟ್ಟು ೨॥ ಸಹಸ್ರ ಮಂದಿ ಉಮೇದುವಾರಿಕೆ ಅರ್ಜಿ ಸಲ್ಲಿಸಿದ್ದಾರೆ

ಹಿಮಾಚಲದಲ್ಲಿ ಕಾಂಗ್ರೆಸ್ಸಿಗೆ ಸೋಲು

ಹಿಮಾಚಲ ಪ್ರದೇಶದಲ್ಲಿ ನಡೆದ ಮಹಾಚುನಾವಣೆಯಲ್ಲಿ ೪೯ ಸ್ಥಾನಕ್ಕೆ ೩೧ ಕಾಂಗ್ರೆಸ್ಸಿಗರೂ, ೩೧ ಕೆ. ಎಂ ಪಿ ಪಕ್ಷದವರೂ, ೯ ಹಿಂದುಳಿದ ಪಕ್ಷದವರೂ, ೯ ಜನ ಸಂಘದವರೂ, ೫ ಸೋಷಲಿಸ್ಟ್ ಪಕ್ಷದವರೂ, ಒಬ್ಬರು ರಾಮರಾಜ್ಯ ಪರಿಷತ್ ಮತ್ತು ಒಬ್ಬರು ಹಿಂದೂಮಹಾ ಸಭೆಯವರು ಚುನಾಯಿತರಾಗಿದ್ದಾರೆ

ಭಾರತವು ಅನುಭವಿಸುವ ದುಃಖಕ್ಕೆ ಕಾಂಗ್ರೆಸ್ಸೇ ಮೂಲ

ಸಿಪ್ ನಾಯಕರಾದ ಶ್ರೀ ಮಾಸರ್ ತಾರಾಸಿಂಗರು ಲಕ್ನೋದಲ್ಲಿ ಮಾತನಾಡುತ್ತಾ ' ಪೂರ್ವಪಂಜಾಬಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಪಕನವಾಗುವುದು ಖಂಡಿತ. ಕಾಂಗ್ರೆಸ್ಸನ್ನು ನಿರ್ನಾಮ ಮಾಡಲು ಸಿಕ್ಖರೆಲ್ಲ ಬದ್ಧ ಕಂಕಣರಾಗಬೇಕು. ದೇಶದಲ್ಲಿ ಅನುಭವಿಸುವ ಮುಖ್ಯ ಗಳಿಗೆಲ್ಲಾ ಕಾಂಗ್ರೆಸ್ಸೇ ಮೂಲ, ಕಾಂಗ್ರೆಸ್ಸಿನವರಂಥ ದೇಶದ್ರೋಹಿಗಳು ಮತ್ತಾರು ಇಲ್ಲ ಅವರಿಗಾಗಿ ದೇಶವನ್ನು ಬಲಿಕೊಡಬಾರದು ' ಎಂದು ನುಡಿಸಿದರು.

